ಅಖಿಲ ಭಾರತ ಪತ್ರಿಕೆ

ಅಕ್ಟೋಬರ್ 2017



# ಸುಂದರವಾದ ಜೀವನದತ್ತ

(ಭಾಗ II)

ಬೆಲೆ : 15/-



*The divine Grace alone shall be our support.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

# "ಸುಂದರವಾದ ಜೀವನದತ್ತ"

### ಭಾಗ – II
### ಸುಂದರವಾದ ಜೀವನ: ಆವಶ್ಯಕವಾದ ವಿಷಯಗಳು

**ಅನು: ಡಾ. ಕೆ.ಎಸ್. ಆಮೂರ**

| | |
|---|---|
| ತನ್ನಲ್ಲಿಯೇ ಇರುವ ಮನುಷ್ಯನ ನಂಬಿಕೆ | 4 |
| ಧೈರ್ಯ | 8 |
| ಪಟ್ಟುಹಿಡಿಯುವಿಕೆ | 12 |
| ದೈವೀ ಶಕ್ತಿಯಲ್ಲಿ ನಂಬಿಕೆ | 18 |
| ವಿನಮ್ರತೆ | 21 |
| ಔದಾರ್ಯ | 24 |
| ಕೃತಜ್ಞತೆ | 29 |
| ಗ್ರಹಣಶಕ್ತಿ | 35 |
| ಸರಳತೆ | 36 |

### ಭಾಗ – III
### ಸುಂದರವಾದ ಜೀವನ: ಸಾಧನೋಪಕರಣಗಳು

**ಅನು: ಡಾ. ಕೆ.ಎಸ್. ಆಮೂರ**

| | |
|---|---|
| ಮನುಷ್ಯ ತನಗೆ ತಾನೇ ಕತೆಗಳನ್ನು ಹೇಳಿಕೊಳ್ಳುವುದು | 41 |
| ನಿಮ್ಮನ್ನು ನೀವೇ ಸಂಘಟಿಸಿಕೊಳ್ಳಿರಿ | 45 |
| ಏಕೈಕ ಉಪಾಯ | 49 |
| **ಅನು: ಶ್ರೀ ಪುರುಷೋತ್ತಮ ಗಲಗಲಿ** | |
| ಜೀವನದ ಉದ್ದೇಶ | 53 |
| ಸಾಮರಸ್ಯವಿರುವ ಸಾಮುದಾಯಿಕ ಗುಣದತ್ತ | 58 |
| **ಅನು: ಡಾ. ಬಿ.ಆರ್.ಭೀಡ** | |
| ಸಂಬಂಧಪಟ್ಟಿರುವಿಕೆಗಳ ಆಳಾತಿ ಆಳದ ಅರ್ಥ | 60 |
| ನಿಜವಾದ ಆವಶ್ಯಕತೆ | 64 |
| **ವಾರ್ತಾಪತ್ರ** | 68 |



ಕಳೆದುಹೋದ ಜಗತ್ತಿನ ಆನಂದ ಪರವಶತೆಯೊಂದು ಅವರ
ಕಣ್ಣುಗಳಲಿ ಕಾಲಹರಣ ಮಾಡುತಿಹುದು,
ಅವರ ಚಿತ್ತಸ್ಥಿತಿಗಳು ದೈವೀ ಅನಂತದ ಮುಖಗಳು:
ಸೌಂದರ್ಯ ಹಾಗೂ ಸಂತೋಷ ಅವರ ಸಹಜ ಹಕ್ಕು,
ಹಾಗೂ ಕೊನೆಯಿರದ ದಿವ್ಯಾನಂದ ಅವರ ಶಾಶ್ವತ ನಿವಾಸ.

**CWSA, 33/118** **– ಶ್ರೀ ಅರವಿಂದರು**

*

## ಭಾಗ - II

## ಸುಂದರವಾದ ಜೀವನ: ಆವಶ್ಯಕವಾದ ವಿಷಯಗಳು

ಕುರೂಪವಾದ ವಸ್ತು–ವಿಷಯಗಳ ಚಿತ್ರಗಳನ್ನು ಪುಸ್ತಕಗಳಲ್ಲಿ ಮನುಷ್ಯ ಕೊಡದೆ ಇದ್ದಾಗಲೂ ಜಗತ್ತಿನಲ್ಲಿ ಅವು ಸಾಕಷ್ಟಿವೆ ಎಂದು ನೀವು ಯೋಚಿಸುತ್ತೀರಾ? ಇದು, ಯಾವಾಗಲೂ, ನಾನು ಚಿಕ್ಕವಳಾಗಿದ್ದಾಗಿಂದಲೂ ಆಶ್ಚರ್ಯವನ್ನುಂಟು ಮಾಡುವ ಏನೋ ಒಂದಾಗಿತ್ತು– ಜೀವನ ಎಷ್ಟೊಂದು ಕುರೂಪವಾಗಿದೆ, ಎಷ್ಟೊಂದು ತುಚ್ಛ, ದುಃಖದಾಯಕ, ಕೆಲ ಸಮಯಗಳಲ್ಲಿ ಜುಗುಪ್ಸೆ ತರಿಸುವ ವಸ್ತು–ವಿಷಯಗಳಿಂದ ತುಂಬಿಕೊಂಡಿದೆ, ಹಾಗಿದ್ದಾಗಲೂ ಈಗಾಗಲೆ ಅಲ್ಲಿರುವುದಕ್ಕಿಂತ ಇನ್ನೂ ಹೆಚ್ಚು ಕೆಟ್ಟ ವಸ್ತು–ವಿಷಯಗಳನ್ನು ಕಲ್ಪನೆ ಮಾಡಿಕೊಳ್ಳುವುದರ ಉಪಯೋಗವೇನು?

ನೀವು ಹೆಚ್ಚು ಸುಂದರವಾದ ಏನನ್ನೋ, ಹೆಚ್ಚು ಸುಂದರ ಜೀವನವನ್ನು, ಕಲ್ಪನೆ ಮಾಡಿಕೊಂಡರೆ, ಅದು ತೊಂದರೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿರುತ್ತದೆ.

ಕುರೂಪದವಾಗಿರುವ ವಿಷಯಗಳನ್ನು ಬರೆಯುವುದರಲ್ಲಿ ಹರ್ಷ ಕಂಡು–ಕೊಳ್ಳುವ ಜನರು ತಮ್ಮ ಮನಸ್ಸಿನ ಭವ್ಯ ಬಡತನವನ್ನು ತೋರಿಸಿಕೊಡುತ್ತಾರೆ. ಸಂವೇದನಾತ್ಮಕ ಘಟನೆಯೊಂದರಿಂದ ಇಲ್ಲವೆ ಅನಾಹುತವೊಂದರಿಂದ ಮುಕ್ತಾಯಗೊಳ್ಳುವ ಒಂದು ಕತೆಯನ್ನು ಬರೆಯುವುದಕ್ಕಿಂತ ಪ್ರಾರಂಭದಿಂದ ಕೊನೆಯವರೆಗೆ ಸುಂದರವಾಗಿರುವ ಒಂದು ಕತೆಯನ್ನು ಬರೆಯುವುದು ಅನಂತಪಟ್ಟು ಕಠಿಣವಾದದ್ದು. ಅನೇಕ ಲೇಖಕರು ಸಂತೋಷದಿಂದ, ಸುಂದರವಾಗಿ ಕೊನೆಗೊಳ್ಳುವ ಒಂದು ಕತೆಯನ್ನು ಬರೆಯಬೇಕಾಗಿದ್ದರೆ, ಅವರು ಅದನ್ನು ಕೈಕೊಳ್ಳಲಾರರು– ಅದಕ್ಕೆ ಅವಶ್ಯವಾದ ಸಾಕಷ್ಟು ಕಲ್ಪನೆ ಅವರಲ್ಲಿರುವುದಿಲ್ಲ. ಅತಿ ಕಡಿಮೆ ಕತೆಗಳು ಉನ್ನತಮಟ್ಟಕ್ಕೇರಿಸುವ ಕೊನೆಯಿರುವುದನ್ನು ಹೊಂದಿರುತ್ತವೆ– ಅದಕ್ಕೆ ಒಂದು ಸರಳ ಕಾರಣವಿದೆ, ಮೇಲಕ್ಕೇರುವುದಕ್ಕಿಂತ ಪತನಗೊಳ್ಳುವುದು ಹೆಚ್ಚು ಸುಲಭವಾಗಿರುತ್ತದೆ. ಶ್ರೇಷ್ಠತೆಯನ್ನು ಹಾಗೂ ಭವ್ಯತೆಯನ್ನು ಗಮನಕ್ಕೆ ತರುವಂತೆ, ಕತೆಯಲ್ಲಿ ಬರುವ ನಾಯಕ ಪ್ರತಿಭಾವಂತನಾಗಿರುವಂತೆ, ತನ್ನನ್ನೇ ಮೀರಿ ಹೋಗಲು ಅರಸುತ್ತಿರುವಂತೆ ಕತೆಯನ್ನು ಮುಕ್ತಾಯಗೊಳಿಸುವುದು ಅತಿ ಹೆಚ್ಚು ಕಠಿಣವಾದದ್ದು, ಏಕೆಂದರೆ ಅದಕ್ಕಾಗಿ ಮನುಷ್ಯ ತಾನೇ ಸ್ವತಃ ಪ್ರತಿಭಾವಂತನಾಗಿರಬೇಕಾಗುತ್ತದೆ, ಇದನ್ನು ಪ್ರತಿಯೊಬ್ಬರಿಗೂ ಕೊಡಮಾಡಿಲ್ಲ.

**CWM, 4/155** – **ಶ್ರೀಮಾತೆ**

*

## ತನ್ನಲ್ಲಿಯೇ ಇರುವ ಮನುಷ್ಯನ ನಂಬಿಕೆ

ಮನುಷ್ಯನಿಗೆ ಅವನಲ್ಲಿಯೇ ನಂಬಿಕೆಯನ್ನು, ಅವನ ವಿಚಾರಗಳನ್ನು ಹಾಗೂ ಅವನ ಸಾಮರ್ಥ್ಯವನ್ನು ಕೊಡಲಾಗಿದೆ, ಅದರಿಂದಾಗಿ ಅವನು ಕಾರ್ಯಕೈಕೊಳ್ಳುವಂತಾಗುವುದು, ಸೃಷ್ಟಿಸುವಂತಾಗುವುದು ಮತ್ತು ಶ್ರೇಷ್ಠತರ ವಿಷಯಗಳತ್ತ ಮೇಲಕ್ಕೇರಿ ಹೋಗುವಂತಾಗುವುದು ಮತ್ತು ಕೊನೆಗೆ ದಿವ್ಯಾತ್ಮನ ವೇದಿಕೆಗೆ ತನ್ನ ಬಲವನ್ನು ಯೋಗ್ಯವಾದ ಅರ್ಪಣೆ ಎಂದು ತರುವಂತಾಗುವುದು. ಈ ಆತ್ಮವನ್ನು ದುರ್ಬಲರಿಂದ ಗೆದ್ದುಕೊಳ್ಳಲಾಗುವುದಿಲ್ಲ ಎಂದು ಶಾಸ್ತ್ರ ಹೇಳುತ್ತದೆ: 'ನಾಯಮಾತ್ಮಾ ಬಲಹೀನೇನ ಲಭ್ಯಃ...' ದುರ್ಬಲಗೊಳಿಸುವ ಸ್ವ–ಅವಿಶ್ವಾಸವನ್ನು ಹಾಗೂ ನಮ್ಮ ಬಲವಿರುವುದರ ಬಗ್ಗೆ ಸಂಶಯವನ್ನು ಎದೆಗುಂದಿಸಬೇಕು, ಏಕೆಂದರೆ ಅದು ನಿರ್ವೀಯತೆಗೆ, ದೌರ್ಬಲ್ಯ ಕುರಿತು ಒಂದು ಕಲ್ಪನೆಗೆ ಮತ್ತು ಆತ್ಮದ ಸರ್ವಸಾಮರ್ಥ್ಯದ ನಿರಾಕರಣೆಗೆ ಮಿಥ್ಯಾ ಒಪ್ಪಿಗೆ ಕೊಡುವುದಾಗಿರುತ್ತದೆ. ಸದ್ಯದ ಅಸಾಮರ್ಥ್ಯ, ಅದರ ಒತ್ತಡ ಭಾರವಾಗಿದೆಯೆಂದು ತೋರಿಬಂದಾಗಲೂ ಅದು ಕೇವಲ ನಂಬಿಕೆಯ ಒಂದು ಪರೀಕ್ಷೆಯಾಗಿರುತ್ತದೆ ಮತ್ತು ತಾತ್ಕಾಲಿಕ ತೊಂದರೆ ಮತ್ತು ಅಶಕ್ತತೆಯ ಭಾವನೆಗೆ ಶರಣಾಗುವುದು ಸಮಗ್ರ ಯೋಗವನ್ನು ಅರಸುವವನಿಗೆ ಅರ್ಥಹೀನವಾಗುತ್ತದೆ, ಏಕೆಂದರೆ ಅವನ ಗುರಿ ಈಗಾಗಲೆ ಅವನ ಸತ್ತೆಯಲ್ಲಿ ಸುಪ್ತವಾಗಿರುವ ಪರಿಪೂರ್ಣತೆಯನ್ನು ಅಭಿವೃದ್ಧಿಪಡಿಸುವು–ದಾಗಿರುತ್ತದೆ, ಏಕೆಂದರೆ ಮನುಷ್ಯ ತನ್ನಲ್ಲಿ, ತನ್ನದೇ ಆತ್ಮದಲ್ಲಿ ದೈವೀ ಜೀವನದ ಬೀಜವನ್ನು ಕೊಂಡೊಯ್ಯುತ್ತಾನೆ, ಪ್ರಯತ್ನದಲ್ಲಿ ಯಶಸ್ಸಿನ ಸಾಧ್ಯತೆಯನ್ನು ಒಳಗೊಳ್ಳಲಾಗಿರುತ್ತದೆ, ಸೂಚಿಸಲಾಗಿರುತ್ತದೆ, ಏಕೆಂದರೆ ಕರೆಕೊಡುವಿಕೆ ಮತ್ತು ಮಾರ್ಗದರ್ಶನದ ಹಿಂದೆ ಸರ್ವಸಮರ್ಥ ಸಾಮರ್ಥ್ಯವಿರುತ್ತದೆ. ಅದೇ ಕಾಲಕ್ಕೆ ಮನುಷ್ಯ ತನ್ನಲ್ಲಿರುವ ಈ ನಂಬಿಕೆಯನ್ನು ರಾಜಸಿಕ ಅಹಂಕಾರ ಮತ್ತು ಆಧ್ಯಾತ್ಮಿಕ ಅಭಿಮಾನ ಇವುಗಳ ಸ್ಪರ್ಶವಾಗದಂತೆ ಪರಿಶುದ್ಧಗೊಳಿಸಬೇಕು.

ಸಾಧಕ ತನ್ನ ಬಲ ಅಹಂಕಾರದ ಅರ್ಥದಲ್ಲಿ ತನ್ನದೇ ಅಲ್ಲ, ಆದರೆ ಅದು ವಿಶ್ವಂಭರ ದೈವೀ ಶಕ್ತಿಯದು ಮತ್ತು ಅದರ ಅಹಂಕಾರದ ಉಪಯೋಗ ಸೀಮಿತತೆಗೆ ಕಾರಣವಾಗುತ್ತದೆ ಹಾಗೂ ಕೊನೆಗೆ ಒಂದು ಅಡೆತಡೆಯಾಗುತ್ತದೆ ಎಂಬುದನ್ನು ಅವನು ತನ್ನ ಮನಸ್ಸಿನಲ್ಲಿ ಸಾಧ್ಯವಿದ್ದಷ್ಟು ಕಾಪಾಡಿಕೊಂಡು ಬರಬೇಕು. ಅಭೀಪ್ಸೆಯ ಹಿಂದಿರುವ ವಿಶ್ವಂಭರ ದೈವೀಶಕ್ತಿಯ ಸಾಮರ್ಥ್ಯ ಅಪರಿಮಿತವಾಗಿದೆ ಮತ್ತು ಅದಕ್ಕೆ ಸರಿಯಾದ ಕರೆಕೊಟ್ಟಾಗ ಅದು ನಮ್ಮಲ್ಲಿ

ಸುರಿಯಲು ವಿಫಲವಾಗುವುದಿಲ್ಲ ಮತ್ತು ಈಗ ಇಲ್ಲವೆ ನಂತರ ಯಾವುದೇ ಬಗೆಯ ಅಶಕ್ತತೆಯನ್ನು ಹಾಗೂ ಅಡೆತಡೆಯನ್ನು ತೆಗೆದು ಹಾಕುತ್ತದೆ; ನಮ್ಮ ಹೋರಾಟದ ಸಮಯಗಳು ಹಾಗೂ ಅವಧಿಗಳು ಮೊದಲು ಉಪಕರಣ ರೂಪದಲ್ಲಿ ಹಾಗೂ ಭಾಗಶಃ ನಮ್ಮ ಪ್ರಯತ್ನ ಹಾಗೂ ನಂಬಿಕೆ ಇವುಗಳ ಮೇಲೆ ಅವಲಂಬಿಸಿದ್ದರೂ ಅಂತಿಮವಾಗಿ ಜಾಣತನದಿಂದ ನಿರ್ಧರಿಸುವ ರಹಸ್ಯ ದಿವ್ಯಾತ್ಮನ ಹಸ್ತಗಳಲ್ಲಿರುತ್ತವೆ, ಈ ದಿವ್ಯಾತ್ಮ ಯೋಗದ ಪ್ರಭು, ಈಶ್ವರನಾಗಿದ್ದಾನೆ.

**CWSA, 24/779–80** **– ಶ್ರೀ ಅರವಿಂದರು**

*

ನಾವು ಯಾವಾಗಲೂ ನಮ್ಮನ್ನು ಭವ್ಯ ಲೋಲುಪತೆಯಿಂದ ಭಾವನೆಗೆ ತಂದುಕೊಳ್ಳುತ್ತೇವೆ ಎಂದು ಇದೀಗ ನಾನು ಹೇಳಿದೆ, ವಾಸ್ತವದಲ್ಲಿ ನಮ್ಮ ದೋಷಗಳು ಬಹಳಷ್ಟು ಸಲ ನಮಗೆ ಮೋಹಕತೆಯಿಂದ ತುಂಬಿಕೊಂಡ ಹಾಗೆ ತೋರಿಬರುತ್ತವೆ ಮತ್ತು ನಾವು ನಮ್ಮ ಎಲ್ಲ ದೌರ್ಬಲ್ಯಗಳನ್ನು ಸಮರ್ಥಿಸಿಕೊಳ್ಳುತ್ತೇವೆ ಎಂದು ನನಗನಿಸುತ್ತದೆ. ನಿಜ ಹೇಳುವುದಾದರೆ ಇದು ಹೀಗೇಕೆ ಆಗುತ್ತದೆಂದರೆ ನಮ್ಮಲ್ಲಿ ಸ್ವ–ಗಾಢನಂಬಿಕೆಯ ಕೊರತೆ ಇರುತ್ತದೆ. ಇದು ನಿಮಗೆ ಆಶ್ಚರ್ಯ–ವನ್ನುಂಟು ಮಾಡುತ್ತದೆಯೆ?

ಹೌದು, ನಮ್ಮಲ್ಲಿ ಗಾಢ ನಂಬಿಕೆಯ ಕೊರತೆ ಇದೆ ಎಂದು ನಾನು ಪುನರಾವರ್ತಿಸಿ ಹೇಳುತ್ತೇನೆ, ಆ ಕೊರತೆ ಸದ್ಯದ ಕ್ಷಣದಲ್ಲಿ ನಾವೇನಾಗಿರುವೆವೋ ಅದರಲ್ಲಲ್ಲ, ಅಲ್ಪಾಯುಸ್ಸಿನ, ಎಂದೆಂದಿಗೂ ಬದಲಾಗುತ್ತಿರುವ ಬಾಹ್ಯ ಸತ್ತೆಯಲ್ಲಲ್ಲ– ಈ ಸತ್ತೆ ಯಾವಾಗಲೂ ನಿಮ್ಮ ಕಣ್ಣುಗಳಲ್ಲಿ ಮೆಚ್ಚಿಕೆ ಕಂಡುಕೊಳ್ಳುತ್ತದೆ, ಆದರೆ ನಾವು ಪ್ರಯತ್ನದ ಮೂಲಕ ಏನಾಗಬಲ್ಲೆವೋ ಎಂಬುದರಲ್ಲಿ ಗಾಢ ನಂಬಿಕೆಯ ಕೊರತೆ ಇದೆ, ಸಮಗ್ರ ಹಾಗೂ ಗಾಢ ಪರಿವರ್ತನೆಯಲ್ಲಿ ನಮಗೆ ನಂಬಿಕೆ ಇರುವುದಿಲ್ಲ, ಆ ಪರಿವರ್ತನೆ ನಮ್ಮ ನಿಜವಾದ ಆತ್ಮದ, ಸನಾತನನ, ಎಲ್ಲ ಸತ್ತೆಗಳಲ್ಲಿಯೂ ಇರುವ ಭಗವಂತ ಇವರೆಲ್ಲರ ಕಾರ್ಯವಾಗಿರುತ್ತದೆ, ಆ ಕಾರ್ಯ ಜರುಗಬೇಕಾದರೆ ನಾವು ಮಕ್ಕಳ ರೀತಿಯಲ್ಲಿ ಅದರ ಪರಮೋಚ್ಚ, ಪ್ರಕಾಶಮಯ ಮತ್ತು ದೂರದೃಷ್ಟಿಯಿರುವ ಮಾರ್ಗದರ್ಶನಕ್ಕೆ ಶರಣಾಗಬೇಕು ಸ್ವ–ಸಂತುಷ್ಟಿ ಗಾಢನಂಬಿಕೆ ಎಂದು ಗೊಂದಲಕ್ಕೊಳಗಾಗುವುದು ಬೇಡ.

**CWM, 2/24** **– ಶ್ರೀಮಾತೆ**

*

**ಪ್ರಶ್ನೆ:** *ನೀವು 'ಬಹಳ ಹಿಂದಿನ ಕಾಲದ ಶಬ್ದಗಳು'* (words of long ago) *ಪುಸ್ತಕದಲ್ಲಿ ಬರೆದದ್ದು ಹೀಗಿದೆ: ನಮ್ಮಲ್ಲಿ ಸ್ವ–ಗಾಢನಂಬಿಕೆಯ ಕೊರತೆಯಿದ್ದಾಗ, ನಾವು ನಮ್ಮ ಎಲ್ಲ ದೌರ್ಬಲ್ಯಗಳನ್ನು ಸಮರ್ಥಿಸಿಕೊಳ್ಳುತ್ತೇವೆ. ನಾವು ಇದನ್ನೇಕೆ ಕೈಕೊಳ್ಳುತ್ತೇವೆ.*

**ಶ್ರೀಮಾತೆ:** ಹಾಗಾಗಿ! ನಾವು ನಮ್ಮ ಎಲ್ಲ ದೌರ್ಬಲ್ಯಗಳನ್ನು ಸಮರ್ಥಿಸಿಕೊಳ್ಳುತ್ತೇವೆ? ಅದು ಸಕಾರಾತ್ಮಕ ಬಯಕೆಯಲ್ಲ. ದೈವೀಕೃಪೆ ನಮಗಾಗಿ ಏನು ಮಾಡಬಲ್ಲದು ಎಂಬುದರಲ್ಲಿ ಗಾಢನಂಬಿಕೆ ಇಲ್ಲದಿರುವುದರ ಕೊರತೆ. ಮನುಷ್ಯ ತನ್ನ ದೌರ್ಬಲ್ಯವನ್ನು ಸಮರ್ಥಿಸಿಕೊಳ್ಳುವುದು ಒಂದು ಬಗೆಯ ಆಲಸ್ಯ ಹಾಗೂ ಜಡತ್ವ.

ಸರಿ, ಮನುಷ್ಯ ತನ್ನನ್ನು ತಿದ್ದಿಕೊಳ್ಳಲು ಪ್ರಯತ್ನ ಮಾಡುವುದನ್ನು ಬಯಸದಿದ್ದರೆ, ಅವನು ಹೇಳುತ್ತಾನೆ: "ಓಹ್ ಅದು ಅಸಾಧ್ಯ, ನಾನದನ್ನು ಕೈಕೊಳ್ಳಲಾರೆ, ನನ್ನಲ್ಲಿ ಬಲವಿಲ್ಲ, ನನ್ನನ್ನು ಅಂತಹ ದ್ರವ್ಯದಿಂದ ಮಾಡಲಾಗಿಲ್ಲ, ಅವಶ್ಯವಾದ ಗುಣಲಕ್ಷಣಗಳು ನನ್ನಲ್ಲಿಲ್ಲ, ನಾನೆಂದಿಗೂ ಅದನ್ನು ಕೈಕೊಳ್ಳಲಾರೆ" ಅದು ಪರಿಪೂರ್ಣ ಆಲಸ್ಯ, ಅದು ಅವಶ್ಯವಾಗಿರುವ ಪ್ರಯತ್ನವನ್ನು ತಪ್ಪಿಸಿಕೊಳ್ಳುವು–ದಕ್ಕಾಗಿರುತ್ತದೆ. ನಿಮಗೆ ಪ್ರಗತಿ ಸಾಧಿಸಿರಿ ಎಂದು ಹೇಳಿದಾಗ: "ಅದು ನನ್ನ ಸಾಮರ್ಥ್ಯದಾಚೆಗಿದೆ, ನಾನು ಬಡಪ್ರಾಣಿ, ನನಗೇನನ್ನೂ ಕೈಕೊಳ್ಳಲಾಗುವುದಿಲ್ಲ!" ಎಂದು ಹೇಳುತ್ತೀರಿ. ಅಷ್ಟೇ. ಅದು ಬಹುಮಟ್ಟಿಗೆ ದುಷ್ಟ ಸಂಕಲ್ಪ. ಅದು ಅತಿಯಾದ ಆಲಸ್ಯತನ, ಯಾವ ಪ್ರಯತ್ನವನ್ನೂ ಮಾಡಲು ನಿರಾಕರಿಸುವು–ದಾಗಿದೆ. ಮನುಷ್ಯ ತನ್ನ ಎಲ್ಲ ದೋಷಗಳನ್ನು ಮತ್ತು ಅಸಮರ್ಥತೆಗಳನ್ನು ಒಪ್ಪಿಕೊಳ್ಳುತ್ತಾನೆ, ಅದರಿಂದಾಗಿ ಅವುಗಳ ಮೇಲೆ ಜಯ ಸಾಧಿಸಲು ಅವಶ್ಯವಾದ ಪ್ರಯತ್ನವನ್ನು ಮಾಡುವ ಕಾರಣವಿರುವುದಿಲ್ಲ. ಮನುಷ್ಯ ಹೇಳುತ್ತಾನೆ: "ನಾನು ಹಾಗಿದ್ದೇನೆ, ಬೇರೆ ಯಾರೋ ಆಗಲು ಸಾಧ್ಯವಿಲ್ಲ!" ಅದು ದೈವೀ ಕೃಪೆ ನಿಮ್ಮಲ್ಲಿ ಕಾರ್ಯಮಾಡಲು ಅನುವು ಮಾಡಿಕೊಡುವುದನ್ನು ನಿರಾಕರಿಸುವುದಾಗಿದೆ. ಅದು ನಿಮ್ಮದೇ ದುಷ್ಟ ಸಂಕಲ್ಪದ ಸಮರ್ಥನೆ.

**CWM, 6/267** **– ಶ್ರೀಮಾತೆ**

*

ತಮ್ಮ ಕಾಲಮೇಲೆ ತಾವು ನಿಲ್ಲಬಲ್ಲ ಜನರಿರುತ್ತಾರೆ. ಅವರೊಂದು ಕಾರ್ಯ ಕೈಕೊಳ್ಳುತ್ತಾರೆ, ಏಕೆಂದರೆ ಅದನ್ನು ಕೈಕೊಳ್ಳುವುದು ಒಳ್ಳೆಯದೆಂದು

ಕಂಡುಕೊಂಡಿರುತ್ತಾರೆ. ಗುಲಾಮರಾಗಿರುವ ಇತರ ಜನರಿರುತ್ತಾರೆ. ತಾವು ಕೈಕೊಂಡದ್ದಕ್ಕೆ, ಯಾವಾಗಲೂ, ಸಾಮಾಜಿಕ ಇಲ್ಲವೆ ಅಧಿಕೃತ ವರ್ಗದ ಗುರುತಿಸುವಿಕೆಯನ್ನು ಬಯಸುತ್ತಾರೆ. ಇದು ಗುಲಾಮರ ಮನೋವೃತ್ತಿ.

**CWM, 15/260–61** **– ಶ್ರೀಮಾತೆ**

*

ಸ್ವ–ಗಾಢನಂಬಿಕೆಯಿಲ್ಲದೆ ನೀವು ಎಂದೆಂದಿಗೂ, ಏನನ್ನೂ ಮಾಡಲಾರಿರಿ, ಏಕೆಂದರೆ ನಿಮ್ಮನ್ನು ಕೊಂಡೊಯ್ಯಲು ಮೊದಲಿನ ತಳಮಳದ ವರ್ಷಗಳಾದ್ಯಂತ ನಿಮ್ಮಲ್ಲಿ ಏನೂ ಇರುವುದಿಲ್ಲ. ಆಗ ಭರವಸೆ ಮಾತ್ರ ಲಾಭಾಂಶವಾಗಿರುತ್ತದೆ ಮತ್ತು ಅತ್ಯಂತ ಒಳ್ಳೆಯ ಸಂಪತ್ತುಗಳೆಂದರೆ ತಡಕಾಡದ ಧೈರ್ಯ ಮತ್ತು ತನ್ನಲ್ಲಿಯೇ ಹೊಂದಿರುವ ಭರವಸೆ.

**CWSA, 1/716** **– ಶ್ರೀ ಅರವಿಂದರು**

*

ಸ್ವ–ಅಭಿವೃದ್ಧಿ ಹಾಗೂ ಆಧ್ಯಾತ್ಮಿಕ ಅಭೀಪ್ಸೆ ಇವು ಮನುಷ್ಯ ತನ್ನ ಕರ್ಮದ ಮೇಲೆ ಪ್ರಭುತ್ವ ಪಡೆಯಲು ಶಕ್ತನಾಗುವಂತೆ ಮಾಡುತ್ತವೆ.

ಕಲಿತುಕೊಳ್ಳುವುದು ಒಳ್ಳೆಯದು, ಆಗಿಬಿಡುವುದು ಹೆಚ್ಚು ಒಳ್ಳೆಯದು.

**CWM, 10/275** **– ಶ್ರೀಮಾತೆ**

*

ಅದೇ ಕಾಲಕ್ಕೆ ಮನುಷ್ಯ ತನ್ನಲ್ಲಿ ಈ ನಂಬಿಕೆಯನ್ನು ಎಲ್ಲ ತಾಮಸಿಕ ಅಹಂಮನ್ಯತೆಯ ಮತ್ತು ಆಧ್ಯಾತ್ಮಿಕ ಅಭಿಮಾನದ ಸ್ಪರ್ಶದಿಂದ ಪರಿಶುದ್ಧ–ಗೊಳಿಸಬೇಕು. ಅಹಂಕಾರದ ಅರ್ಥದಲ್ಲಿ ತನ್ನ ಬಲ ತನ್ನದೇ ಆಗಿರುವುದಿಲ್ಲ, ಆದರೆ ಅದು ದೈವೀ ವಿಶ್ವಂಭರ ಶಕ್ತಿಯದಾಗಿರುತ್ತದೆ ಎಂಬ ವಿಚಾರವನ್ನು ಸಾಧಕ ತನ್ನ ಮನಸ್ಸಿನಲ್ಲಿ ಸಾಧ್ಯವಾಗುವಷ್ಟು ಕಾಪಾಡಿಕೊಂಡು ಬರಬೇಕು ಮತ್ತು ತನ್ನ ಉಪಯೋಗದಲ್ಲಿ ಅಹಂಕಾರದಿಂದ ಕೂಡಿದ್ದೆಲ್ಲ ಸೀಮಿತತೆಗೆ ಕಾರಣವಾಗುತ್ತದೆ ಮತ್ತು ಕೊನೆಗೆ ಅದೊಂದು ಅಡೆತಡೆಯಾಗುತ್ತದೆ ಎಂಬುದನ್ನೂ ಕೂಡ ಮನಸ್ಸಿನಲ್ಲಿ ಕಾಪಾಡಿಕೊಂಡು ಬರಬೇಕು.

ನಮ್ಮ ಅಭೀಪ್ಸೆಯ ಹಿಂದಿರುವ ದೈವೀ ವಿಶ್ವಂಭರ ಶಕ್ತಿಯ ಸಾಮರ್ಥ್ಯ ಅಪರಿಮಿತವಾಗಿರುತ್ತದೆ, ಮತ್ತು ಅದಕ್ಕೆ ಸರಿಯಾದ ರೀತಿಯಲ್ಲಿ ಕರೆ ಕೊಟ್ಟಾಗ

ಅದು ನಮ್ಮಲ್ಲಿ ಸುರಿದುಕೊಳ್ಳುವುದರಲ್ಲಿ ಮತ್ತು ಯಾವುದೇ ಅಸಮರ್ಥತೆ, ಅಡೆತಡೆ ಇರಲಿ ಅವುಗಳನ್ನು ಈಗ ಅಥವಾ ನಂತರ ತೆಗೆದು ಹಾಕುವುದರಲ್ಲಿ ವಿಫಲವಾಗದು ಏಕೆಂದರೆ ನಮ್ಮ ಹೋರಾಟದ ಕಾಲಗತಿಗಳು ಹಾಗೂ ಕಾಲಾವಧಿಗಳು, ಅವು ಮೊದಲಿಗೆ ಉಪಕರಣ ರೂಪದಲ್ಲಿ ಮತ್ತು ಭಾಗಶಃ ನಮ್ಮ ನಂಬಿಕೆಯ ಹಾಗೂ ಪ್ರಯತ್ನದ ಬಲದ ಮೇಲೆ ಅವಲಂಬಿಸಿದಾಗ್ಯೂ ಕಟ್ಟಕಡೆಗೆ ದಿವ್ಯಾತ್ಮನಾದ, ಯೋಗದ ಪ್ರಭುವಾದ ಈಶ್ವರನ ಕೈಗಳಲ್ಲಿರುತ್ತವೆ.

**CWSA, 24/780** **– ಶ್ರೀ ಅರವಿಂದರು**

*

ಸ್ವ–ಅಭಿವೃದ್ಧಿ ಮತ್ತು ಆಧ್ಯಾತ್ಮಿಕ ಅಭೀಪ್ಸೆ ಇವು ಮನುಷ್ಯ ತನ್ನ ಕರ್ಮದ ಮೇಲೆ ಪ್ರಭುತ್ವ ಪಡೆಯಲು ಶಕ್ತನಾದವನನ್ನಾಗಿ ಮಾಡುತ್ತವೆ.

ಕಲಿತುಕೊಳ್ಳುವುದು ಒಳ್ಳೆಯದು. ಆಗುವುದು ಹೆಚ್ಚು ಒಳ್ಳೆಯದಾದದ್ದು.

**CWM, 10/275** **– ಶ್ರೀಮಾತೆ**

*

## ಧೈರ್ಯ

ನೀವು ನೀರಿನಲ್ಲಿ ಬಿದ್ದು ಬಿಡುತ್ತೀರಿ. ಭವ್ಯ ನೀರಿನ ಮೊತ್ತವಿರುವುದರಿಂದ ನೀವು ಭಯಪಡುವುದಿಲ್ಲ. ನಿಮಗೆ ಈಜಲು ಕಲಿಸಿಕೊಟ್ಟ ಶಿಕ್ಷಕನಿಗೆ ಕೃತಜ್ಞತೆ ಸಲ್ಲಿಸುತ್ತ ನಿಮ್ಮ ತೋಳುಗಳ ಹಾಗೂ ಕಾಲುಗಳ ಸದುಪಯೋಗ ಮಾಡುತ್ತೀರಿ. ನೀವು ತರಂಗಗಳೊಡನೆ ಹೋರಾಡುತ್ತೀರಿ ಹಾಗೂ ಪಾರಾಗುತ್ತೀರಿ. ನೀವು ಧೈರ್ಯವುಳ್ಳವರಾಗಿದ್ದಿರಿ. ನೀವು ನಿದ್ರಿಸುತ್ತಿರುತ್ತೀರಿ. “ಬೆಂಕಿ!” ಅಪಾಯದ ಕೂಗು ನಿಮ್ಮನ್ನು ಎಚ್ಚರಿಸುತ್ತದೆ. ನೀವು ಹಾಸಿಗೆಯಿಂದ ಜಿಗಿದೇಳುತ್ತೀರಿ ಮತ್ತು ಧಗಧಗಿಸುವ ಉರಿಯ ಕೆಂಪು ಬಣ್ಣದ ಹೊಳಪನ್ನು ನೋಡುತ್ತೀರಿ. ನಿಮ್ಮನ್ನು ಮರಣಭಯ ಹಿಡಿದುಕೊಳ್ಳುವುದಿಲ್ಲ. ಹೊಗೆ, ಕಿಡಿಗಳು ಹಾಗೂ ಜ್ವಾಲೆಗಳಾದ್ಯಂತ ಓಡಿ ಹೋಗಿ ಸುರಕ್ಷಿತ ಸ್ಥಾನವನ್ನು ತಲುಪುತ್ತೀರಿ. ಇದು ಧೈರ್ಯ ತಂದುಕೊಳ್ಳುವುದಾಗಿದೆ. ಕೆಲ ಕಾಲದ ಹಿಂದೆ ನಾನು ಇಂಗ್ಲಂಡಿನಲ್ಲಿ ಚಿಕ್ಕ ಮಕ್ಕಳ ಶಾಲೆಯೊಂದನ್ನು ನೋಡಲು ಹೋಗಿದ್ದೆ. ಅಲ್ಲಿದ್ದ ಚಿಕ್ಕ ಶಾಲಾ–ಮಕ್ಕಳು ಮೂರರಿಂದ ಏಳು ವರ್ಷಗಳವರೆಗಿನ ವಯಸ್ಸಾದವರಿದ್ದರು.

ಅಲ್ಲಿ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳಿದ್ದರು. ಅವರು ಹೆಣೆಯುವುದರಲ್ಲಿ, ಚಿತ್ರ ಬಿಡಿಸುವುದರಲ್ಲಿ, ಕತೆಗಳನ್ನು ಕೇಳುವುದರಲ್ಲಿ, ಹಾಡುವುದರಲ್ಲಿ ತೊಡಗಿಕೊಂಡಿದ್ದರು. ಅಲ್ಲಿಯ ಶಿಕ್ಷಕ ನನಗೆ ಹೇಳಿದ: "ನಾವು ಅಪಾಯದ ಸೂಚನೆ ಕೊಟ್ಟು ತೋರಿಸುವುದನ್ನು ಪ್ರಯತ್ನಿಸುತ್ತಿದ್ದೇವೆ. ಸಹಜವಾಗಿ ಅಲ್ಲಿ ಯಾವ ಬೆಂಕಿಯೂ ಇರುವುದಿಲ್ಲ, ಆದರೆ ಅಪಾಯ–ಸೂಚನೆಯ ಸಂಕೇತವಾದ ಕೂಡಲೆ ಮೇಲಕ್ಕೆದ್ದು ಹೊರಗೆ ಹೋಗುವುದನ್ನು ಮಕ್ಕಳಿಗೆ ಕಲಿಸಿಕೊಡಲಾಗುತ್ತದೆ."

ಅವನು ತನ್ನ ಸೀಟಿಯನ್ನು ಊದಿದನು, ತತ್ಕ್ಷಣ ಮಕ್ಕಳು ತಮ್ಮ ಪುಸ್ತಕಗಳನ್ನು, ಪೆನ್ಸಿಲ್ಲುಗಳನ್ನು, ಹೆಣೆಯುವ ಸೂಜಿಗಳನ್ನು ಬಿಟ್ಟು ಕೊಟ್ಟು ಎದ್ದು ನಿಂತರು. ಎರಡನೆಯ ಸಂಕೇತ ಸೂಚಿಸಿದ ಕೂಡಲೆ ತೆರೆದ ಗಾಳಿಯತ್ತ ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ನಡೆಯತೊಡಗಿದರು. ಕೆಲವು ಕ್ಷಣಗಳಲ್ಲಿ ವರ್ಗದ ಕೋಣೆ ಬರಿದಾಗಿತ್ತು. ಈ ಮಕ್ಕಳು ಬೆಂಕಿಯ ಅಪಾಯವನ್ನು ಎದುರಿಸುವುದನ್ನು, ಧೈರ್ಯದಿಂದಿರುವುದನ್ನು ಕಲಿತುಕೊಂಡಿದ್ದರು. ಯಾರ ಸಲುವಾಗಿ ನೀವು ಈಜಾಡಿದಿರಿ? ಯಾರ ಸಲುವಾಗಿ ಜ್ವಾಲೆಗಳಾದ್ಯಂತ ಓಡಿ ಹೋದಿರಿ? ಅದು ನಿಮಗಾಗಿ ಆಗಿತ್ತು. ಯಾರ ಸಲುವಾಗಿ ಮಕ್ಕಳು ಭಯವನ್ನು ತಡೆಗಟ್ಟಬೇಕು. ಅದು ತಮಗಾಗಿಯೇ ಆಗಿತ್ತು. ಇದು ತಪ್ಪಾಗಿತ್ತೆ? ನಿಶ್ಚಿತವಾಗಿ ಅಲ್ಲ. ನಿಮ್ಮ ಪ್ರಾಣದ ರಕ್ಷಣೆಗಾಗಿ ಕಾಳಜಿ ವಹಿಸುವುದು ಸರಿಯಾದದ್ದು ಮತ್ತು ಅದನ್ನು ಧೈರ್ಯದಿಂದ ರಕ್ಷಿಸಬೇಕು. ಆದರೆ ಇನ್ನೂ ಶ್ರೇಷ್ಠತರ ಧೈರ್ಯವಿದೆ, ಇತರರ ಸಲುವಾಗಿ ತೋರಿಸಿದ ಧೈರ್ಯ ಅದಾಗಿರುತ್ತದೆ.

**CWM, 2/179–80** **– ಶ್ರೀಮಾತೆ**

*

ಪ್ರಗತಿ ನಿಧಾನ ಗತಿಯದಾಗಬಹುದು, ಪತನಗಳು ಮೇಲಿಂದ ಸಂಭವಿಸಬಹುದು, ಆದರೆ ಧೈರ್ಯದಿಂದಿರುವ ಸಂಕಲ್ಪವನ್ನು ನಿರ್ವಹಿಸಿಕೊಂಡು ಬಂದರೆ ಒಂದು ದಿನ ಮನುಷ್ಯ ವಿಜಯಿಯಾಗುವುದು ಮತ್ತು ಸತ್ಯದ ತೇಜೋಮಯ ಪ್ರಜ್ಞೆಯ ಎದುರಿಗೆ ಕರಗಿ ಹೋಗುವುದು ಮತ್ತು ಮಾಯ–ವಾಗುವುದು ನಿಶ್ಚಿತವಾದದ್ದು.

**CWM, 4/52** **– ಶ್ರೀಮಾತೆ**

*

ನಿಜವಾದ ಧೈರ್ಯ ಅದರ ಆಳಾತಿ ಆಳದ ಸತ್ಯದಲ್ಲಿ, ಜೀವನದಲ್ಲಿ ಅತ್ಯಂತ ಚಿಕ್ಕ ವಿಷಯಗಳಿಂದ ಹಿಡಿದು ದೊಡ್ಡ ವಿಷಯಗಳವರೆಗೆ, ಭೌತಿಕ ವಿಷಯಗಳಿಂದ ಹಿಡಿದು ಆಧ್ಯಾತ್ಮಿಕ ವಿಷಯಗಳವರೆಗೆ ಭೌತಿಕವಾಗಿ ನಡುಗದೆ ಹೃದಯ ಜೋರಾಗಿ ಹೊಡೆದುಕೊಳ್ಳದೆ, ನರಗಳು ಕಂಪಿಸದೆ, ಸತ್ತೆಯ ಯಾವ ಭಾಗದಲ್ಲಿಯೂ ಉದ್ವೇಗವಿಲ್ಲದೆ ಪ್ರತಿಯೊಂದನ್ನು ಎದುರಿಸಲು ಶಕ್ತರಾಗುವುದಾಗಿದೆ, ಪ್ರತಿಯೊಂದನ್ನು ದೈವೀ ಸಾನ್ನಿಧ್ಯದ ಸತತ ಪ್ರಜ್ಞೆಯೊಂದಿಗೆ, ಪರಮಾತ್ಮನಿಗೆ ಸ್ವ–ಅರ್ಪಣೆ ಮಾಡಿಕೊಂಡು ಮತ್ತು ಇಡೀಸತ್ತೆ ಅವನ ಸಂಕಲ್ಪದಲ್ಲಿ ಏಕಗೊಳ್ಳುವಂತೆ ಮಾಡಿ ಎದುರಿಸಬೇಕು; ಆಗ ಮನುಷ್ಯ ಜೀವನದಲ್ಲಿ ಮುಂದೆ ಸಾಗಿ ಹೋಗಬಲ್ಲ, ಏನನ್ನಾದರೂ ಎದುರಿಸಬಲ್ಲ. ನಡುಕವಿಲ್ಲದೆ, ಕಂಪನವಿಲ್ಲದೆ ಎಂದು ನಾನು ಹೇಳಿದೆ, ಇದು ನಿಮಗೆ ತಿಳಿದಿದೆ, ಮನುಷ್ಯ ವಿಶೇಷ ಕೃಪೆಯೊಂದಿಗೆ ಆ ರೀತಿಯಲ್ಲಿ ಜನಿಸಿರದಿದ್ದರೆ ಇದು ದೀರ್ಘಕಾಲದ ಪ್ರಯತ್ನದ ಪರಿಣಾಮವಾಗಿರುತ್ತದೆ. ಆದರೆ ಇಂತಹದು ಇನ್ನೂ ಅಪರೂಪವಾದದ್ದು. ಮನುಷ್ಯ ಭಯವನ್ನು ಜಯಿಸುವುದೆಂದರೆ ಅವನ ಸತ್ತೆಯಲ್ಲಿ ಒಂದು ಭಾಗವಿರುತ್ತದೆ, ಅದು ಇತರ ಭಾಗಗಳಿಗಿಂತ ಹೆಚ್ಚು ಬಲಿಷ್ಠವಾಗಿರುತ್ತದೆ, ಅದಕ್ಕೆ ಭಯವಿರುವುದಿಲ್ಲ ಮತ್ತು ಅದು ನಿರ್ಭಯತೆಯನ್ನು ಭಯಪಟ್ಟುಕೊಂಡ ಭಾಗದ ಮೇಲೆ ಹೇರುತ್ತದೆ. ಆದರೆ ಇದನ್ನು ಹೊಂದಿದವನು ಭಯದ ಮೇಲೆ ಪ್ರಭುತ್ವ ಪಡೆಯುವ ಆವಶ್ಯಕತೆ ಇಲ್ಲದವನಿಗಿಂತ ಹೆಚ್ಚು ಧೈರ್ಯಶಾಲಿಯಾಗಿರುತ್ತಾನೆಂಬ ಸೂಚನೆ ಇರುವುದಿಲ್ಲ. ಏಕೆಂದರೆ ಭಯದ ಮೇಲೆ ಪ್ರಭುತ್ವ ಪಡೆಯಲು ಭಯವನ್ನು ಹೊಂದಿರದೇ ಇದ್ದವನು ಎಂಬುದರ ಅರ್ಥ ಅವನು ತನ್ನ ಸತ್ತೆಯ ಎಲ್ಲ ಭಾಗಗಳಲ್ಲಿ ಧೈರ್ಯಶಾಲಿಯಾಗಿರುತ್ತಾನೆ. ಈಗ ನಿರ್ಭಯತೆಯೊಂದಿದೆ, ಅದು ಅಪ್ರಜ್ಞೆಯಿಂದ ಹಾಗೂ ಅಜ್ಞಾನದಿಂದ ಬರುತ್ತದೆ. ಉದಾಹರಣೆಗೆ ಚಿಕ್ಕಮಕ್ಕಳು ಕೆಲವು ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಾರೆ, ಅಲ್ಲಿ ಅಪಾಯವಿದ್ದುದರ ಬಗ್ಗೆ ಅವರಲ್ಲಿ ಜ್ಞಾನವಿದ್ದರೆ ಅವರು ಅಂತಹ ಕಾರ್ಯವನ್ನು ಮಾಡುವುದಿಲ್ಲ, ಅದರರ್ಥ ಅವರ ನಿರ್ಭಯತೆ ಅಜ್ಞಾನದ್ದಾಗಿರುತ್ತದೆ. ಆದರೆ ನಿಜವಾದ ಧೈರ್ಯ ಆ ವಿಷಯದ ಬಗ್ಗೆ ತುಂಬಿಕೊಂಡ ಜ್ಞಾನವಿದ್ದಾಗ ಇರುವ ಧೈರ್ಯವಾಗಿರುತ್ತದೆ, ಎಂದರೆ ಅದು ಎಲ್ಲ ಸಾಧ್ಯತೆಗಳ ಬಗ್ಗೆ ಅರಿವುಳ್ಳದ್ದಾಗಿರುತ್ತದೆ ಮತ್ತು ಪ್ರತಿಯೊಂದನ್ನು, ಯಾವುದನ್ನೂ ಹೊರತುಪಡಿಸದೆ, ಎದುರಿಸಲು ತಯಾರಾಗಿರುತ್ತದೆ.

**CWM, 7/31** **– ಶ್ರೀಮಾತೆ**

*

ಧೈರ್ಯ ಪರಿಪೂರ್ಣತೆಗಳಲ್ಲಿ ಒಂದು ವಿಷಯ ಎಂಬುದರ ಬಗ್ಗೆ ನಾವು ಮಾತನಾಡಿದ್ದುದು ಮತ್ತು ನಾನು ಅದನ್ನು ಒಂದು ಯಾದಿಯಲ್ಲಿ ಬರೆದಿಟ್ಟದ್ದು ನನ್ನ ನೆನಪಿನಲ್ಲಿದೆ. ಆದರೆ ಈ ಧೈರ್ಯದ ಅರ್ಥ ಪರಮೋಚ್ಚ ಸಾಹಸಕ್ಕಾಗಿ ಸ್ವಾದ ಹೊಂದಿರುವುದಾಗಿದೆ ಮತ್ತು ಪರಮೋಚ್ಚ ಸಾಹಸಕ್ಕಾಗಿರುವ ಈ ಸ್ವಾದ ಅಭೀಪ್ಸೆಯಾಗಿದೆ, ಈ ಅಭೀಪ್ಸೆ ನಿಮ್ಮನ್ನು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತದೆ ಮತ್ತು ಯಾವ ಲೆಕ್ಕಾಚಾರವಿಲ್ಲದೆ, ಕಾದಿರಿಸಿಕೊಳ್ಳುವಿಕೆ ಇಲ್ಲದೆ, ಹಿಂದೆ ಸರಿದುಕೊಳ್ಳುವ ಸಾಧ್ಯತೆ ಇಲ್ಲದೆ ದೈವೀ ಶೋಧದ ಶ್ರೇಷ್ಠ ಸಾಹಸದಲ್ಲಿ, ದೇವನನ್ನು ಭೇಟಿಮಾಡುವುದರ ಶ್ರೇಷ್ಠ ಸಾಹಸದಲ್ಲಿ, ದೈವೀ ಸಿದ್ಧಿಯ ಇನ್ನೂ ಶ್ರೇಷ್ಠತರ ಸಾಹಸದಲ್ಲಿ ನಿಮ್ಮನ್ನು ಎಸೆದು ಬಿಡುತ್ತದೆ; ಈ ಸಾಹಸದಲ್ಲಿ ಹಿಂದೆ ನೋಡದೆ ಮತ್ತು ಒಂದು ಕ್ಷಣ ಕೂಡ "ಏನು ಸಂಭವಿಸಲಿದೆ" ಎಂದು ಕೇಳದೆ ನಿಮ್ಮನ್ನು ಚೆಲ್ಲಿಕೊಡುತ್ತೀರಿ. ಏಕೆಂದರೆ ಏನು ಸಂಭವಿಸಲಿದೆ ಎಂದು ನೀವು ಪ್ರಶ್ನೆ ಮಾಡಿದರೆ ನೀವು ಎಂದೆಂದಿಗೂ ಪ್ರಾರಂಭ ಮಾಡುವುದಿಲ್ಲ, ಅಲ್ಲಿ ಯಾವಾಗಲೂ ಸಿಕ್ಕಿಹಾಕಿಕೊಂಡು ಉಳಿದುಬಿಡುತ್ತೀರಿ, ಆ ಸ್ಥಳದಲ್ಲಿ ಬೇರು ಬಿಡುತ್ತೀರಿ, ಏನನ್ನೋ ಕಳೆದುಕೊಳ್ಳುವ, ನಿಮ್ಮ ಸಮತೋಲನವನ್ನು ಕಳೆದುಕೊಳ್ಳುವ ಭಯ ನಿಮ್ಮಲ್ಲಿರುತ್ತದೆ, ಆ ಕಾರಣದಿಂದಾಗಿ ನಾನು ಧೈರ್ಯ ಕುರಿತು ಮಾತನಾಡುತ್ತಿದ್ದೇನೆ– ಆದರೆ ಅದು ನಿಜವಾಗಿ ಅಭೀಪ್ಸೆಯಾಗಿರುತ್ತದೆ. ಅವೆರಡೂ ಒಟ್ಟಿಗೆ ಸಾಗುತ್ತವೆ. ನಿಜವಾದ ಅಭೀಪ್ಸೆ ಧೈರ್ಯದಿಂದ ತುಂಬಿಕೊಂಡ ಏನೋ ಒಂದಾಗಿರುತ್ತದೆ.

**CWM, 8/40–41** **– ಶ್ರೀಮಾತೆ**

*

ಧೈರ್ಯ ಹಾಗೂ ಪ್ರೇಮ ಇವೆರಡೂ ಅತ್ಯಗತ್ಯವಾದ ಸದ್ಗುಣಗಳು, ಇನ್ನುಳಿದ ಎಲ್ಲದಕ್ಕೂ ಗ್ರಹಣ ಹಿಡಿದರೆ ಇಲ್ಲವೆ ಅವು ನಿದ್ರಿಸುತ್ತಿದ್ದರೆ, ಇವೆರಡೂ ಆತ್ಮ ಜೀವಿಸುವಂತೆ ರಕ್ಷಿಸುತ್ತವೆ.

*

ಯಾವುದೇ ರೂಪದ ಭಯ ಇಲ್ಲದೆ ಇರುವುದು ಧೈರ್ಯವಾಗಿರುತ್ತದೆ.

**CWM, 10/281–82** **– ಶ್ರೀಮಾತೆ**

*

ಒಂದು ಮೇಣಬತ್ತಿಯ ಜ್ವಾಲೆ ಇನ್ನೊಂದನ್ನು ಬೆಳಗಿಸುವ ರೀತಿಯಲ್ಲಿ ಧೈರ್ಯವಿದ್ದ ಯಾರೇ ಆಗಲಿ ಇತರರಿಗೆ ಧೈರ್ಯ ಕೊಡಬಲ್ಲನು.

*

ಮನುಷ್ಯ ತನ್ನ ದೋಷಗಳನ್ನು ಗುರುತಿಸುವುದು ಅತ್ಯಂತ ಉದಾರವಾದ ಒಂದು ಧೈರ್ಯವಾಗಿರುತ್ತದೆ.

**CWM, 14/169–70** **– ಶ್ರೀಮಾತೆ**

*

**ಪಟ್ಟುಹಿಡಿಯುವಿಕೆ**

ಅತ್ಯಂತ ಅವಶ್ಯವಾದ ಗುಣ ಎಂದರೆ ಪಟ್ಟುಹಿಡಿಯುವಿಕೆ, ತಾಳ್ಮೆ ಮತ್ತು ಅದನ್ನು ನಾನು ಏನೆಂದು ಕರೆಯಲಿ?– ಒಂದು ಬಗೆಯ ಆಂತರಿಕ ಹಾಸ್ಯಾಭಿರುಚಿ, ಅದು ನೀವು ಧೈರ್ಯಗುಂದುವುದನ್ನು ತಡೆಯಲು, ದುಃಖಿತರಾಗದೆ ಇರಲು ಮತ್ತು ಎಲ್ಲ ತೊಂದರೆಗಳನ್ನು ಮುಗುಳ್ನಗೆಯಿಂದ ಎದುರಿಸಲು ಸಹಾಯ ಮಾಡುತ್ತದೆ. ಇದನ್ನು ಒಳ್ಳೆಯ ರೀತಿಯಲ್ಲಿ ಅಭಿವ್ಯಕ್ತಗೊಳಿಸಲು ಒಂದು ಇಂಗ್ಲಿಷ್ ಶಬ್ದವಿದೆ: (cheerfulness) ಪ್ರಸನ್ನತೆ, ನಿಮ್ಮಂತರಂಗದಲ್ಲಿ ಇದನ್ನು ನೀವು ಕಾಪಾಡಿಕೊಂಡು ಬರಬಲ್ಲಿರಾದರೆ, ನೀವು ಹೆಚ್ಚು ಒಳ್ಳೆಯ ರೀತಿಯಲ್ಲಿ ಹೋರಾಡುತ್ತೀರಿ, ನೀವು ಪ್ರಗತಿ ಹೊಂದದಂತೆ ಅಡ್ಡ ಬರಲು ಪ್ರಯತ್ನಿಸುವ ಈ ಕೆಟ್ಟ ಪ್ರಭಾವಗಳಿಗೆ ಈ ಪ್ರಕಾಶದಿಂದ ತಡೆಒಡ್ಡುತ್ತೀರಿ.

**CWM, 8/23** **– ಶ್ರೀಮಾತೆ**

*

ಮನುಷ್ಯ ತನ್ನ ನಿಶ್ಚಿತತೆಯನ್ನು ತನ್ನಂತರಂಗದಲ್ಲಿ ಕಂಡುಕೊಳ್ಳಬೇಕು, ಪ್ರತಿಯೊಂದು ಇದ್ದಾಗಲೂ ಅದನ್ನು ಕಾಪಾಡಿಕೊಂಡು ಬರಬೇಕು ಮತ್ತು ಯಾವುದೇ ಬೆಲೆ ತೆತ್ತಾದರೂ ಕೊನೆಯವರೆಗೆ ತನ್ನ ಮಾರ್ಗದಲ್ಲಿ ಸಾಗಿ ಹೋಗಬೇಕು. ಅತ್ಯಂತ ತಾಳ್ಮೆಯಿದ್ದವರಿಗೆ ಜಯವಿರುತ್ತದೆ. ಎಲ್ಲ ವಿರೋಧ–ಗಳಿದ್ದಾಗಲೂ ಮನುಷ್ಯ ತನ್ನ ತಾಳ್ಮೆಯನ್ನು ನಿರ್ವಹಿಸಿಕೊಂಡು ಹೋಗಲು ಆಧಾರ ಅಲುಗಾಡದಂತಿರಬೇಕು, ಮತ್ತು ಒಂದು ಆಧಾರ ಅಲುಗಾಡದಂತಿರುತ್ತದೆ, ಅದು ದೈವೀ ನೈಜತೆಯ ಪರಮೋಚ್ಚ ದೈವೀ ಸತ್ಯದ ಆಧಾರವಾಗಿರುತ್ತದೆ. ಬೇರೆ

ಯಾವ ಆಧಾರವನ್ನು ಹುಡುಕುವುದು ವ್ಯರ್ಥವಾದದ್ದು ಎಂದೂ ವಿಫಲವಾದ ಆಧಾರ ಇದೊಂದೇ ಆಗಿರುತ್ತದೆ.

**CWM, 9/255** **– ಶ್ರೀಮಾತೆ**

*

ಯಾವಾಗಲೂ ಸಂತೋಷದಿಂದ ಇರುವುದನ್ನು ನಿರೀಕ್ಷಿಸಬಾರದು ಮತ್ತು ತಾಳ್ಮೆಯಿಂದಿರುವುದು ಹೇಗೆ ಎಂಬುದನ್ನು ತಿಳಿದುಕೊಂಡಿರುವುದು ಬಹಳ ಉಪಯುಕ್ತವಾದದ್ದು. ಏಕೆಂದರೆ ಹೆಚ್ಚಿನ ತಾಳ್ಮೆಯನ್ನು ಕಲಿತುಕೊಳ್ಳುವುದಕ್ಕೆ ನಮಗೆ ಅವಕಾಶ ಕೊಡದೆ ಇರುವುದಕ್ಕೆ ನಮ್ಮ ಜೀವನದಲ್ಲಿ ದಿನಗಳು ಕಡಿಮೆ ಇರುತ್ತವೆ. ಕಾರ್ಯಮಗ್ನನಾಗಿರುವ ಒಬ್ಬ ಮನುಷ್ಯನನ್ನು ಕಾಣಲು ಬಯಸುತ್ತೀರಿ. ನೀವು ಅವನ ಮನೆಗೆ ಹೋಗುತ್ತೀರಿ. ಅಲ್ಲಿ ಈ ಮೊದಲೇ ಬಂದ ಭೇಟಿಗಾರರಿರುತ್ತಾರೆ ಮತ್ತು ನೀವು ಅವನನ್ನು ಕಾಣುವ ಮೊದಲು ದೀರ್ಘಕಾಲ ಕಾದುಕೊಂಡಿರಬೇಕಾಗುತ್ತದೆ. ನೀವು ತಾಳ್ಮೆಯಿಂದ ಇರುತ್ತೀರಿ ಮತ್ತೊಂದು ಸಲ ನೀವು ಕಾಣಬೇಕಾದವನ ಮನೆಗೆ ತಲುಪಿದಾಗ ಅವನು ಮನೆಯಲ್ಲಿರುವುದಿಲ್ಲ. ಮರುದಿನ ಮರಳಿ ಬರುತ್ತೀರಿ, ಆದರೆ ಅವನ ಮನೆಯ ಬಾಗಿಲು ಇನ್ನೂ ಮುಚ್ಚಿಕೊಂಡಿರುತ್ತದೆ. ನೀವು ಮೂರನೆಯ ಸಲ ಮರಳಿ ಹೋಗುತ್ತೀರಿ, ಅವನು ಅನಾರೋಗ್ಯದಿಂದಿರುತ್ತಾನೆ ಮತ್ತು ಅವನನ್ನು ನೀವು ಕಾಣಲಾರಿರಿ. ಕೆಲವು ದಿನಗಳು ಕಳೆದು ಹೋಗಲು ಬಿಟ್ಟುಕೊಟ್ಟು ಅವನಲ್ಲಿಗೆ ಮರಳಿ ಹೋಗುತ್ತೀರಿ. ಮತ್ತು ಹೊಸದಾದ ಏನೋ ಒಂದು ಅವನನ್ನು ಭೇಟಿ ಮಾಡದಂತೆ ನಿಮ್ಮನ್ನು ತಡೆಯುವಂತಾದರೂ ನೀವು ಎದೆಗುಂದುವುದಿಲ್ಲ, ಅವನನ್ನು ಭೇಟಿಮಾಡಲು ಕೊನೆಯವರೆಗೆ ಪ್ರಯತ್ನಮಾಡುತ್ತೀರಿ. ಈ ಬಗೆಯ ತಾಳ್ಮೆಯನ್ನು ಪಟ್ಟುಹಿಡಿಯುವಿಕೆ ಎಂದು ಕರೆಯಲಾಗಿದೆ. ಪಟ್ಟುಹಿಡಿಯುವಿಕೆ ಕ್ರಿಯಾಶೀಲ ತಾಳ್ಮೆ, ಮುಂದೆ ಹೆಜ್ಜೆ ಇರಿಸುತ್ತ ಹೋಗುವ ತಾಳ್ಮೆ.

**CWM, 2/198** **– ಶ್ರೀಮಾತೆ**

*

ಜೆನೆವಾದ ಪ್ರಸಿದ್ಧ ನಾವಿಕ ಕೊಲಂಬಸ್ ಸ್ಪೇನ್ ದೇಶದಿಂದ ಹಡಗಿನಲ್ಲಿ ಪ್ರಯಾಣ ಕೈಕೊಂಡನು, ಅವನು ಪಶ್ಚಿಮ ದಿಕ್ಕಿನಲ್ಲಿದ್ದ ಅಜ್ಞಾತ ಸಮುದ್ರಗಳನ್ನು ದಾಟಲು ಹಲವಾರು ವಾರಗಳವರೆಗೆ, ದಿನಗಳವರೆಗೆ ಹೋರಾಡಬೇಕಾಯಿತು,

ತನ್ನ ಸಹಕಾರಿಗಳು ಗುಣುಗುಟ್ಟುವುದನ್ನು ಅವನು ಕೇಳುತ್ತಿದ್ದ, ಆದರೂ ಅವನು ಹೊಸಭೂಮಿಯನ್ನು ತಲುಪಲು ತನ್ನ ಸಂಕಲ್ಪದಲ್ಲಿ ಪಟ್ಟುಹಿಡಿದು ಅಮೇರಿಕಾದ ಮೊದಲ ದ್ವೀಪಗಳನ್ನು ತಲುಪುವವರೆಗೆ ಪ್ರಯಾಣ ಮುಂದುವರಿಸಿದ, ಅಲ್ಲಿಗೆ ತಲುಪಲು ತಡವಾಗುತ್ತಿತ್ತು, ಮಾರ್ಗದಲ್ಲಿ ಅನೇಕ ತೊಂದರೆಗಳಿದ್ದವು. ಹೀಗೆ ಅವನು ಹೊಸ ಜಗತ್ತನ್ನು ಶೋಧಿಸಿದ. ಅವನು ತನ್ನ ಸಹಕಾರಿಗಳಿಂದ ಏನನ್ನು ಕೇಳುತ್ತಿದ್ದ? ತಾಳ್ಮೆಯಿಂದಿರಿ ಎಂಬುದನ್ನು ಮಾತ್ರ ಕೇಳುತ್ತಿದ್ದ, ಏಕೆಂದರೆ ಅವರು ಅವನನ್ನು ನೆಚ್ಚಿಕೊಂಡಿದ್ದರು ಮತ್ತು ಸ್ಥಿರವಾಗಿ ಉಳಿದುಕೊಂಡು ತಮ್ಮನ್ನು ಮುಂದೆ ಕರೆದೊಯ್ಯಲು ಅವನಿಗೆ ಅನುವು ಮಾಡಿಕೊಡಬೇಕಾಗಿತ್ತು. ಆದರೆ ಅವನಿಗೇ ಗುರಿಯನ್ನು ತಲುಪಲು ಏನು ಬೇಕಾಗಿತ್ತು? ಅವನಿಗೆ ಪೋಷಿಸಿಕೊಂಡು ಬರುವ ಚೈತನ್ಯ ಹಾಗೂ ನಾವು ಪಟ್ಟುಹಿಡಿಯುವಿಕೆ ಎಂದು ಕರೆಯುವ ಕುಂದದ ಸಂಕಲ್ಪ.

**CWM, 2/198–99** **– ಶ್ರೀಮಾತೆ**

*

ನೀವು ಕಂಡುಕೊಂಡ ಸತ್ಯವನ್ನು ಕೂಡಲೆ ಸಿದ್ಧಿಸಿಕೊಳ್ಳಲಾಗದಿದ್ದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ, ನಿರಾಶರಾಗಬಾರದು, ಖಿನ್ನರಾಗಬಾರದು, ಎದೆ–ಗುಂದಬಾರದು. ನೀವೊಂದು ತಪ್ಪು ಮಾಡಿದ್ದರೆ ಅದಕ್ಕಾಗಿ ಹೃದಯಗುಂದಿದ–ವರಾಗುವುದು, ಇಲ್ಲವೆ ದುಃಖಿತರಾಗಿರುವುದು ಇಲ್ಲವೆ ನಿರಾಶರಾಗುವುದು ಬೇಡ, ಸ್ವಾಭಾವಿಕವಾಗಿ ಅದು ಆ ಪ್ರಶ್ನೆಯಲ್ಲ, ಏಕೆಂದರೆ ಆ ತಪ್ಪನ್ನು ತಿದ್ದಬಹುದು, ಅದೊಂದು ತಪ್ಪು ಎಂದು ತಿಳಿದುಕೊಂಡ ತತ್ಕ್ಷಣ ನಿಮ್ಮಂತರಂಗದಲ್ಲಿ ಕಾರ್ಯಕೈಕೊಳ್ಳುವ, ಪ್ರಗತಿ ಸಾಧಿಸುವ ಮತ್ತು ಸಂತುಷ್ಟರಾಗುವ ಒಂದು ಅವಕಾಶವಿರುತ್ತದೆ! ನೀವು ಏನೋ ಒಂದನ್ನು ಸತ್ಯ, ಪರಿಪೂರ್ಣವಾಗಿ ಸಾರಭೂತ ಸತ್ಯ ಎಂದು ಕಂಡುಕೊಂಡಾಗ ವಿಶ್ವದ ಪರಿಸ್ಥಿತಿ ಅದನ್ನು ಸಿದ್ಧಿಸಿಕೊಳ್ಳಲು ಇನ್ನೂ ಪಕ್ವವಾಗಿಲ್ಲ ಎಂದು ಕಂಡುಬಂದಾಗ ಆ ಪರಿಸ್ಥಿತಿ ಬಹಳ ಗಂಭೀರವಾಗಿರುತ್ತದೆ, ಜಯಿಸಲು ಹೆಚ್ಚು ಕಠಿಣವಾಗಿರುತ್ತದೆ. ಇದು ಬಹಳಷ್ಟು ಜನರಿಗೆ ಸಂಭವಿಸುತ್ತದೆ ಎಂದು ನಾನು ಹೇಳುವುದಿಲ್ಲ, ಆದರೆ ಬಹುಶಃ ನಿಮಗಾಗಬಹುದು ಮತ್ತು ಆಗ ನೀವು ಹೆಚ್ಚಿನ ತಾಳ್ಮೆಯನ್ನು ಹೊಂದಿರುವ, ಆವಶ್ಯಕತೆ ಇರುತ್ತದೆ ಮತ್ತು ನಿಮಗೆ ನೀವೇ ಹೇಳಿಕೊಳ್ಳಬೇಕು: ತಿಳಿವಳಿಕೆ

ಹೊಂದಿರುವ "ಅದು ಸತ್ಯವಾಗಿತ್ತು, ಆದರೆ ಅದು ಸಂಪೂರ್ಣ ಸತ್ಯವಾಗಿರಲಿಲ್ಲ," ಎಂದರೆ ಆ ಸತ್ಯ ಇನ್ನಿತರ ಸತ್ಯಗಳೊಂದಿಗೆ ಸಾಮರಸ್ಯದಿಂದಿರಲಿಲ್ಲ, ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ, ಸದ್ಯದ ಸಾಧ್ಯತೆಗಳೊಡನೆ ಸರಿಸಮನಾಗಿ ಬಾಳುವಂತಹದಿರಲಿಲ್ಲ ಮತ್ತು ನಾವು ಅದನ್ನು ಬಹಳ ತೀವ್ರಗತಿಯಿಂದ ಸಿದ್ಧಿಸಿಕೊಳ್ಳಲು ಬಯಸಿದೆವು ಮತ್ತು ಅದು ತಪ್ಪು ಭಾವನೆ ಉಂಟು ಮಾಡಿತು. ಆದರೆ ಅದು ಮಿಥ್ಯೆಯದಾಗಿತ್ತೆಂದು ಹೇಳುವುದು ಬೇಡ, ಏಕೆಂದರೆ ಅದು ತಪ್ಪು ಭಾವನೆ ಉಂಟು ಮಾಡಿತ್ತು; ಅದು ಅಕಾಲಿಕವಾಗಿತ್ತೆಂದು ಹೇಳಿರಿ ಮತ್ತು ನೀವು ಹೇಳಬಹುದಾದುದು ಅದಿಷ್ಟೇ– ನೀವು ನೋಡಿದ್ದು ಸತ್ಯವಾಗಿತ್ತು, ಆದರೆ ಅದು ಅಕಾಲಿಕವಾಗಿತ್ತು ಮತ್ತು ನೀವು ಬಹಳ ತಾಳ್ಮೆಯೊಂದಿಗೆ ಮತ್ತು ಪಟ್ಟುಹಿಡಿಯು–ವಿಕೆಯೊಂದಿಗೆ ಅದನ್ನು ಸಿದ್ಧಿಸಿಕೊಳ್ಳುವುದು ಸಾಧ್ಯವಾಗುವ ಕ್ಷಣದವರೆಗೆ ನಿಮ್ಮ ಚಿಕ್ಕ ಸತ್ಯವನ್ನು ಅಖಂಡ ಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು ಅತ್ಯಂತ ಹೆಚ್ಚಿನ ತಾಳ್ಮೆಯಿದ್ದವರಿಗೆ ಜಯ ದೊರಕುತ್ತದೆ.

**CWM, 4/116–17** **– ಶ್ರೀಮಾತೆ**

*

ಪ್ರಾಪಂಚಿಕ ಜೀವನದ ಏನೋ ಒಂದನ್ನು, ಅದು ಗುಣಲಕ್ಷಣವಾಗಿರಲಿ, ಇಲ್ಲವೆ ಕಾರ್ಯವಿಧಾನವಾಗಿರಲಿ, ಬದಲು ಮಾಡಲು ಮನುಷ್ಯ ಬಯಸಿದಾಗ ಅವನಲ್ಲಿ ತಡವರಿಸದ ಪಟ್ಟುಹಿಡಿಯುವಿಕೆ ಇರಬೇಕು, ಮತ್ತೆ ಮೊದಲ ಸಲ ಕೈಕೊಂಡಾಗಿನ ಅದೇ ಗಾಢತೆಯಿಂದ, ಅದನ್ನು ಈ ಮೊದಲು ಕೈಕೊಂಡಿರಲಿಲ್ಲ–ವೇನೋ ಎನ್ನುವ ಹಾಗೆ ನೂರುಸಲ ಪ್ರಾರಂಭಿಸಲು ತಯಾರಾಗಿರಬೇಕು.

**CWM, 7/104** **– ಶ್ರೀಮಾತೆ**

*

ಪಟ್ಟುಹಿಡಿಯಬೇಕು– ಅದು ಯಶಸ್ಸಿಗೆ ಅತ್ಯಂತ ನಿಶ್ಚಿತ ಮಾರ್ಗ. ಕಳೆದ ವರ್ಷ ನೀವು ಸಿದ್ಧಿಸಿಕೊಳ್ಳಲು ಸಾಧ್ಯವಾಗದೆ ಇದ್ದುದನ್ನು ಈ ವರ್ಷ ಕೈಕೊಳ್ಳುತ್ತೀರಿ.

ಇಂದು ನಿಮಗೆ ಕೈಕೊಳ್ಳಲು ಸಾಧ್ಯವಾಗದೇ ಇದ್ದುದನ್ನು ನಾಳೆ ಸಿದ್ಧಿಸಿಕೊಳ್ಳುತ್ತೀರಿ.

*

ಪಟ್ಟುಹಿಡಿಯುವಿಕೆ ಕ್ರಿಯೆಯಲ್ಲಿರುವ ತಾಳ್ಮೆ.

*

ಪಟ್ಟುಹಿಡಿಯುವುದರ ಮೂಲಕ ಮನುಷ್ಯ ತೊಂದರೆಗಳ ಮೇಲೆ ಜಯಗಳಿಸುತ್ತಾನೆ, ಅವುಗಳಿಂದ ದೂರ ಓಡಿಹೋಗುವುದರಿಂದ ಅಲ್ಲ, ಪಟ್ಟುಹಿಡಿಯುವವನು ಜಯಗಳಿಸುವುದು ನಿಶ್ಚಿತ. ಬಹಳ ತಾಳ್ಮೆಯಿದ್ದವರ ಬಳಿ ಜಯ ಸಾಗಿ ಹೋಗುತ್ತದೆ. ಯಾವಾಗಲೂ ನಿಮಗೆ ಸಾಧ್ಯವಿದ್ದಷ್ಟು ಅತಿ ಹೆಚ್ಚಿನ ರೀತಿಯಲ್ಲಿ ಕಾರ್ಯಕೈಕೊಳ್ಳಿರಿ ಮತ್ತು ದೈವೀ ಪ್ರಭು ಪರಿಣಾಮಗಳ ಕಾಳಜಿ ವಹಿಸುತ್ತಾನೆ.

**CWM, 14/162–63** – ಶ್ರೀಮಾತೆ

*



**ಸರಿಯಾದ ಮನೋಭಾವಕ್ಕಾಗಿ ಅಭೀಪ್ಸೆ**

**ಪರಿಶ್ರಮಪಟ್ಟು ಕಾರ್ಯಮಾಡುವ ಸ್ವ–ಸಂತೋಷದ ನಿರ್ಧಾರ ಕೈಕೊಂಡದ್ದು**

**(ಶ್ರೀಮಾತೆಯವರು ನೀಡಿದ ಆಧ್ಯಾತ್ಮಿಕ ಪ್ರಾಮುಖ್ಯತೆ ಹಾಗೂ ವಿವರಣೆ)**

**Botanical name: Clerodendrum Xspeciosum**

*



ವಸ್ತು–ವಿಷಯಗಳೊಳಗಿರುವ ದೈವೀ ಸರ್ವ–ಅದ್ಭುತನಾದವನ
ದಿವ್ಯಾನಂದವನು ಕುರುಹೆಂದು
ಹಾಗೂ ಮಾರ್ಗದರ್ಶಕವೆಂದು ಅನುಸರಿಸುತ್ತ ಹೀಗೆ ನಾವು ಅವನ
ಬಳಿ ಸಾಗುವೆವು;
ಸೌಂದರ್ಯ ಅವನ ಹೆಜ್ಜೆ ಗುರುತು, ಅವನೆಲ್ಲಿಗೆ ಸಾಗಿ ಹೋದ
ಎಂಬುದನು ಅದು ನಮಗೆ ತೋರಿಸಿಕೊಡುತಿಹುದು,
ದೈವೀ ಪ್ರೇಮ ಮಾನವರ ಎದೆಗಳಲಿ ಅವನ ಹೃದಯದ ಬಡಿತಗಳ
ಲಯಬದ್ಧತೆ,
ದೈವೀ ಸಂತೋಷ ಅವನ ಆರಾಧನೀಯ ಮುಖದ ಮೇಲಿನ
ಮಂದಹಾಸ.

**CWSA, 33/112** – ಶ್ರೀ ಅರವಿಂದರು

*

## ದೈವೀ ಶಕ್ತಿಯಲ್ಲಿ ನಂಬಿಕೆ

ಶತ್ರು ಸೋತು ಓಡಿ ಹೋಗುವಂತೆ ಮಾಡಲು ಅತ್ಯಂತ ಒಳ್ಳೆಯ ಸಾಧನವೆಂದರೆ ಅವನ ಮುಖದೆದುರು ನಗುವುದಾಗಿದೆ.

ದಿನಗಳ ಕಾಲ ಅವನೊಡನೆ ಕೈಕೈ ಮಿಲಾಯಿಸಬಹುದು, ಕಾದಾಡಬಹುದು ಮತ್ತು ಅವನು ಕುಂದದ ಕಸುವನ್ನು ತೋರಿಸಬಹುದು; ಆದರೆ ಒಮ್ಮೆ ಅವನೆದುರು ನಕ್ಕು ಬಿಡಿರಿ, ಅವನು ಕಾಲಿಗೆ ಬುದ್ಧಿ ಹೇಳುತ್ತಾನೆ.

*

ಸ್ವ–ಗಾಢ ನಂಬಿಕೆ ಇರುವ ಒಂದು ನಗು ಮತ್ತು ಭಗವಂತನಲ್ಲಿ ನಂಬಿಕೆ ಇವು ಸಾಧ್ಯವಾಗಬಹುದಾದಷ್ಟು ಸಂಪೂರ್ಣವಾಗಿ ಹಾನಿ ಮಾಡುವ ಬಲವನ್ನು ಕೊಡುತ್ತವೆ. ಅವು ಶತ್ರುವಿನ ಮುಂಚೂಣಿಯನ್ನು ಸ್ಫೋಟಿಸುತ್ತವೆ, ಅವನ ಸೈನ್ಯ ಪಂಕ್ತಿಯಲ್ಲಿ ವಿನಾಶವನ್ನುಂಟು ಮಾಡುತ್ತವೆ ಮತ್ತು ನಿಮ್ಮನ್ನು ವಿಜಯದೊಂದಿಗೆ ಮುಂದೆ ಕೊಂಡೊಯ್ಯುತ್ತವೆ.

**CWM, 3/139** – **ಶ್ರೀಮಾತೆ**

*

ಜೀವನದ ಎಲ್ಲ ಪರಿಸ್ಥಿತಿಗಳು ಅದನ್ನು ನಮಗೆ ಕಲಿಸಿಕೊಡಲು ವ್ಯವಸ್ಥಿತಗೊಂಡಿರುತ್ತವೆ, ಮನಸ್ಸಿನಾಚೆಗಿರುವ ದೈವೀಕೃಪೆಯಲ್ಲಿ ವಿಶ್ವಾಸ ಎಲ್ಲ ಪರೀಕ್ಷೆಗಳಾದ್ಯಂತ ಸಾಗಿ ಹೋಗಲು, ಎಲ್ಲ ದೌರ್ಬಲ್ಯಗಳ ಮೇಲೆ ಜಯಸಾಧಿಸಲು ಮತ್ತು ದೈವೀ ಪ್ರಜ್ಞೆಯೊಂದಿಗೆ ಸಂಪರ್ಕ ಕಂಡುಕೊಳ್ಳಲು ನಮಗೆ ಬಲ ಕೊಡುತ್ತದೆ, ಆ ಸಂಪರ್ಕ ನಮಗೆ ಶಾಂತಿ, ಸಂತೋಷ ಕೊಡುತ್ತದೆಯಷ್ಟೇ ಅಲ್ಲ, ಆದರೆ ಭೌತಿಕ ಸಮತೋಲನ ಮತ್ತು ಒಳ್ಳೆಯ ಆರೋಗ್ಯವನ್ನೂ ಕೊಡುತ್ತದೆ.

**CWM, 10/320** – **ಶ್ರೀಮಾತೆ**

*

ದೈವೀ ಶಕ್ತಿಯಲ್ಲಿ ನಂಬಿಕೆ ನಮ್ಮ ಬಲದ ಹಿಂದೆ, ಯಾವಾಗಲೂ, ಇರಬೇಕು ಮತ್ತು ಆ ಶಕ್ತಿ ಪ್ರಕಟಗೊಂಡಾಗ ಆ ಬಲ ಇರಬೇಕು ಇಲ್ಲವೆ ಅಂತರ್ನಿಹಿತವಾಗಿ

ಮತ್ತು ಸಂಪೂರ್ಣವಾಗಿ ಬೆಳೆಯಬೇಕು. ಅವಳಿಗೆ ಯಾವುದೂ ಅಸಾಧ್ಯವಾಗಿ–ರುವುದಿಲ್ಲ, ಅವಳು ಪ್ರಜ್ಞಾಪೂರ್ಣ ದೈವೀಸಾಮರ್ಥ್ಯ ಮತ್ತು ವಿಶ್ವಂಭರ ದೇವಿ, ಸನಾತನ ಕಾಲದಿಂದ ಎಲ್ಲವನ್ನೂ ಸೃಷ್ಟಿಸುವವಳು ಮತ್ತು ದಿವ್ಯಾತ್ಮನ ಸರ್ವ ಸಾಮರ್ಥ್ಯದೊಡನೆ ಶಸ್ತ್ರಸಜ್ಜಿತಳಾದವಳು.

ಎಲ್ಲ ಜ್ಞಾನ, ಎಲ್ಲ ಬಲಗಳು, ಎಲ್ಲ ವಿಜಯೋತ್ಸಾಹ ಹಾಗೂ ವಿಜಯ, ಎಲ್ಲ ಕೌಶಲ ಹಾಗೂ ಕಾರ್ಯಗಳು ಅವಳ ಕೈಗಳಲ್ಲಿವೆ ಮತ್ತು ಆ ಕೈಗಳು ದಿವ್ಯಾತ್ಮನ ಸಂಪತ್ತುಗಳಿಂದ, ಎಲ್ಲ ಪರಿಪೂರ್ಣತೆಗಳು ಹಾಗೂ ಸಿದ್ಧಿಗಳಿಂದ ತುಂಬಿಕೊಂಡಿವೆ.

*

ನಾವು ಹೊಂದಿರಬೇಕಾದ ಹಾಗೂ ಪರಿಪೂರ್ಣವಾಗುವಂತೆ ಅಭಿವೃದ್ಧಿ ಪಡಿಸಬೇಕಾದ ಈ ನಂಬಿಕೆ ಹೀಗಿದೆ: ಎಲ್ಲ ಕಾರ್ಯಗಳು ಪರಮೋಚ್ಚ ಸ್ವ–ಜ್ಞಾನ ಮತ್ತು ವಿವೇಕ ಇರುವ ವಿಶ್ವಂಭರ ಸ್ಥಿತಿಗಳಡಿಯಲ್ಲಿಯ ಕಾರ್ಯಗತಿಗಳಾಗಿವೆ, ನಮ್ಮಲ್ಲಿ ಇಲ್ಲವೆ ನಮ್ಮ ಸುತ್ತ ಕೈಕೊಂಡ ಯಾವುದೂ ವ್ಯರ್ಥವಾಗುವುದಿಲ್ಲ ಮತ್ತು ಅದರ ನೇಮಕಗೊಂಡ ಸ್ಥಾನ ಮತ್ತು ನ್ಯಾಯಯುತ ಪ್ರಾಮುಖ್ಯತೆ ಇಲ್ಲದೆ ಇರುವುದಿಲ್ಲ, ನಮ್ಮ ಪರಮೋಚ್ಚ ದಿವ್ಯಾತ್ಮನಾದ ಈಶ್ವರ ಕ್ರಿಯೆಯನ್ನು ಕೈಗೆತ್ತಿಕೊಂಡಾಗ ಎಲ್ಲ ಕಾರ್ಯಗಳು ಸಾಧ್ಯವಾಗುತ್ತವೆ ಮತ್ತು ಈ ಮೊದಲು ಕೈಕೊಂಡದ್ದೆಲ್ಲ ಮತ್ತು ಈ ನಂತರ ಅವನು ಕೈಕೊಳ್ಳುವುದೆಲ್ಲ, ಅಮೋಘ ಹಾಗೂ ಪೂರ್ವಭಾವಿಯಾಗಿ ನೋಡುವುದೆಲ್ಲ ಅವನ ಮಾರ್ಗದರ್ಶನದ ಭಾಗವಾಗಿತ್ತು ಮತ್ತು ಅದು ನಮ್ಮ ಯೋಗ ಫಲಪ್ರದವಾಗುವುದಕ್ಕೆ ನಮ್ಮ ಪರಿಪೂರ್ಣತೆಗಾಗಿ ಮತ್ತು ಜೀವನದ ಕಾರ್ಯಕ್ಕಾಗಿ ಉದ್ದೇಶಿತವಾಗಿತ್ತು.

*

ಉಚ್ಚತರ ಜ್ಞಾನ ತೆರೆದುಕೊಂಡ ಹಾಗೆ ಈ ನಂಬಿಕೆ ಹೆಚ್ಚು ಹೆಚ್ಚಾಗಿ ಸಮರ್ಥನೀಯವಾಗುತ್ತದೆ, ನಮ್ಮ ಸೀಮಿತ ಮಾನಸಿಕತೆಯಿಂದ ತಪ್ಪಿಸಿಕೊಂಡ ಶ್ರೇಷ್ಠ ಹಾಗೂ ಚಿಕ್ಕ ಪ್ರಾಮುಖ್ಯತೆಗಳನ್ನು ನಾವು ನೋಡತೊಡಗುತ್ತೇವೆ ಮತ್ತು ನಂಬಿಕೆ ಜ್ಞಾನದಲ್ಲಿ ಸಾಗಿ ಹೋಗುತ್ತದೆ. ಆಗ ಸಂಶಯಪಡುವ ಸಾಧ್ಯತೆಯಾಚೆಗೆ ಸಂಭವಿಸುವುದೆಲ್ಲ ಏಕೈಕ ದೈವೀ ಸಂಕಲ್ಪದ ಕಾರ್ಯಗತಿಯೊಳಗಿಂದಾಗುತ್ತದೆ

ಮತ್ತು ಆ ಸಂಕಲ್ಪವೂ ವಿವೇಕವಾಗಿತ್ತು ಎಂಬುದನ್ನು ನೋಡುವೆವು, ಏಕೆಂದರೆ ಅದು, ಯಾವಾಗಲೂ, ಜೀವನದಲ್ಲಿ ಆತ್ಮದ ಹಾಗೂ ಸ್ವಭಾವದ ನಿಜವಾದ ಕಾರ್ಯಗತಿಗಳನ್ನು ಅಭಿವೃದ್ಧಿಪಡಿಸುತ್ತದೆ. ನಾವು ಈಶ್ವರನ ಸಾನ್ನಿಧ್ಯದ ಭಾವನೆ ತಂದುಕೊಳ್ಳತೊಡಗಿದಾಗ ಮತ್ತು ನಮ್ಮ ಎಲ್ಲ ಅಸ್ತಿತ್ವ, ಪ್ರಜ್ಞೆ, ಯೋಚನೆ, ಸಂಕಲ್ಪ, ಹಾಗೂ ಕ್ರಿಯೆ ಇವೆಲ್ಲ ಅವನ ಕೈಯಲ್ಲಿವೆ ಎಂದು ಭಾವನೆಗೆ ತಂದುಕೊಳ್ಳತೊಡಗಿದಾಗ ಹಾಗೂ ನಮ್ಮ ಆತ್ಮ ಹಾಗೂ ಸ್ವಭಾವಗಳ ಪ್ರತಿಯೊಂದು ಭಾಗ, ನೇರವಾದ ಸರ್ವಾಂತರ್ಯಾಮಿಯಾದ ಹಾಗೂ ಆಕ್ರಮಿಸುವ ದಿವ್ಯಾತ್ಮನ ಸಂಕಲ್ಪಕ್ಕೆ ಒಪ್ಪಿಗೆ ನೀಡಿದಾಗ ಸತ್ತೆಯ ಒಪ್ಪಿಗೆಯ ಅತ್ಯುಚ್ಚ 'ಶ್ರದ್ಧಾ' ಸ್ಥಿತಿ ಇರುವುದು.

**CWSA, 24/780–81** **– ಶ್ರೀ ಅರವಿಂದರು**

*

**ನಂಬಿಕೆ** : *ಕ್ರಿಯಾಶೀಲ ಇಡಿಯಾದ ನೆಚ್ಚಿಕೆ ಹಾಗೂ ಸ್ವೀಕಾರ.*

**ನೆಚ್ಚಿಕೆ** : *ಕೇವಲ ಬೌದ್ಧಿಕವಾಗಿ ಸ್ವೀಕಾರ ಮಾಡುವುದು.*

**ಮನವರಿಕೆ** : *ಒಳ್ಳೆಯ ಕಾರಣಗಳಿಗಾಗಿದೆ ಎಂದು ತೋರಿಬರುವುದರ ಮೇಲೆ ಹಿಡಿದುಕೊಂಡ ಬೌದ್ಧಿಕ ನೆಚ್ಚಿಕೆ.*

**ಭರವಸೆ** : *ಯಾವುದೋ ವಿಷಯಕ್ಕಾಗಿ ವಿಶ್ವಾಸದ ಆಧಾರದ ಮೇಲೆ ಇನ್ನೊಬ್ಬರ ಸಹಾಯದ ಮೇಲೆ ಅವಲಂಬಿಸಿರುವುದು.*

**ವಿಶ್ವಾಸ** : *ಇನ್ನೊಬ್ಬನ ಮಾತು, ಚಾರಿತ್ರ್ಯ ಇತ್ಯಾದಿಗಳಿಂದ ಸಹಾಯ ಹಾಗೂ ಸಹಾಯಗಳಿಗಾಗಿ ತಂದುಕೊಳ್ಳಬಹುದಾದ ನಿಶ್ಚಿತ ನಿರೀಕ್ಷೆಯ ಭಾವನೆ.*

**ದೃಢ ವಿಶ್ವಾಸ** : *ವಿಶ್ವಾಸದೊಂದಿಗಿರುವ ನಿರ್ಭಯತೆಯ ಭಾವನೆ.*

*

ಓ, ದೈವೀ ಶಕ್ತಿಯ ಒತ್ತಾಯದಿಂದಾಗಿ, ವಿಧಿಯ ಎಳೆತಕ್ಕೊಳಗಾದ
ಪಾರ್ಥಿವ ಕುಲವೆ,
ಅನಂತ ಜಗತ್ತಿನಲ್ಲಿರುವ ಓ ಕ್ಷುದ್ರ ಸಾಹಸಿಗಳೆ

ಹಾಗೂ ಕುಬ್ಜ ಮನುಕುಲದ ಸೆರೆಯಾಳುಗಳೆ,
ನಿಮ್ಮ ಚಿಕ್ಕ ಆತ್ಮ ಹಾಗೂ ಕ್ಷುದ್ರ ವಿಷಯಗಳ ಸುತ್ತ
ಎಷ್ಟು ಕಾಲದವರೆಗೆ ನಿಮ್ಮ ಚಿಕ್ಕ ಆತ್ಮ ಹಾಗೂ
ಕ್ಷುದ್ರ ವಸ್ತು–ವಿಷಯಗಳ ಸುತ್ತ
ಮನಸ್ಸಿನ ಸುತ್ತು ಹೊಡೆಯುತ್ತಿರುವ ಮಾರ್ಗದ ಮೇಲೆ ಹೆಜ್ಜೆ
ಇರಿಸುವಿರಿ?
ಆದರೆ ಬದಲಾಗದ ಅಲ್ಪತನಕ್ಕಾಗಿ ನೀವಿರುವುದರ ಉದ್ದೇಶವಲ್ಲ,
ವ್ಯರ್ಥ ಪುನರಾವರ್ತನೆಗಾಗಿ ನಿಮ್ಮನ್ನು ನಿರ್ಮಾಣ ಮಾಡಲಾಗಿಲ್ಲ;
ದೈವೀ ಅಮರನ ದ್ರವ್ಯದಿಂದ ನಿಮ್ಮನ್ನು ತಯಾರಿಸಲಾಗಿಹುದು; . . .
ಒಬ್ಬ ಋಷಿ, ಒಬ್ಬ ಬಲಿಷ್ಠ ದೈವೀ ಸೃಷ್ಟಿಕರ್ತ ಅಂತರಂಗದಲ್ಲಿಹನು
ನಿಮ್ಮ ಮುಂಚೂಣಿಯಲ್ಲಿ ಶ್ರೇಷ್ಠತರ ಅದೃಷ್ಟ ನಿಮಗಾಗಿ
ಕಾದುಕೊಂಡಿಹುದು:
ಈ ನಶ್ವರ ಪಾರ್ಥಿವ ಸತ್ತೆ ಸಂಕಲ್ಪ ಮಾಡಿದರೆ
ತನ್ನ ಕಾರ್ಯಗಳನು ವಿಶ್ವಾತೀತ ಯೋಜನೆಗೆ ಸರಿಹೊಂದಿಸಬಹುದು.

**CWSA, 33/370** **– ಶ್ರೀ ಅರವಿಂದರು**

*

**ವಿನಮ್ರತೆ**

ಒಂದು ವಿಷಯ ಕುರಿತು ಯಾವಾಗಲೂ ಹೇಳಲಾಗಿದೆ, ಆದರೆ ಅದನ್ನು ಯಾವಾಗಲೂ ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿದೆ, ಅದು ವಿನಮ್ರತೆಯ ಆವಶ್ಯಕತೆ. ಅದನ್ನು ತಪ್ಪಾದ ರೀತಿಯಲ್ಲಿ ಗ್ರಹಿಸಲಾಗಿದೆ, ಮತ್ತು ತಪ್ಪಾದ ರೀತಿಯಲ್ಲಿ ಉಪಯೋಗಿಸಲಾಗಿದೆ. ಸರಿಯಾದ ರೀತಿಯಲ್ಲಿ ವಿನಮ್ರರಾಗಿರ–ಬಲ್ಲಿರಾದರೆ ಹಾಗಿದ್ದುಕೊಳ್ಳಿರಿ, ಅದಕ್ಕೂ ಹೆಚ್ಚಾಗಿ ತಪ್ಪಾದ ರೀತಿಯಲ್ಲಿ ವಿನಮ್ರರಾಗಿರುವುದು ಬೇಡ, ಏಕೆಂದರೆ ಅದು ನಿಮ್ಮನ್ನು ಎಲ್ಲಿಗೂ ಕರೆದೊಯ್ಯಲಾರದು. ಆದರೆ ಒಂದು ವಿಷಯವಿದೆ; ಜಂಬ ಎಂದು ಕರೆಯಲಾದ ಕಳೆ (weed)ಯನ್ನು ನಿಮ್ಮಿಂದ ಕಿತ್ತಿ ತೆಗೆಯಬಲ್ಲಿರಾದರೆ, ಆಗ ನಿಜವಾಗಿ ನೀವು ಏನನ್ನೋ ಕೈಕೊಂಡಿರುತ್ತೀರಿ. ಆದರೆ ಅದು ಎಷ್ಟು ಕಠಿಣವಾದದ್ದು ಎಂಬುದನ್ನು

ನೀವು ತಿಳಿದಿರಬೇಕು! ಜಂಬದಿಂದ ತುಂಬಿಕೊಂಡ ಸ್ವ–ಸಂತೃಪ್ತಿಯಿಲ್ಲದೆ ಏನನ್ನೂ ಸರಿಯಾಗಿ ಕೈಕೊಳ್ಳಲಾರಿರಿ (ಅದರ ಬಗ್ಗೆ ನಿಮಗೆ ಅರಿವು ಕೂಡ ಇರದೆ ಹೋಗಬಹುದು), ಸುಂದರವಾದ ವಿಚಾರ ಮಾಡಲಾರಿರಿ, ಸರಿಯಾದ ಚಲನೆ ನಿಮ್ಮದಾಗಿರುವುದಿಲ್ಲ, ಚಿಕ್ಕ ಪ್ರಗತಿಯನ್ನೂ ಸಾಧಿಸಲಾರಿರಿ ಮತ್ತು ಆಗ ಅದನ್ನು ಭಗ್ನಗೊಳಿಸಲು ಅದಕ್ಕೆ ಬಲವಾದ ಸುತ್ತಿಗೆ ಪೆಟ್ಟುಕೊಡುವ ನಿರ್ಬಂಧಕ್ಕೊಳ–ಗಾಗುತ್ತೀರಿ. ಅದು ಭಗ್ನಗೊಂಡಾಗಲೂ ಕೂಡ ಅದರ ಚೂರುಗಳು ಉಳಿದು–ಕೊಳ್ಳುತ್ತವೆ ಮತ್ತು ಅವು ಚಿಗುರೊಡೆಯಲು ಪ್ರಾರಂಭಿಸುತ್ತವೆ. ಮನುಷ್ಯ ತನ್ನ ಇಡೀ ಜೀವನದ ಕಾಲದಲ್ಲಿ ಮತ್ತೆ, ಮತ್ತೆ ಚಿಗುರಿ ಮೇಲಕ್ಕೆದ್ದುಬರುವ ಈ ಕಳೆಯನ್ನು ಬೇರುಸಹಿತ ಕಿತ್ತುಹಾಕುವ ಕಾರ್ಯವನ್ನು ಎಂದೂ ಮರೆಯಬಾರದು. ಅದು ಎಷ್ಟೊಂದು ಗುಟ್ಟಾಗಿ ಬೆಳೆಯುತ್ತದೆಂದರೆ ನೀವು ಅದು ಹೋಗಿಬಿಟ್ಟಿತೆಂದು ನಂಬಿರುತ್ತೀರಿ ಮತ್ತು ಬಹಳ ವಿನೀತರಾಗಿ ಹೇಳುತ್ತೀರಿ: “ಅದನ್ನು ಕೈಕೊಂಡವನು ನಾನಲ್ಲ, ಅದು ಭಗವಂತನ ಕಾರ್ಯ. ಅವನಿಲ್ಲದೆ ನಾನೇನೂ ಅಲ್ಲ” ಮತ್ತು ಮುಂದಿನ ಕ್ಷಣ ಆ ರೀತಿ ಯೋಚಿಸಿದ ಸರಳ ಕಾರಣದಿಂದಾಗಿ ಬಹಳ ಸಂತೃಪ್ತಿಯಿಂದಿರುತ್ತೀರಿ.

**ಪ್ರಶ್ನೆ:** *ವಿನೀತರಾಗಿರುವುದಕ್ಕೆ ಸರಿಯಾದ ಮತ್ತು ಸರಿಯಾಗಿರದ ಮಾರ್ಗಗಳು ಯಾವವು?*

**ಶ್ರೀಮಾತೆ:** ಅದು ಬಹಳ ಸರಳವಾಗಿದೆ. ಜನರಿಗೆ “ವಿನೀತರಾಗಿರಿ” ಎಂದು ಹೇಳಿದಾಗ ಅವರು ಕೂಡಲೆ “ಇತರರ ಎದುರಿನಲ್ಲಿ ವಿನೀತರಾಗಿರುವುದು” ಎಂದು ಯೋಚಿಸುತ್ತಾರೆ ಮತ್ತು ಆ ಬಗೆಯ ವಿನಮ್ರತೆ ತಪ್ಪಾದದ್ದು. ನಿಜವಾದ ವಿನಮ್ರತೆ ಭಗವಂತನ ಎದುರಿನಲ್ಲಿ ವಿನೀತನಾಗಿರುವುದಾಗಿದೆ, ಎಂದರೆ ಭಗವಂತನಿಲ್ಲದೆ ಮನುಷ್ಯ ಏನೂ ಅಲ್ಲ. ಅವನು ಏನನ್ನೂ ಮಾಡಲಾರ, ಏನನ್ನೂ ತಿಳಿದುಕೊಳ್ಳಲಾರ ಎಂಬ ಜೀವಂತ ಭಾವನೆಯನ್ನು ಹೊಂದಿರುವು–ದಾಗಿದೆ. ಮನುಷ್ಯನೊಬ್ಬ ಅಸಾಧಾರಣ ಬುದ್ಧಿಮತ್ತೆಯುಳ್ಳವನಾಗಿದ್ದರೂ, ಸಮರ್ಥನಾಗಿದ್ದರೂ ಅದು ಭಗವಂತನ ಪ್ರಜ್ಞೆಯ ಮುಂದೆ ಏನೂ ಅಲ್ಲ, ಮತ್ತು ಮನುಷ್ಯ ಈ ಭಾವನೆಯನ್ನು ಯಾವಾಗಲೂ ಹೊಂದಿರಬೇಕು, ಏಕೆಂದರೆ ಆಗ ಅವನು ಗ್ರಹಣಶಕ್ತಿಯ ನಿಜವಾದ ಮನೋಭಾವ ಹೊಂದಿರುತ್ತಾನೆ. ವಿನೀತವಾದ

ಗ್ರಹಣಶಕ್ತಿ ತನ್ನ ವೈಯಕ್ತಿಕ ನಟನೆಗಳನ್ನು ಭಗವಂತನಿಗೆ ವಿರೋಧ ವ್ಯಕ್ತಪಡಿಸುವ ರೀತಿಯಲ್ಲಿ ಇರಿಸುವುದಿಲ್ಲ.

**CWM, 5/44–45** **– ಶ್ರೀಮಾತೆ**

*

**ಪ್ರಶ್ನೆ:** *ಶ್ರೀಮಾತೆಯವರೆ, ನಾವು ಪ್ರಯತ್ನವೊಂದನ್ನು ಕೈಕೊಂಡಾಗ, ನಮ್ಮಲ್ಲಿರುವ ಏನೋ ಒಂದು ಬಹಳ ಸ್ವ–ಸಂತೃಪ್ತಿಯಲ್ಲಿರುತ್ತದೆ, ಜಂಬ ಕೊಚ್ಚಿಕೊಳ್ಳುತ್ತದೆ ಮತ್ತು ಈ ಪ್ರಯತ್ನದಿಂದ ಸಮಾಧಾನ ತಂದುಕೊಂಡಿರುತ್ತದೆ ಮತ್ತು ಅದು ಎಲ್ಲವನ್ನೂ ಹಾಳುಮಾಡುತ್ತದೆ, ಹಾಗಾಗಿ ಅದನ್ನು ತೊಡೆದು ಹಾಕುವುದು ಹೇಗೆ?*

**ಶ್ರೀಮಾತೆ:** ಅಹಾ, ಅದು ತಾನು ಕೈಕೊಳ್ಳುತ್ತಿರುವುದನ್ನು ನೋಡುತ್ತಿರುವುದಾಗಿದೆ. ಮನುಷ್ಯ ಏನೋ ಒಂದನ್ನು ಕೈಕೊಳ್ಳುತ್ತಿರುವಾಗ ಅದನ್ನು ಅವಲೋಕನ ಮಾಡುವ, ಒಬ್ಬರು ಅಲ್ಲಿರುತ್ತಾರೆ. ಈಗ ಅವನು ಕೆಲವೊಮ್ಮೆ ಬಹಳ ಗರ್ವಿಷ್ಠನಾಗಿರುತ್ತಾನೆ. ಸ್ಪಷ್ಟವಾಗಿ ಇದು ಪ್ರಯತ್ನದಿಂದ ಬಹಳಷ್ಟು ಬಲವನ್ನು ತೆಗೆದುಕೊಂಡು ಹೋಗುತ್ತದೆ. ಅದೇ ಇದು ಎಂದು ನನಗನಿಸುತ್ತದೆ. ಕಾರ್ಯ ಕೈಕೊಳ್ಳುತ್ತಿರುವಾಗ ತನ್ನನ್ನು ನೋಡುತ್ತಿರುವ, ತಾನು ಜೀವಿಸುತ್ತಿರುವುದನ್ನು ನೋಡುತ್ತಿರುವ ರೂಢಿ ಇದಾಗಿದೆ. ಮನುಷ್ಯ ತನ್ನನ್ನು ಅವಲೋಕನ ಮಾಡುತ್ತಿರುವುದು ಅವಶ್ಯವಾಗಿದೆ, ಆದರೆ, ಪರಿಪೂರ್ಣವಾಗಿ ನಿಷ್ಕಪಟನಾಗಿ–ರುವುದು ಮತ್ತು ಸ್ವಯಂಪ್ರೇರಿತನಾಗಿರುವುದು ಅದಕ್ಕಿಂತಲೂ ಹೆಚ್ಚು ಅವಶ್ಯ–ವಾಗಿದೆ, ಮನುಷ್ಯ ತಾನು ಕೈಕೊಳ್ಳುತ್ತಿರುವುದರಲ್ಲಿ, ಕೆಲವೊಮ್ಮೆ ತನ್ನನ್ನು ಕಠೋರವಾಗಿ ತೀರ್ಮಾನಕ್ಕೊಳಪಡಿಸುವುದರಲ್ಲಿ ಯಾವಾಗಲೂ ಅವಲೋಕನ ಮಾಡುವುದಲ್ಲ. ಅದು ವಾಸ್ತವದಲ್ಲಿ ಅವನು ಸ್ವ–ಸಂತೃಪ್ತಿಯಿಂದ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡಷ್ಟೇ ಕೆಟ್ಟದಾಗಿರುತ್ತದೆ. ಮನುಷ್ಯ ಅಭೀಪ್ಸೆಪಡುವುದರಲ್ಲಿ ಎಷ್ಟೊಂದು ನಿಷ್ಕಪಟನಾಗಿರಬೇಕೆಂದರೆ ತಾನು ಅಭೀಪ್ಸೆಪಡುತ್ತಿದ್ದೇನೆಂಬುದರ ಅರಿವು ಅವನಲ್ಲಿ ಉಳಿದುಕೊಳ್ಳಬಾರದು. ಅವನು ಅಭೀಪ್ಸೆಯೇ ಆಗಿಬಿಡಬೇಕು.

ಒಂದು ನಿಮಿಷ, ಈ ವಿಷಯವಿರುವ ಒಂದು ನಿಮಿಷ ಸಿದ್ಧಿಗಾಗಿ ಬೇಕಾಗುವ ಹಲವಾರು ವರ್ಷಗಳ ತಯಾರಿ ಮಾಡುತ್ತದೆ, ತನ್ನನ್ನು ಪರಿಗಣಿಸದೆ

ಇರುವ, ತಾನು ಕೈಕೊಳ್ಳುತ್ತಿರುವುದನ್ನು ನೋಡುತ್ತಿರುವುದರ ಬಗ್ಗೆ ಅಹಂಕಾರ ರಹಿತನಾದ, ತಾನೇ ಸ್ವತಃ ಕ್ರಿಯೆಯೇ ಆಗಿಬಿಟ್ಟ, ಅಭೀಪ್ಸೆಯಲ್ಲಿ ಎಲ್ಲದರ ಮೇಲಿರುವ ವ್ಯಕ್ತಿಯಾದಾಗ ಅದು ನಿಜವಾಗಿ ಒಳ್ಳೆಯದಾಗಿರುತ್ತದೆ. ಇನ್ನು ಮುಂದೆ ಅಭೀಪ್ಸೆ ಪಡುವ ವ್ಯಕ್ತಿಯಿರದೆ, ಅದು ಪೂರ್ತಿ ಏಕಾಗ್ರಗೊಂಡು ಮೇಲ್ಗಡೆ ಜಿಗಿದು ಬರುವ ಅಭೀಪ್ಸೆಯಾದಾಗ, ನಿಜವಾಗಿ ಬಹಳ ದೂರ ಸಾಗಿ ಹೋಗುತ್ತದೆ. ಹಾಗಿರದೆ ಇದ್ದಾಗ ಅಲ್ಲಿ ಯಾವಾಗಲೂ ಚಿಕ್ಕ ಜಂಬ, ಚಿಕ್ಕ ಸ್ವ–ಸಂತೃಪ್ತಿ, ಹಾಗೆಯೇ ತನಗಾಗಿ ಸ್ವಲ್ಪ ಮರುಕ ಇವೆಲ್ಲ ಮಿಶ್ರಣಗೊಂಡಿರುತ್ತವೆ, ಅದು ಎಲ್ಲವನ್ನೂ ಹಾಳು ಮಾಡುತ್ತದೆ.

**CWM, 6/402** **– ಶ್ರೀಮಾತೆ**

*

**ಔದಾರ್ಯ**

"ಹೃದಯ ವೈಶಾಲ್ಯ ಮತ್ತು ಔದಾರ್ಯ ಇವು ಆತ್ಮದ ಆಕಾಶದ್ರವ್ಯದ ಅಂತರಿಕ್ಷ, ಅವುಗಳಿಲ್ಲದೆ ಇದ್ದಾಗ ಮನುಷ್ಯ ಕತ್ತಲು ಗವಿಯಲ್ಲಿ ಕೀಟವೊಂದನ್ನು ನೋಡುತ್ತಿರುತ್ತಾನೆ."

*

ಚಿಂತನಗಳು ಹಾಗೂ ಸೂಕ್ತಿಗಳು–

**– ಶ್ರೀ ಅರವಿಂದರು**

ಶ್ರೀಮಾತೆಯವರು ವಿವರಿಸಿ ಹೇಳುತ್ತಾರೆ:

ಹೃದಯ ವೈಶಾಲ್ಯ ಎಲ್ಲ ವ್ಯಕ್ತಿಗತ ಲೆಕ್ಕಾಚಾರವನ್ನು ತಿರಸ್ಕರಿಸುವುದಾಗಿದೆ.

ಔದಾರ್ಯ ಇನ್ನಿತರರ ತೃಪ್ತಿಯಲ್ಲಿ ತನ್ನ ತೃಪ್ತಿಯನ್ನು ಕಂಡುಕೊಳ್ಳುವುದಾಗಿದೆ.

**CWM, 10/282** **– ಶ್ರೀಮಾತೆ**

*

**ಪ್ರಶ್ನೆ:** *ಮಹಾಲಕ್ಷ್ಮಿಯ ಬಗ್ಗೆ ಶ್ರೀ ಅರವಿಂದರು ಹೇಳಿದ್ದು ಹೀಗಿದೆ: “ಬಡವಾದದ್ದೆಲ್ಲ ಅವಳ ಆಗಮನವನ್ನು ದೂರವಿರಿಸುತ್ತದೆ.”*

**ಶ್ರೀಮಾತೆ:** ಹೌದು, ಬಡವಾದದ್ದು, ಔದಾರ್ಯವಿಲ್ಲದೆ ಇದ್ದದ್ದು, ಉತ್ಸಾಹವಿಲ್ಲದೆ ಇದ್ದದ್ದು, ವೈಶಾಲ್ಯವಿಲ್ಲದೆ ಇದ್ದದ್ದು, ಆಂತರಿಕ ಶ್ರೀಮಂತಿಕೆ ಇಲ್ಲದೆ ಇದ್ದದ್ದು, ಶುಷ್ಕವಾದದ್ದು, ಭಾವಶೂನ್ಯವಾದದ್ದು, ಸುತ್ತಿಕೊಂಡದ್ದು ಇಂತಹದೆಲ್ಲ ಮಹಾಲಕ್ಷ್ಮಿಯ ಆಗಮನವನ್ನು ದೂರವಿರಿಸುತ್ತದೆ. ಅದು ಧನದ ದೊಡ್ಡ ಮೊತ್ತವನ್ನು ಹೊಂದಿರುವ ಪ್ರಶ್ನೆಯಲ್ಲ. ಅತ್ಯಂತ ಶ್ರೀಮಂತನಾದ ಮನುಷ್ಯ ಮಹಾಲಕ್ಷ್ಮಿಯ ದೃಷ್ಟಿಕೋನದಲ್ಲಿ ಭಯಾನಕವೆನಿಸುವ ರೀತಿಯಲ್ಲಿ ಬಹಳ ಬಡವನಾಗಿರಬಹುದು. ಹೃದಯ ವೈಶಾಲ್ಯದಿಂದ ಕೂಡಿದ ಬಡವನಾದ ಮನುಷ್ಯ ಅವಳ ದೃಷ್ಟಿಕೋನದಲ್ಲಿ ಬಹಳ ಶ್ರೀಮಂತನಾಗಿರಬಹುದು.

ಒಳ್ಳೆಯ ಗುಣ, ಶಕ್ತಿ, ಬಲ, ಔದಾರ್ಯ ಇವುಗಳಿಲ್ಲದ ಮನುಷ್ಯ ಬಡವ–ನಾಗಿರುತ್ತಾನೆ, ಅವನು ದುಃಖಿತನೂ, ಅಸಂತುಷ್ಟನೂ ಆಗಿರುತ್ತಾನೆ. ಅಲ್ಲದೆ ಮನುಷ್ಯನಲ್ಲಿ ಔದಾರ್ಯವಿಲ್ಲದಿದ್ದಾಗ ಮಾತ್ರ ಅವನು ಅಸಂತುಷ್ಟನಾಗಿರುತ್ತಾನೆ–ತನ್ನದನ್ನು ಲೆಕ್ಕಾಚಾರ ಮಾಡದೆ ಕೊಟ್ಟುಬಿಡುವ ಉದಾರ ಸ್ವಭಾವದ ಮನುಷ್ಯ ಎಂದಿಗೂ ಅಸಂತುಷ್ಟನಾಗಿರುವುದಿಲ್ಲ. ತಮ್ಮ ಮೇಲೆಯೇ ತಮ್ಮನ್ನು ಸುತ್ತಿಕೊಂಡಿರುವ, ವಸ್ತು–ವಿಷಯಗಳನ್ನು ಯಾವಾಗಲೂ ತಮ್ಮತ್ತ ಸೆಳೆದುಕೊಳ್ಳಲು ಬಯಸುವ, ವಸ್ತು–ವಿಷಯಗಳನ್ನು ಹಾಗೂ ಜಗತ್ತನ್ನು ತಮ್ಮ ಮೂಲಕವಷ್ಟೇ ನೋಡುವ ಜನರು ಅಸಂತುಷ್ಟರಾಗಿರುತ್ತಾರೆ. ಆದರೆ ಉದಾರ ಭಾವದಿಂದ, ಯಾವ ಲೆಕ್ಕಾಚಾರ ಮಾಡದೆ ತನ್ನನ್ನು ಕೊಟ್ಟುಕೊಳ್ಳಲು ಬಯಸುವ ಮನುಷ್ಯ ಎಂದೆಂದಿಗೂ ಅಸಂತುಷ್ಟನಾಗಿರುವುದಿಲ್ಲ, ತೆಗೆದುಕೊಳ್ಳಲು ಬಯಸುವವನು ಅಸಂತುಷ್ಟನಾಗಿ–ರುತ್ತಾನೆ, ತನ್ನನ್ನು ಕೊಟ್ಟುಕೊಳ್ಳುವವನು ಎಂದಿಗೂ ಅಸಂತುಷ್ಟನಾಗಿರುವುದಿಲ್ಲ.

**CWM, 4/403–04** **– ಶ್ರೀಮಾತೆ**

*

**ಪ್ರಶ್ನೆ:** *ಔದಾರ್ಯವೆಂದರೆ ಸತ್ಯ ವಿರೂಪಗೊಂಡ ಒಂದು ಸ್ಥಿತಿಯೆ?*

**ಶ್ರೀಮಾತೆ:** ಹೌದು, ಎಲ್ಲ ಮಾನವ ಗುಣಗಳು, ಅವುಗಳ ಹಿಂದಿರುವ ಸತ್ಯವೊಂದರ ವಿರೂಪಗೊಂಡ ಸ್ಥಿತಿಗಳಾಗಿರುತ್ತವೆ. ಒಳ್ಳೆಯ ಗುಣಗಳು, ದೋಷಗಳು ಎಂದು

ನೀವು ಕರೆಯುವ ಎಲ್ಲವೂ, ಯಾವಾಗಲೂ, ಅವುಗಳ ಹಿಂದಿರುವ ಏನೋ ಒಂದರ ವಿರೂಪಗೊಂಡ ಸ್ಥಿತಿಗಳಾಗಿರುತ್ತವೆ ಮತ್ತು ಅದು ಇದಾಗಲಿ, ಅದಾಗಲಿ ಆಗಿರದೆ ಮತ್ತೇನೋ ಆಗಿರುತ್ತದೆ. ಆದರೆ ಔದಾರ್ಯದ ಹಿಂದೆ ಇರುವ ಸತ್ಯ ಯಾವುದು ಎಂಬುದನ್ನು ನಾನು ಹೇಳುತ್ತೇನೆ: ಅದು ಶಕ್ತಿಗಳನ್ನು ಹರಡುವ ಚಲನೆಯಾಗಿರುತ್ತದೆ. ಆದರೆ ಈ ಶಕ್ತಿಗಳು ಹರಡಿಕೊಳ್ಳಲು ಮೊದಲು ಅವು ಒಟ್ಟುಗೂಡಬೇಕು. ಹಾಗಾಗಿ ಒಂದು ಬಗೆಯ ಲಯಬದ್ಧವಾದ, ಹಿಗ್ಗುವ ಹಾಗೂ ಕುಗ್ಗುವ ಚಲನೆಯಿರುತ್ತದೆ: ಶಕ್ತಿಗಳು ಒಟ್ಟುಗೂಡುತ್ತವೆ ನಂತರ ಹರಡಿಕೊಳ್ಳುತ್ತವೆ, ಅವು ಮತ್ತೆ ಒಟ್ಟುಗೂಡುತ್ತವೆ ಹಾಗೂ ಮತ್ತೆ ಹರಡಿ–ಕೊಳ್ಳುತ್ತವೆ. ಆದರೆ ನೀವು ಯಾವಾಗಲೂ ಹರಡಲು ಬಯಸಿದರೆ ಕೆಲ ಸಮಯದ ನಂತರ ಹರಡಲು ನಿಮ್ಮಲ್ಲಿ ಏನೂ ಉಳಿದಿರುವುದಿಲ್ಲ. ಎಲ್ಲ ಶಕ್ತಿಗಳಿಗೂ ವಿಷಯ ಅದೇ ಆಗಿರುತ್ತದೆ.

*

ನಾನು ನೈತಿಕ ಔದಾರ್ಯ ಕುರಿತು ಹೇಳಲು ಬಯಸುತ್ತೇನೆ: ಉದಾಹರಣೆಗೆ ಜೊತೆಗಾರನೊಬ್ಬ ಯಶಸ್ಸು ಗಳಿಸಿದಾಗ ಸಂತೋಷದ ಭಾವನೆ ತಂದುಕೊಳ್ಳುವುದು, ಧೈರ್ಯದಿಂದ ಕೈಕೊಂಡ ಒಂದು ಕಾರ್ಯ, ನಿಸ್ವಾರ್ಥದ ಕಾರ್ಯ, ಉದಾತ್ತ ತ್ಯಾಗ ಇವುಗಳಲ್ಲಿ ನಿಮಗೆ ಸಂತೋಷ ತಂದುಕೊಡುವ ಸೌಂದರ್ಯವಿರುತ್ತದೆ. ಇತರರ ನಿಜವಾದ ಯೋಗ್ಯತೆಯನ್ನು ಮತ್ತು ಉತ್ಕೃಷ್ಟತೆಯನ್ನು ಗುರುತಿಸಲು ಶಕ್ತರಾಗಿರುವುದನ್ನು ನೈತಿಕ ಔದಾರ್ಯ ಒಳಗೊಳ್ಳುತ್ತದೆ ಎಂದು ಹೇಳಬಹುದು.

**CWM, 10/282, 4/403–04, 5/356, 4/30** **– ಶ್ರೀಮಾತೆ**

*

ನಾನಿಲ್ಲಿ ಪ್ರಾಪಂಚಿಕ ಔದಾರ್ಯ ಕುರಿತು ಮಾತನಾಡುವುದಿಲ್ಲ, ಅದು ಮನುಷ್ಯ ತನ್ನಲ್ಲಿರುವುದನ್ನು ಇತರರಿಗೆ ಕೊಡುವುದನ್ನು ಒಳಗೊಂಡಿರುತ್ತದೆ. ಆದರೆ ಈ ಸದ್ಗುಣ ಕೂಡ ವಿಸ್ತಾರವಾಗಿ ಹರಡಿಕೊಂಡಿಲ್ಲ, ಏಕೆಂದರೆ ಮನುಷ್ಯ ಶ್ರೀಮಂತನಾದ ಕೂಡಲೆ ಅವನು ಬಹಳಷ್ಟು ಸಲ ತನ್ನ ಸಂಪತ್ತನ್ನು, ಇತರರಿಗೆ ಕೊಡುವುದರ ಬದಲಾಗಿ, ಕಾಪಾಡಿಕೊಂಡು ಬರುವುದನ್ನು ಕುರಿತು ಯೋಚಿಸುತ್ತಾನೆ.

ನಾನು ನೈತಿಕ ಔದಾರ್ಯ ಕುರಿತು ಹೇಳಲು ಬಯಸುತ್ತೇನೆ. ಉದಾಹರಣೆಗೆ ಜೊತೆಗಾರನೊಬ್ಬ ಯಶಸ್ಸು ಗಳಿಸಿದಾಗ ಸಂತೋಷದ ಭಾವನೆ ತಂದುಕೊಳ್ಳುವುದು, ಧೈರ್ಯದಿಂದ ಕೈಕೊಂಡ ಒಂದು ಕಾರ್ಯ, ನಿಸ್ವಾರ್ಥದ ಕಾರ್ಯ, ಉದಾತ್ತ ತ್ಯಾಗ ಇವುಗಳಲ್ಲಿ ನಿಮಗೆ ಸಂತೋಷ ತಂದುಕೊಡುವ ಸೌಂದರ್ಯವಿರುತ್ತದೆ. ಇತರರ ನಿಜವಾದ ಯೋಗ್ಯತೆಯನ್ನು ಮತ್ತು ಉತ್ಕೃಷ್ಟತೆಯನ್ನು ಗುರುತಿಸಲು ಶಕ್ತರಾಗಿರುವುದನ್ನು ನೈತಿಕ ಔದಾರ್ಯ ಒಳಗೊಳ್ಳುತ್ತದೆ ಎಂದು ಹೇಳಬಹುದು.

**CWM, 4/30** **– ಶ್ರೀಮಾತೆ**

*

ವಿಷಯಗಳನ್ನು ಕುರಿತು ನೈತಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಕೋನಗಳ ನಡುವಿರುವ ಭಿನ್ನತೆಯ ಉದಾಹರಣೆಯನ್ನು ತೆಗೆದುಕೊಳ್ಳೋಣ. ಸರ್ವಸಾಧಾರಣ ಸಾಮಾಜಿಕ ಯೋಚನೆಗಳು ಜನರ ಎರಡು ವರ್ಗಗಳ ನಡುವೆ ಭಿನ್ನತೆ ಮಾಡುತ್ತವೆ– ಉದಾರರಾದವರು ಮತ್ತು ಅತ್ಯಾಸೆಯುಳ್ಳವರು. ಅತ್ಯಾಸೆಯುಳ್ಳ–ವನನ್ನು ತಿರಸ್ಕಾರದಿಂದ ನೋಡುತ್ತಾರೆ, ದೂಷಿಸುತ್ತಾರೆ. ಅದು ಹಾಗಿರುವಾಗ ಉದಾರ ಮನುಷ್ಯನನ್ನು ನಿಸ್ವಾರ್ಥಿಯೆಂದು, ಸಮಾಜಕ್ಕೆ ಉಪಯುಕ್ತನಾಗಿರುವನೆಂದು ಪರಿಗಣಿಸುತ್ತಾರೆ ಮತ್ತು ಅವನ ಸದ್ಗುಣಕ್ಕಾಗಿ ಅವನನ್ನು ಹೊಗಳುತ್ತಾರೆ. ಆದರೆ ಆಧ್ಯಾತ್ಮಿಕ ದೃಷ್ಟಿಗೆ ಅವರಿಬ್ಬರೂ ಅದೇ ಸ್ತರದಲ್ಲಿ ನಿಂತಿರುತ್ತಾರೆ, ಒಬ್ಬನ ಔದಾರ್ಯ ಮತ್ತು ಇನ್ನೊಬ್ಬನ ಅತ್ಯಾಸೆ ಇವು ಉಚ್ಚತರ ಸತ್ಯವೊಂದರ, ಶ್ರೇಷ್ಠತರ ದೈವೀ ಸಾಮರ್ಥ್ಯದ ವಿರೂಪಗಳಾಗಿರುತ್ತವೆ. ದೈವೀ ಚಲನೆಯ ಒಂದು ಸಾಮರ್ಥ್ಯವಿದೆ, ಅದು ಹರಡಿಕೊಳ್ಳುತ್ತದೆ, ಪ್ರಸರಿಸುತ್ತದೆ, ಶಕ್ತಿಗಳನ್ನು, ವಿಷಯಗಳನ್ನು ಮತ್ತು ತನ್ನ ವಶದಲ್ಲಿದ್ದ ಇನ್ನೇನನ್ನಾದರೂ ಹೊರಗೆ ಸ್ವಭಾವದ ಎಲ್ಲ ಸ್ತರಗಳ ಮೇಲೆ, ಅತ್ಯಂತ ಪ್ರಾಪಂಚಿಕವಾದದ್ದರಿಂದ ಹಿಡಿದು ಅತ್ಯಂತ ಆಧ್ಯಾತ್ಮಿಕ ಸ್ತರದವರೆಗೆ ಎಲ್ಲದರ ಮೇಲೆ ಮುಕ್ತವಾಗಿ ಚೆಲ್ಲಿಕೊಡುತ್ತದೆ. ಉದಾರ ಮನುಷ್ಯ ಹಾಗೂ ಅವನ ಔದಾರ್ಯ ಇವುಗಳ ಹಿಂದೆ ಒಂದು ಜೀವ–ಮಾದರಿ ಇರುತ್ತದೆ, ಅದು ಈ ಚಲನೆಯನ್ನು ಅಭಿವ್ಯಕ್ತಗೊಳಿಸುತ್ತದೆ; ಅವನು ಪ್ರಸರಣದ, ವಿಸ್ತಾರವಾಗಿ ಹಂಚುವುದರ ಒಂದು ಸಾಮರ್ಥ್ಯವಾಗಿರುತ್ತಾನೆ. ಅಲ್ಲಿ ಇನ್ನೊಂದು ಸಾಮರ್ಥ್ಯವಿದೆ, ಇನ್ನೊಂದು ದೈವೀ ಚಲನೆಯಿದೆ, ಅದು ಕೂಡಿ ಹಾಕುತ್ತದೆ,

ಶೇಖರಿಸುತ್ತದೆ, ಅದು ಶಕ್ತಿಗಳನ್ನು, ವಸ್ತು–ವಿಷಯಗಳನ್ನು ಒಟ್ಟುಗೂಡಿಸುತ್ತದೆ, ಶೇಖರಿಸಿ ಪಡೆಯುತ್ತದೆ. ಅಲ್ಲಿ ನಿಮ್ನಸ್ತರದ ಇಲ್ಲವೆ ಉಚ್ಚಸ್ತರದ, ಸಾಧ್ಯವಾಗ–ಬಹುದಾದ ಎಲ್ಲ ಒಡೆತನಗಳಿರುತ್ತವೆ, ಅತ್ಯಾಸೆಯುಳ್ಳವನೆಂದು ನೀವು ಆರೋಪ–ಕ್ಕೊಳಪಡಿಸುವ ಮನುಷ್ಯ ಈ ಚಲನೆಯ ಉಪಕರಣವಾಗುವುದರ ಅರ್ಥವಿತ್ತು.

ಇಬ್ಬರೂ ಮಹತ್ವದವರಾಗಿದ್ದಾರೆ, ಇಡೀ ಯೋಜನೆಗೆ ಇವರಿಬ್ಬರ ಆವಶ್ಯಕತೆ ಇದೆ, ಸಂಗ್ರಹಿಸಿ ಇಟ್ಟುಕೊಳ್ಳುವ ಹಾಗೂ ಏಕತ್ರಗೊಳಿಸುವ ಚಲನೆ, ಹರಡುವ, ಪ್ರಸರಿಸುವ ಚಲನೆಗಿಂತ ಕಡಿಮೆ ಅವಶ್ಯವಾದದ್ದೇನಲ್ಲ. ಅವರಿಬ್ಬರೂ ಭಗವಂತನಿಗೆ ನಿಜವಾಗಿ, ಶರಣಾಗತರಾದರೆ, ದೈವೀ ಕಾರ್ಯಕ್ಕೆ ಅದೇ ದರ್ಜೆಯವರೆಗೆ ಮತ್ತು ಸಮನಾದ ಮೌಲ್ಯಕೊಟ್ಟು ಅವರನ್ನು ಉಪಕರಣಗಳೆಂದು ಉಪಯೋಗಿಸ–ಲಾಗುವುದು. ಅವರು ಶರಣಾಗತರಾಗದೆ ಇದ್ದಾಗ ಅಜ್ಞಾನದ ಪ್ರಚೋದನೆಗಳಿಂದ ಚಾಲನೆಗೊಳಗಾದ ಅವರಿಬ್ಬರೂ ಒಂದೇ ರೀತಿಯವರಾಗಿರುತ್ತಾರೆ: ಚೆಲ್ಲಿಕೊಡಲು ಒಬ್ಬನನ್ನು ಮುಂದೂಡಲಾಗಿರುತ್ತದೆ, ಹಿಂದೆ ಹಿಡಿದಿಟ್ಟುಕೊಳ್ಳುವುದರ ಎಳೆತಕ್ಕೆ ಇನ್ನೊಬ್ಬ ಒಳಗಾಗಿರುತ್ತಾನೆ. ಆದರೆ ಇಬ್ಬರೂ ತಮ್ಮ ಪ್ರಜ್ಞೆಗೆ ಮಬ್ಬಾದ ಶಕ್ತಿಗಳ ಎಳೆತಕ್ಕೆ ಒಳಗಾಗಿರುತ್ತಾರೆ. ಇವರಿಬ್ಬರ ನಡುವೆ ಯಾರನ್ನೂ ಆಯ್ದುಕೊಳ್ಳ–ಲಾಗುವುದಿಲ್ಲ. ಯೋಗದ ಉಚ್ಚತರ ದೃಷ್ಟಿಕೋನದಿಂದ, ಬಹಳ ಪ್ರಶಂಸೆಗೆ ಒಳಗಾದ ಮನುಷ್ಯನಿಗೆ ಹೀಗೆ ಹೇಳಬಹುದು: "ನಿನ್ನ ಎಲ್ಲ ಪ್ರಚೋದನೆಗಳು ಆತ್ಮದ ಮೌಲ್ಯಗಳಲ್ಲಿ ಏನೂ ಅಲ್ಲ, ಏಕೆಂದರೆ ಅವು ಅಹಂಕಾರದಿಂದ ಹಾಗೂ ಅಜ್ಞಾನದ ಆಸೆಯಿಂದ ಬರುತ್ತವೆ," ಮತ್ತು ಇನ್ನೊಂದೆಡೆಗೆ ಅತ್ಯಾಸೆಯಿದ್ದವರು ಎಂದು ಆಪಾದನೆಗೊಳಗಾದವರ ಮಧ್ಯೆ ನೀವು ಒಬ್ಬ ಮನುಷ್ಯ ಶೇಖರಿಸಿ ಪಡೆಯುವುದನ್ನು, ಸಂಗ್ರಹಿಸುವುದನ್ನು ನೋಡುತ್ತೀರಿ, ಅವನು ತನಗೆ ವಹಿಸಲಾದ ಕಾರ್ಯದಲ್ಲಿ ತನ್ನ ಸ್ವಭಾವದಿಂದ ಅಚಂಚಲ ಹಾಗೂ ಏಕಾಗ್ರಗೊಂಡ ನಿರ್ಧಾರದೊಂದಿಗೆ ತುಂಬಿಕೊಂಡಿರುತ್ತಾನೆ, ಅವನು ಒಮ್ಮೆ ಎಚ್ಚೆತ್ತುಕೊಂಡ ಕೂಡಲೆ ಭಗವಂತನ ಒಳ್ಳೆಯ ಉಪಕರಣವಾಗಬಲ್ಲನು. ಆದರೆ ಸಾಧಾರಣವಾಗಿ ಅತ್ಯಾಸೆಯ ಮನುಷ್ಯ ಆ ಇನ್ನೊಬ್ಬನ ಹಾಗೆ ಅಜ್ಞಾನದಿಂದ ಹಾಗೂ ಆಸೆಯಿಂದ ಕಾರ್ಯ ಕೈಕೊಳ್ಳುತ್ತಾನೆ, ಅದು ಅದೇ ಅಜ್ಞಾನದ ಇನ್ನೊಂದು ತುದಿ. ತಮ್ಮ ಹಿಂದಿರುವ ಉಚ್ಚತರವಾದ ಏನೋ ಒಂದರ ಜೊತೆಗೆ ಸಂಪರ್ಕ ಸಾಧಿಸಲು ಅವರಿಬ್ಬರೂ ತಮ್ಮನ್ನು ಪರಿಶುದ್ಧಗೊಳಿಸಿಕೊಳ್ಳಬೇಕು

ಹಾಗೂ ಬದಲಾಗಬೇಕು, ಮತ್ತು ಆ ಹಿಂದಿದ್ದುದನ್ನು ಅವರ ಸ್ವಭಾವ ಕರೆಕೊಟ್ಟ ರೀತಿಯಲ್ಲಿ ಅಭಿವ್ಯಕ್ತಗೊಳಿಸಬೇಕು.

**CWM, 3/119–20** **– ಶ್ರೀಮಾತೆ**

*

ನಮ್ಮ ತಿಳಿವಳಿಕೆಯನ್ನು ಹಾಗೂ ನಮ್ಮ ಇಂದ್ರಿಯಗಳನ್ನು ಅಸಂತೋಷಕ್ಕೀಡು ಮಾಡುವ ಒಳ್ಳೆಯದಾದುದು ಹಾಗೂ ಕೆಟ್ಟದ್ದಾಗಿರುವುದು ಇವುಗಳ ಸ್ಥಾನದಲ್ಲಿ ಅಖಂಡ ರಸ ಬರಬೇಕು, ಅತ್ಯುಚ್ಚವಾದುದನ್ನು ತಲುಪುವುದಕ್ಕಿಂತ ಮೊದಲು ಸಂಕ್ಷೇಪಿಸಲಾಗಿರದ, ಭೇದ ಕಲ್ಪಿಸಿರದ ದಿವ್ಯಾನಂದ ವಸ್ತು–ವಿಷಯಗಳ ದಿವ್ಯಾನಂದದಲ್ಲಿರಬೇಕು, ಈ ಗುರಿಯತ್ತ ಮಾರ್ಗದಲ್ಲಿ ನಿಮ್ನತರ ಹಾಗೂ ಸಂಕ್ಷೇಪಿಸಿದ ಸೌಂದರ್ಯದ ಭಾವನೆಯನ್ನು ಪೂರ್ತಿ ಉಪಯೋಗ ಮಾಡಬೇಕು; ಈ ಭಾವನೆ ಕಡಿಮೆ ಸುಂದರವಾದದ್ದನ್ನು ಹೆಚ್ಚಿನ ಸೌಂದರ್ಯದಿಂದ, ನಿಮ್ನತರವಾದದ್ದನ್ನು ಉಚ್ಚತರವಾದದ್ದರಿಂದ, ಕೀಳಾದುದ್ದನ್ನು ಉದಾತ್ತವಾದ–ದ್ದರಿಂದ ಸ್ಥಳಾಂತರ ಮಾಡುವುದನ್ನು ಅರಸುತ್ತದೆ.

**CWSA, 1/440** **– ಶ್ರೀ ಅರವಿಂದರು**

*

## ಕೃತಜ್ಞತೆ

ಭಕ್ತಿಯೊಂದಿಗೆ ಸತತ ಜೊತೆಗೂಡಿರಬೇಕಾದ ಇನ್ನೊಂದು ಚಲನೆಯಿದೆ. ಭಗವಂತ ಅಸ್ತಿತ್ವದಲ್ಲಿದ್ದಾನೆ ಎಂಬ ಕೃತಜ್ಞತೆಯ ಭಾವನೆ, ಭಗವಂತ ಅಸ್ತಿತ್ವದಲ್ಲಿದ್ದಾನೆ ಎಂಬ ವಾಸ್ತವತೆ ನಿಮ್ಮನ್ನು ಘನತೆವೆತ್ತ ಸಂತೋಷದಿಂದ ತುಂಬಿಬಿಡುವ ಭಾವನೆ, ವಿಶ್ವದಲ್ಲಿ ಭಗವಂತನೆನಿಸಿಕೊಳ್ಳುವ ಏನೋ ಒಂದಿದೆ, ಅದು ನಮಗೆ ಕಂಡುಬರುವ ಅತಿ ಘೋರತೆ ಅಲ್ಲ, ಭಗವಂತನಿದ್ದಾನೆ, ಅವನು ಅಸ್ತಿತ್ವದಲ್ಲಿದ್ದಾನೆ ಮತ್ತು ಕನಿಷ್ಠವಾದ ಒಂದು ವಿಷಯ ನಿಮ್ಮನ್ನು ನೇರವಾಗಿ ಇಲ್ಲವೆ ಅಪರೋಕ್ಷವಾಗಿ ಭಗವಂತನ ಅಸ್ತಿತ್ವದ ಘನತೆವೆತ್ತ ನೈಜತೆಯೊಂದಿಗೆ ಸಂಪರ್ಕದಲ್ಲಿರಿಸಿದ ಪ್ರತಿಯೊಂದು ಸಲ, ಹೃದಯ ಎಷ್ಟೊಂದು ಗಾಢವಾದ, ಅದ್ಭುತವಾದ ಸಂತೋಷದಿಂದ, ಕೃತಜ್ಞತೆಯಿಂದ ತುಂಬಿಕೊಳ್ಳುವುದೆಂದರೆ ಅದಕ್ಕೆ ಎಲ್ಲ ವಿಷಯಗಳಿಗಿರುವುದಕ್ಕಿಂತ ಹೆಚ್ಚು ದಿವ್ಯಾನಂದದ ಸ್ವಾದವಿರುತ್ತದೆ.

ಕೃತಜ್ಞತೆ ಕೊಡುವ ಸಂತೋಷಕ್ಕೆ ಸಮನಾದ ಬೇರೆ ಯಾವ ಸಂತೋಷ–ವಿರುವುದಿಲ್ಲ. ಮನುಷ್ಯ ಹಕ್ಕಿ ಹಾಡುವುದನ್ನು ಕೇಳುತ್ತಾನೆ, ಸುಂದರ ಹೂವನ್ನು ನೋಡುತ್ತಾನೆ, ಚಿಕ್ಕ ಮಗುವೊಂದರತ್ತ ಗಮನ ಹರಿಸುತ್ತಾನೆ, ಔದಾರ್ಯದ ಕಾರ್ಯವೊಂದನ್ನು ನೋಡುತ್ತಾನೆ, ಸುಂದರ ವಾಕ್ಯವೊಂದನ್ನು ಓದುತ್ತಾನೆ, ಅಸ್ತವಾಗುತ್ತಿರುವ ಸೂರ್ಯನನ್ನು ನೋಡುತ್ತಾನೆ, ವಿಷಯ ಯಾವುದೇ ಇರಲಿ, ಈ ಬಗೆಯ ಭಾವನೆ ನಿಮ್ಮನ್ನಾವರಿಸಿಕೊಳ್ಳುತ್ತದೆ– ನಿಜವಾಗಿ ಎಷ್ಟೊಂದು ಆಳವಾದ, ಗಾಢವಾದ ಭಾವನೆ– ಅದೆಂದರೆ ಜಗತ್ತು ಭಗವಂತನನ್ನು ಪ್ರಕಟಿಸುತ್ತದೆ, ಜಗತ್ತಿನ ಹಿಂದೆ ದೈವಿಕವಾದ ಏನೋ ಒಂದಿದೆ ಎಂಬ ಭಾವನೆಯಾಗಿರುತ್ತದೆ.

**CWM, 8/40** – **ಶ್ರೀಮಾತೆ**

*

ಅತಿ ಕಡಿಮೆ ಜನರು ಚರ್ಚಿಗೆ ಇಲ್ಲವೆ ದೇವಾಲಯಕ್ಕೆ ನಿಜವಾದ ಧಾರ್ಮಿಕ ಭಾವನೆಯಿಂದ ಹೋಗುತ್ತಾರೆ, ಎಂದರೆ ಭಗವಂತನಿಗೆ ಪ್ರಾರ್ಥನೆ ಮಾಡುವು–ದಕ್ಕಾಗಲಿ ಇಲ್ಲವೆ ಅವನಿಂದ ಏನನ್ನಾದರೂ ಬೇಡುವುದಕ್ಕಾಗಲಿ ಅಲ್ಲ, ಆದರೆ ತಮ್ಮನ್ನೇ ಅರ್ಪಿಸಲು, ಧನ್ಯವಾದ ಹೇಳಲು, ಅಭೀಪ್ಸೆಪಡಲು ಹೋಗುತ್ತಾರೆ. ಹತ್ತು ಲಕ್ಷ ಜನರಲ್ಲಿ ಅಂತಹರು ಒಬ್ಬರು ಕಂಡುಬರಬಹುದು.

**CWM, 6/194–95** – **ಶ್ರೀಮಾತೆ**

*

ಪ್ರತಿಯೊಬ್ಬ ಮನುಷ್ಯನನ್ನು, ಅವನಲ್ಲಿ ಅಜ್ಞಾನ, ತಪ್ಪು ತಿಳಿವಳಿಕೆಗಳು ಅಹಂಕಾರ ಹಾಗೂ ಅದರ ಪ್ರತಿರೋಧಗಳು ಮತ್ತು ಬಂಡಾಯಗಳು ಇದ್ದಾಗಲೂ ಅತಿ ಸಮೀಪದ ಮಾರ್ಗದಿಂದ ಪರಮೋಚ್ಚ ಭಗವಂತ ಅವನ ದೈವೀ ಗುರಿಯತ್ತ ಕರೆದೊಯ್ಯುತ್ತಾನೆ. ಅದಕ್ಕಾಗಿ ಮನುಷ್ಯ ಕೃತಜ್ಞನಾಗಿರಬೇಕು, ಪರಮೋಚ್ಚನ ಈ ಅದ್ಭುತ ದೈವೀಕೃಪೆಯನ್ನು ಎಂದಿಗೂ ಮರೆಯಬಾರದು.

ಬೆಚ್ಚಗಿನ, ಮಾಧುರ್ಯದ ಹಾಗೂ ಪ್ರಕಾಶದ ಭಾವನೆ ತಂದುಕೊಡುವ ಕೃತಜ್ಞತೆಯ ಪರಿಶುದ್ಧ ಜ್ವಾಲೆ ಯಾವಾಗಲೂ ನಮ್ಮ ಹೃದಯದಲ್ಲಿ ಪ್ರಜ್ವಲಿಸಬೇಕು, ಅದು ಎಲ್ಲ ಅಹಂಮನ್ಯತೆಯನ್ನು, ಮಬ್ಬುತನವನ್ನು ಕರಗಿಸುವುದು, ಅದು

ಸಾಧಕನನ್ನು ಅವನ ಗುರಿಯತ್ತ ಕರೆದೊಯ್ಯುವ, ಪರಮೋಚ್ಚನ ದೈವೀಕೃಪೆಗಾಗಿ ಇರುವ ಕೃತಜ್ಞತೆಯ ಜ್ವಾಲೆ–ಮನುಷ್ಯ ಹೆಚ್ಚು ಹೆಚ್ಚಾಗಿ ಕೃತಜ್ಞನಾದಂತೆ. ದೈವೀಕೃಪೆಯ ಈ ಕ್ರಿಯೆಯನ್ನು ಗುರುತಿಸಿದಂತೆ, ಅದಕ್ಕೆ ಕೃತಜ್ಞಾತಾಪೂರ್ಣನಾದಂತೆ ಗುರಿಯೆಡೆಗಿನ ಆ ಮಾರ್ಗ ಕಿರಿದಾಗುತ್ತ ಹೋಗುವುದು.

**White Roses, p.31-32** **– ಶ್ರೀಮಾತೆ**

*

ಎಲ್ಲ ಚಲನೆಗಳಲ್ಲಿ ಮಿಶ್ರಣಕ್ಕೊಳಗಾಗದ, ಅಹಂಕಾರದಿಂದ ಕಲಂಕಿತವಾಗದ ಸಂತೋಷವನ್ನು ತಂದುಕೊಡುವ ಸ್ವಯಂಪ್ರೇರಿತ ಚಲನೆ ಕೃತಜ್ಞತೆಯಾಗಿದೆ.

ಅದು ವಿಶೇಷವಾದ ಏನೋ ಒಂದು, ಅದು ಪ್ರೇಮವಲ್ಲ, ಅದು ತನ್ನನ್ನು ಕೊಟ್ಟುಕೊಳ್ಳುವುದಲ್ಲ. ಅದು ಅತಿ ಹೆಚ್ಚಿನ ಸಂತೋಷದಿಂದ ತುಂಬಿಕೊಂಡಿರುತ್ತದೆ.

ಅದು ವಿಶೇಷವಾದ ಕಂಪನ, ಅದಕ್ಕೆ ಹೊರತಾದ ಇನ್ನಾವುದೂ ಅದರಂತಿಲ್ಲ. ಅದು ನಿಮ್ಮನ್ನು ವಿಸ್ತರಿಸುತ್ತದೆ, ತುಂಬಿ ಬಿಡುತ್ತದೆ, ಅದು ಎಷ್ಟೊಂದು ಉತ್ಸಾಹದಿಂದ ಕೂಡಿರುತ್ತದೆ!

ಮಾನವ ಪ್ರಜ್ಞೆಯ ಅಳವಿನಲ್ಲಿರುವ ಎಲ್ಲ ಚಲನೆಗಳಲ್ಲಿ ಅದು ನಿಮ್ಮನ್ನು ಅಹಂಕಾರದಿಂದ ಅತ್ಯಂತ ಹೆಚ್ಚಿನ ರೀತಿಯಲ್ಲಿ ಹೊರಗೆಳೆಯುವ ಚಲನೆಯಾಗಿದೆ.

ಈ ಕಂಪನದ ಪರಿಶುದ್ಧತೆಯಲ್ಲಿ ಪ್ರವೇಶಿಸಬಲ್ಲಿರಾದರೆ ಅದು ದೈವೀ ಪ್ರೇಮದ ಕಂಪನವಿದ್ದ ಹಾಗೆ ಇದೆ ಎಂಬುದನ್ನು ನೀವು ಕೂಡಲೆ ಮನಗಾಣುವಿರಿ, ಅದಕ್ಕೆ ದಿಶೆಯೆಂಬುದಿಲ್ಲ. ... ಕಟ್ಟಕಡೆಯದಾಗಿ ಕೃತಜ್ಞತೆ ಕೇವಲ ದೈವೀ ಪ್ರೇಮದ ಸಾರಭೂತ ಕಂಪನದ ಅತಿ ಕಡಿಮೆ ವರ್ಣದ ಛಾಯೆಯಾಗಿರುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ, ಡಿ.21, 1963** **– ಶ್ರೀಮಾತೆ**

*

**ಪ್ರಶ್ನೆ:** *ದೈವೀ ಕೃಪೆಯನ್ನು ಕೃತಜ್ಞತೆಯೊಂದಿಗೆ ಸ್ವೀಕರಿಸುವ ರೀತಿ ಯಾವುದು?*

**ಶ್ರೀಮಾತೆ:** ಅಹಾ! ಮೊದಲು ಅದರ ಆವಶ್ಯಕತೆಯ ಭಾವನೆ ಬರಬೇಕು.

ಇದು ಅತ್ಯಂತ ಮಹತ್ವದ ಅಂಶ. ಅದು ಒಂದು ಬಗೆಯ ಆಂತರಿಕ ವಿನಮ್ರತೆಯನ್ನು ಹೊಂದಿರುವುದಾಗಿದೆ, ಅದು ದೈವೀಕೃಪೆಯಿಲ್ಲದೆ ಇದ್ದಾಗ ಆಗುವ

ನಿಮ್ಮ ಅಸಹಾಕತೆಯನ್ನು ಕುರಿತು ನೀವು ಅರಿವುಳ್ಳವರಾಗುವಂತೆ ಮಾಡುವುದು, ಅದು ನಿಜವಾದ ಆವಶ್ಯಕತೆ, ಅದಿಲ್ಲದೆ ನೀವು ಅಪೂರ್ಣರಾಗಿರುತ್ತೀರಿ ಹಾಗೂ ಸಾಮರ್ಥ್ಯಹೀನರಾಗಿರುತ್ತೀರಿ. ಇದು ಪ್ರಾರಂಭದೊಂದಿಗೆ ಮೊದಲ ವಿಷಯ–ವಾಗಿರುತ್ತದೆ.

ಅದು ಮನುಷ್ಯ ಸರಿಯಾಗಿಯೇ ಹೊಂದಬಹುದಾದ ಅನುಭವ. ಏನನ್ನೂ ತಿಳಿದುಕೊಂಡಿರದ ಜನರು ತಮ್ಮನ್ನು ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿ ಕಂಡು–ಕೊಂಡಾಗ, ಇಲ್ಲವೆ ಪರಿಹರಿಸಬೇಕಾದ ಸಮಸ್ಯೆಯೊಂದನ್ನು ಎದುರಿಸಿದಾಗ ಇಲ್ಲವೆ ಇದೀಗ ನಾನು ಹೇಳಿದ ಹಾಗೆ ಪ್ರಚೋದನೆಯೊಂದನ್ನು ಇಲ್ಲವೆ ಅವರನ್ನು ಕ್ಷೋಭೆಗೊಳಪಡಿಸಿದ ಏನೋ ಒಂದನ್ನು ಜಯಿಸಬೇಕಾದಾಗ... ತಾವು ಕಳೆದು ಹೋದುದರ ಬಗ್ಗೆ ಅರಿವು ತಂದುಕೊಳ್ಳುತ್ತಾರೆ, ಅವರಿಗೆ ಏನು ಮಾಡಬೇಕೆಂಬುದು ತಿಳಿದಿರುವುದಿಲ್ಲ– ಅವರ ಮನಸ್ಸಾಗಲಿ, ಇಲ್ಲವೆ ಸಂಕಲ್ಪವಾಗಲಿ ಇಲ್ಲವೆ ಭಾವನೆಗಳಾಗಲಿ ಸಹಾಯಕ್ಕೆ ಬರುವುದಿಲ್ಲ– ಅವರಿಗೆ ಏನು ಮಾಡಬೇಕೆಂಬುದು ತಿಳಿದಿರುವುದಿಲ್ಲ, ಆಗ ಅದು ಸಂಭವಿಸುತ್ತದೆ, ಅವರ ಅಂತರಂಗದಲ್ಲಿ ಒಂದು ಬಗೆಯ ಕರೆಯ ರೂಪದಲ್ಲಿ ಏನೋ ಒಂದಿರುತ್ತದೆ, ಅದು ಮನುಷ್ಯ ಕೈಕೊಳ್ಳಲಾಗದ್ದನ್ನು ಕೈಕೊಳ್ಳುತ್ತದೆ. ತಾನು ಕೈಕೊಳ್ಳಲು ಸಮರ್ಥವಾಗಿರದಂತಹನ್ನು ಕೈಕೊಳ್ಳಲು ಶಕ್ತವಾದ ಏನೋ ಒಂದನ್ನು ಕುರಿತು ಮನುಷ್ಯ ಅಭೀಪ್ಸೆಪಡುತ್ತಾನೆ.

ಇದು ಮೊದಲ ಷರತ್ತು ಮತ್ತು ನಂತರ ದೈವೀಕೃಪೆ ಮಾತ್ರ ಅದನ್ನು ಕೈಕೊಳ್ಳಬಹುದು ಎಂಬ ಅರಿವು ನಿಮ್ಮಲ್ಲಿ ಉಂಟಾದರೆ, ನೀವು ನಿಮ್ಮನ್ನು ಕಂಡುಕೊಂಡ ಸ್ಥಿತಿಯಿಂದ ದೈವೀಕೃಪೆ ಮಾತ್ರ ಹೊರಗೆಳೆಯಬಲ್ಲದು, ಅದರಿಂದ ಹೊರಬರಲು ಅದು ನಿಮಗೆ ಪರಿಹಾರ ಹಾಗೂ ಬಲವನ್ನು ಕೊಡಬಲ್ಲದು ಎಂಬುದನ್ನು ನೀವು ಕಂಡುಕೊಂಡರೆ ಆಗ ಬಹಳ ಸ್ವಾಭಾವಿಕವಾಗಿ ಗಾಢ ಅಭೀಪ್ಸೆ ನಿಮ್ಮಲ್ಲಿ ಎಚ್ಚತ್ತುಕೊಳ್ಳುತ್ತದೆ, ತೆರೆದಿರಿಸಿಕೊಳ್ಳುವಿಕೆ ಎಂದು ತರ್ಜುಮೆ ಮಾಡಬಹುದಾದ ಪ್ರಜ್ಞೆಯಿರುತ್ತದೆ. ನೀವು ಕರೆ ಕೊಟ್ಟರೆ, ಅಭೀಪ್ಸೆಪಟ್ಟರೆ, ಉತ್ತರ ಬರುವುದೆಂದು ಭರವಸೆ ತಾಳಿದರೆ, ಬಹಳ ಸ್ವಾಭಾವಿಕವಾಗಿ ದೈವೀಕೃಪೆಗೆ ನಿಮ್ಮನ್ನು ತೆರೆದಿರಿಸಿಕೊಳ್ಳುತ್ತೀರಿ.

ಮತ್ತು ನಂತರ– ನೀವು ಬಹಳ ಲಕ್ಷ್ಯಗೊಡಬೇಕು, ಇದಕ್ಕೆ (ಶ್ರೀಮಾತೆ–ಯವರು ತಮ್ಮ ಬೆರಳನ್ನು ತುಟಿಗಳ ಮೇಲೆ ಇರಿಸುತ್ತಾರೆ)– ದೈವೀಕೃಪೆ ನಿಮಗೆ ಉತ್ತರ ನೀಡುವುದು, ದೈವೀಕೃಪೆ ನಿಮ್ಮನ್ನು ತೊಂದರೆಯಿಂದ ಹೊರಗೆಳೆಯುವುದು, ದೈವೀಕೃಪೆ ನಿಮ್ಮ ಸಮಸ್ಯೆಗೆ ಪರಿಹಾರ ನೀಡುವುದು ಇಲ್ಲವೆ ನೀವು ತೊಂದರೆಯಿಂದ ಹೊರಬರಲು ಸಹಾಯ ಮಾಡುವುದು. ಆದರೆ ಒಮ್ಮೆ ಕ್ಷೋಭೆಯಿಂದ ಮುಕ್ತರಾದಾಗ, ನಿಮ್ಮ ತೊಂದರೆಯಿಂದ ಹೊರಗೆ ಬಂದಾಗ, ದೈವೀಕೃಪೆ ನಿಮ್ಮನ್ನು ಹೊರಗೆಳೆಯಿತೆಂಬುದನ್ನು ಮರೆಯದಿರಿ, ನೀವೇ ಅದನ್ನು ಕೈಕೊಂಡಿರಿ ಎಂದು ಯೋಚಿಸುವುದು ಬೇಡ. ಏಕೆಂದರೆ ಇದು, ನಿಜವಾಗಿ, ಮಹತ್ವದ ಅಂಶ. ಬಹಳಷ್ಟು ಜನರು ತೊಂದರೆ ಹೋದ ಕೂಡಲೆ ಹೇಳುತಾರೆ: "ಒಟ್ಟಿನಲ್ಲಿ ನಾನು ನನ್ನ ತೊಂದರೆಯಿಂದ ಚೆನ್ನಾಗಿ ಹೊರಗೆಳೆದುಕೊಂಡೆ".

ನೀವಲ್ಲಿರುತ್ತೀರಿ, ಮತ್ತು ನಂತರ ದ್ವಾರಕ್ಕೆ ಅಗಳಿ, ಕೀಲಿ ಹಾಕುತ್ತೀರಿ, ಇನ್ನು ಮುಂದೆ ದೈವೀಕೃಪೆಯಿಂದ ಏನನ್ನೂ ಸ್ವೀಕರಿಸಲಾರಿರಿ. ಮತ್ತೊಮ್ಮೆ ತೀಕ್ಷ್ಣವಾದ ಕಡು ಸಂಕಟದ ಆವಶ್ಯಕತೆ ಇರುತ್ತದೆ, ಅದು ಈ ಬಗೆಯ ಆಂತರಿಕ ಹೆಡ್ಡತನ ಹಿಮ್ಮೆಟ್ಟಲು ಅವಶ್ಯವಾಗಿರುತ್ತದೆ, ಮತ್ತು ನೀವೇ ಏನನ್ನೂ ಕೈಕೊಳ್ಳಲಾರಿರಿ ಎಂಬ ಅರಿವನ್ನು ತಂದುಕೊಡುತ್ತದೆ. ಏಕೆಂದರೆ ನೀವು ಸಾಮರ್ಥ್ಯಹೀನರಾಗಿದ್ದೀರಿ ಎಂಬುದರ ಬಗ್ಗೆ ಅರಿವನ್ನು ಬೆಳೆಸಿಕೊಳ್ಳುತ್ತಿದ್ದ ಹಾಗೆ, ಸ್ವಲ್ಪ ತೆರೆದುಕೊಂಡವರು, ನಮ್ರರು ಆಗಲು ಪ್ರಾರಂಭಿಸುತ್ತೀರಿ. ಆದರೆ ನೀವು ಕೈಕೊಂಡದ್ದೆಲ್ಲ ನಿಮ್ಮದೇ ಕೌಶಲ, ನಿಮ್ಮದೇ ಕ್ಷಮತೆಗಳ ಮೇಲೆ ಅವಲಂಬಿಸಿರುತ್ತದೆ ಎಂದು ಯೋಚಿಸುತ್ತಿರುವವರೆಗೆ, ನಿಜವಾಗಿ, ನೀವು ಒಂದು ದ್ವಾರವನ್ನು ಮುಚ್ಚುತ್ತೀರಿ ಅಷ್ಟೇ ಅಲ್ಲ, ಒಂದರ ನಂತರ ಒಂದರಂತೆ ಹಲವಾರು ದ್ವಾರಗಳನ್ನು ಮುಚ್ಚುತ್ತೀರಿ ಮತ್ತು ಅವುಗಳಿಗೆ ಅಗಳಿ ಹಾಕುತ್ತೀರಿ. ನಿಮ್ಮನ್ನು ಒಂದು ಕೋಟೆಯೊಳಗೆ ಮುಚ್ಚಿಹಾಕಿಕೊಳ್ಳುತ್ತೀರಿ ಮತ್ತು ಆ ಕೋಟೆಯಲ್ಲಿ ಬೇರೇನೂ ಪ್ರವೇಶಿಸಲಾರದು. ಅದು ಭವ್ಯ ಕೊರತೆ: ಮನುಷ್ಯ ಬಹಳ ತೀವ್ರಗತಿಯಲ್ಲಿ ಮರೆತುಬಿಡುತ್ತಾನೆ. ಬಹಳ ಸ್ವಾಭಾವಿಕವಾಗಿ ಮನುಷ್ಯ ತನ್ನದೇ ಕ್ಷಮತೆಯಿಂದ ತೃಪ್ತಿಪಡೆದಿರುತ್ತಾನೆ.

**CWM, 6/322-23** **- ಶ್ರೀಮಾತೆ**

*

ಸಾರಭೂತವಾಗಿ ಕರುಣೆ ಹಾಗೂ ಕೃತಜ್ಞತೆ ಇವು ಚೈತ್ಯದ ಸದ್ಗುಣಗಳು, ಚೈತ್ಯಸತ್ತೆ ಕ್ರಿಯಾಶೀಲ ಜೀವನದಲ್ಲಿ ಭಾಗವಹಿಸತೊಡಗಿದಾಗ ಅವು ಪ್ರಜ್ಞೆಯಲ್ಲಿ ತೋರಿಬರುತ್ತವೆ.

ಪ್ರಾಣಿಕ ಹಾಗೂ ಭೌತಿಕ ಅವುಗಳನ್ನು (ಸದ್ಗುಣಗಳನ್ನು) ದೌರ್ಬಲ್ಯಗಳೆಂದು ಅನುಭವಕ್ಕೆ ತಂದುಕೊಳ್ಳುತ್ತವೆ, ಏಕೆಂದರೆ ಬಲದ ಸಾಮರ್ಥ್ಯದ ಆಧಾರ ಪಡೆದ ಅವುಗಳ ಪ್ರಚೋದನೆಗಳ ಮುಕ್ತ ಅಭಿವ್ಯಕ್ತಿಯನ್ನು ಸದ್ಗುಣಗಳು ನಿಗ್ರಹಿಸುತ್ತವೆ.

ಪೃಥ್ವಿಯ ಮೇಲೆ ಮನುಷ್ಯ ಭೌತಿಕವಾಗಿ ಹಾಗೂ ಪ್ರಾಪಂಚಿಕವಾಗಿ ಕೃತಜ್ಞತೆಯಲ್ಲಿ ಅತ್ಯಂತ ಪರಿಶುದ್ಧವಾದದ ದಿವ್ಯಾನಂದದ ಮೂಲವನ್ನು ಕಂಡುಕೊಳ್ಳುತ್ತಾನೆ.

**CWM, 15/277, 192** **- ಶ್ರೀಮಾತೆ**

*

ಜೀವನದ ಎಲ್ಲ ಪರಿಸ್ಥಿತಿಗಳು ನಮಗೆ ಅದನ್ನು ಕಲಿಸಿಕೊಡಲು ವ್ಯವಸ್ಥಿತಗೊಂಡಿರುತ್ತವೆ. ಮನಸ್ಸಿನಾಚೆಗೆ ಇರುವ ದೈವೀಕೃಪೆಯಲ್ಲಿ ನಂಬಿಕೆ ಎಲ್ಲ ಪರೀಕ್ಷೆಗಳಾದ್ಯಂತ ಸಾಗಿಹೋಗಲು, ಎಲ್ಲ ದೌರ್ಬಲ್ಯಗಳ ಮೇಲೆ ಜಯ ಸಾಧಿಸಲು ಮತ್ತು ದೈವೀ ಕೃಪೆಯೊಂದಿಗೆ ಸಂಪರ್ಕ ಕಂಡುಕೊಳ್ಳಲು ನಮಗೆ ಬಲ ಕೊಡುತ್ತದೆ. ಆ ಸಂಪರ್ಕ ನಮಗೆ ಶಾಂತಿ ಸಂತೋಷ ಕೊಡುತ್ತದೆ ಅಷ್ಟೇ ಅಲ್ಲ, ಆದರೆ ಭೌತಿಕ ಸಮತೋಲನ ಮತ್ತು ಒಳ್ಳೆಯ ಆರೋಗ್ಯವನ್ನು ಕೊಡುತ್ತದೆ.

**CWM, 10/320** **- ಶ್ರೀಮಾತೆ**

*

ಸೌಂದರ್ಯ ಆನಂದ ರೂಪತಾಳುವುದಾಗಿರುತ್ತದೆ– ಆದರೆ ರೂಪ ಭೌತಿಕ ಆಕಾಶದಲ್ಲಿ ಇರಬೇಕಾದ ಆವಶ್ಯಕತೆ ಇರುವುದಿಲ್ಲ. ಮನುಷ್ಯನೊಬ್ಬ ಸುಂದರ ವಿಚಾರ ಕುರಿತು ಮಾತನಾಡುತ್ತಾನೆ, ಸುಂದರ ಕ್ರಿಯೆಯಿರುತ್ತದೆ. ಸುಂದರ ಆತ್ಮವಿರುತ್ತದೆ. ನಾವು ಸೌಂದರ್ಯ ಎಂದು ಕರೆಯುವುದು ಪ್ರಕಟಗೊಂಡ ಆನಂದವಾಗಿರುತ್ತದೆ.

**CWSA, 27/200** **- ಶ್ರೀ ಅರವಿಂದರು**

*

**ಗ್ರಹಣಶಕ್ತಿ**

ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳುವುದರೊಂದಿಗೆ ಹಾಗೂ ಅಭೀಪ್ಸೆ ತೀಕ್ಷ್ಣವಾಗು–ವುದರೊಂದಿಗೆ ಗ್ರಹಣಶಕ್ತಿ ಹೆಚ್ಚಾಗುತ್ತದೆ.

**CWM, 14/147** **- ಶ್ರೀಮಾತೆ**

*

ಕೆಳಗಿನಿಂದ ಗ್ರಹಣಶಕ್ತಿ ಮೇಲ್ಗಡೆಯಿಂದ ಬರುವ, ಪ್ರಕಟವಾಗಲು ಬಯಸುವ ಶಕ್ತಿಗೆ ಸಮಾನವಾದಾಗ ಪರಿಪೂರ್ಣತೆಯನ್ನು, ಅದಿನ್ನೂ ಪ್ರಗತಿಪರವಾಗಿ ಉಳಿದುಕೊಂಡರೂ, ಸಿದ್ಧಿಸಿಕೊಳ್ಳಲಾಗಿರುತ್ತದೆ ಎಂದು ಹೇಳಬಹುದು.

**CWM, 15/78** **- ಶ್ರೀಮಾತೆ**

*

**ಪ್ರಶ್ನೆ:** *ಶ್ರೀಮಾತೆಯವರೆ, ಗ್ರಹಣಶಕ್ತಿ ಯಾವುದರ ಮೇಲೆ ಅವಲಂಬಿಸಿರುತ್ತದೆ?*

**ಶ್ರೀಮಾತೆ :** ಮೊಟ್ಟಮೊದಲಿಗೆ ಅದು ನಿಷ್ಕಾಪಟ್ಯದ ಮೇಲೆ ಅವಲಂಬಿಸಿರುತ್ತದೆ – ಮನುಷ್ಯ ನಿಜವಾಗಿ ಗ್ರಹಿಸಲು ಬಯಸುತ್ತಾನೆಯೆ ಎಂಬುದರ ಮೇಲೆ– ಮತ್ತು ನಂತರ, ... ಹೌದು ನಿಷ್ಕಾಪಟ್ಯ ಮತ್ತು ವಿನಮ್ರತೆ ಇವು ಪ್ರಧಾನ ಅಂಶಗಳಾಗಿರುತ್ತವೆ. ನೀವು ನಿಮ್ಮನ್ನು ಮುಚ್ಚಿಹಾಕಿಕೊಳ್ಳುವಂತೆ ಮಾಡಲು ಜಂಬಕ್ಕಿಂತ ಹೆಚ್ಚಿನ ವಿಷಯ ಬೇರೊಂದಿರುವುದಿಲ್ಲ. ನೀವು ಸ್ವ–ಸಂತೃಪ್ತಿಯಿಂದಿದ್ದಾಗ, ನಿಮ್ಮಲ್ಲಿ ಯಾವುದೋ ಒಂದರ ಕೊರತೆಯಿದೆ, ನೀವು ತಪ್ಪುಗಳನ್ನು ಮಾಡುತ್ತೀರಿ, ಅಪೂರ್ಣರೂ, ಅಪರಿಪೂರ್ಣರೂ ಆಗಿದ್ದೀರಿ... ಎಂಬುದನ್ನು ಒಪ್ಪಿಕೊಳ್ಳಲು ಬಯಸದಂತೆ ಮಾಡುವ ಜಂಬ ನಿಮ್ಮಲ್ಲಿದ್ದಾಗ ಗ್ರಹಣಶಕ್ತಿ ಇರುವುದಿಲ್ಲ. ಸ್ವಭಾವದಲ್ಲಿ ಏನೋ ಒಂದಿರುತ್ತದೆ, ಅದು ಈ ರೀತಿಯಲ್ಲಿ ಬಿರುಸಾಗಿರುತ್ತದೆ, ಒಪ್ಪಿಕೊಳ್ಳಲು ಬಯಸುವುದಿಲ್ಲ, ಇದೇ ನೀವು ಗ್ರಹಿಸುವುದನ್ನು ತಡೆಹಿಡಿಯುತ್ತದೆ. ಹಾಗಿದ್ದಾಗ್ಯೂ ನೀವು ಕೇವಲ ಅದಕ್ಕಾಗಿ ಪ್ರಯತ್ನ ಮಾಡಬೇಕು ಮತ್ತು ಅನುಭವ ಪಡೆಯಬೇಕು. ಸಂಕಲ್ಪಪೂರ್ವಕ ಪ್ರಯತ್ನ ಮಾಡುವುದರ ಮೂಲಕ ನಿಮ್ಮ ಸತ್ತೆಯ ಅತಿ ಚಿಕ್ಕ ಭಾಗ: "ಅಹಾ, ಸರಿ, ಹೌದು ನನ್ನದು ತಪ್ಪಾಗಿದೆ, ನಾನು ಹಾಗಿರಬಾರದು, ನಾನು ಅದನ್ನು ಮಾಡಬಾರದು, ಆ ರೀತಿಯ ಭಾವನೆ ಹೊಂದಿರಬಾರದು, ಹೌದು, ಅದು ತಪ್ಪಾದದ್ದು" ಎಂದು

ಒಪ್ಪಿಕೊಂಡರೆ, ಆ ಭಾಗ ಒಪ್ಪಿಕೊಳ್ಳುವಂತೆ ಮಾಡಲು ನೀವು ಶಕ್ತರಾದರೆ, ನಾನು ಇದೀಗ ಹೇಳಿದ ಹಾಗೆ, ಅದು ನಿಮಗೆ ಹೆಚ್ಚಿನ ನೋವು ಕೊಡುತ್ತ ಪ್ರಾರಂಭವಾಗುತ್ತದೆ, ಆದರೆ ಅದು ಒಪ್ಪಿಕೊಳ್ಳುವವರೆಗೆ ಅದನ್ನು ಗಟ್ಟಿಯಾಗಿ ಹಿಡಿದುಕೊಂಡರೆ, ಕೂಡಲೆ ಅದು ತೆರೆದುಕೊಳ್ಳುವುದು– ಅದು ತೆರೆದುಕೊಂಡಿರುತ್ತದೆ ಮತ್ತು ವಿಚಿತ್ರ ರೀತಿಯಲ್ಲಿ ಪ್ರಕಾಶದ ಪ್ರವಾಹ ಪ್ರವೇಶಿಸುತ್ತದೆ, ನಂತರ ನೀವು ಎಷ್ಟೊಂದು ಹರ್ಷಿತರಾಗುತ್ತೀರಿ ಎಂದರೆ ನೀವು "ಇಷ್ಟು ಕಾಲದವರೆಗೆ ಅದನ್ನು ಪ್ರತಿರೋಧಿಸಲು ನಾನದೆಷ್ಟು ಮೂರ್ಖನಾಗಿದ್ದೆ" ಎಂದು ನಿಮಗೆ ನೀವೇ ಕೇಳುತ್ತೀರಿ.

**CWM, 6/117** **- ಶ್ರೀಮಾತೆ**

*

**ಸರಳತೆ**

ಮಾನವ ಮಾನಸಿಕತೆ ಆ ಯುಗದಿಂದೀಚೆಗೆ ಪ್ರಗತಿ ಹೊಂದಿದೆ ಎಂಬ ಅನಿಸಿಕೆ ಮನುಷ್ಯನಲ್ಲಿದೆ. ಯೋಚನೆ ಹೆಚ್ಚು ಸಂಕೀರ್ಣವಾಗಿದೆ, ಮನೋವಿಜ್ಞಾನ ಹೆಚ್ಚು ಗಹನವಾದದ್ದಾಗಿದೆ, ಅದೆಷ್ಟರ ಮಟ್ಟಿಗೆ ಎಂದರೆ ಈ ವಾದಗಳು ಬಹು ಮಟ್ಟಿಗೆ ಬಾಲಿಶವಾಗಿವೆಯೆಂದು ತೋರಿಬರುತ್ತವೆ. ಆದರೆ ನಾವು ಅವುಗಳನ್ನು ಆಚರಣೆಯಲ್ಲಿ ತರಬೇಕೆಂಬ ಉದ್ದೇಶ ಹೊಂದಿದಾಗ ನಾವು ಬಹುಮಟ್ಟಿಗೆ ಅದೇ ಸ್ತರದಲ್ಲಿ ಉಳಿದುಕೊಂಡಿರುವುದರ ಅರಿವನ್ನು ಪಡೆಯುತ್ತೇವೆ, ಮತ್ತು ಯೋಚನೆ ಪ್ರಗತಿ ಸಾಧಿಸಿದೆಯಾದರೆ ಆಚರಣೆ ಹೆಚ್ಚು ಒಳ್ಳೆಯದಾಗುವುದರ ಬದಲಾಗಿ ಹೆಚ್ಚು ಕೆಟ್ಟದ್ದಾಗಿರುವಂತೆ ತೋರಿ ಬರುತ್ತದೆ. ಮತ್ತು ಇಲ್ಲಿ ಶಿಶುಸದೃಶ ಸರಳತೆ ಇದೆ, ಹೆಚ್ಚಾಗಿ ಆರೋಗ್ಯಕರವಾಗಿರುವ ಏನೋ ಒಂದು, ವಿಕೃತಿ ಇರುವುದಿಲ್ಲ, ಇಂತಹದನ್ನು ದುರ್ದೈವವಶಾತ್ ಮನುಕುಲ ಇನ್ನು ಮುಂದೆ ವಶದಲ್ಲಿಟ್ಟುಕೊಂಡಿರುವುದಿಲ್ಲ.

ಆ ದಿನಗಳಲ್ಲಿ ನೈತಿಕ ಆರೋಗ್ಯಸ್ಥಿತಿಯಿತ್ತು, ಅದು ಈಗ ಸಂಪೂರ್ಣವಾಗಿ ಮಾಯವಾಗಿದೆ. ಈ ವಾದಗಳು ನಿಮ್ಮನ್ನು ಮುಗುಳ್ನಗುವಂತೆ ಮಾಡುತ್ತವೆ, ಆದರೆ ಯಾವುದರ ಆಚರಣೆ ಕುರಿತು ಇಲ್ಲಿ ಕಲಿಸಿಕೊಡಲಾಗುತ್ತದೆಯೋ ಅದು ಆ ಕಾಲದಲ್ಲಿದ್ದುದಕ್ಕಿಂತ ಅತಿ ಹೆಚ್ಚು ಕಠಿಣವಾಗಿದೆ. ಒಂದು ಬಗೆಯ

ಕಪಟಾಚಾರ, ಆಡಂಬರ, ಒಳಸಂಚಿನ ಇಬ್ಬಗೆಯ ವಹಿವಾಟು ಇವೆಲ್ಲ ಮಾನವ ಮನಸ್ಸನ್ನು, ವಿಶೇಷವಾಗಿ ಅದಿರುವ ರೀತಿಯನ್ನು ವಶಪಡಿಸಿಕೊಂಡಿವೆ ಎಂದು ತೋರಿಬರುತ್ತದೆ, ಮತ್ತು ಜನರು ಅತ್ಯಂತ ಹಾನಿಕರ ರೀತಿಯಲ್ಲಿ ತಮ್ಮನ್ನೇ ಮೋಸಗೊಳಿಸುವುದನ್ನು ಕಲಿತುಕೊಂಡಿದ್ದಾರೆ.

ಆ ಕಾಲಗಳಲ್ಲಿ ಮನುಷ್ಯ: "ಹಿಂಸೆ ಮಾಡುವುದು ಬೇಡ, ನಿನಗೆ ಶಿಕ್ಷೆ ಕೊಡಲಾಗುವುದು" ಎಂದು ಹೇಳಬಹುದಾಗಿತ್ತು; ಹೃದಯಗಳು ಸರಳವಾಗಿದ್ದವು ಹಾಗೆಯೇ ಮನಸ್ಸೂ ಕೂಡ ಇತ್ತು, ಮತ್ತು ಮನುಷ್ಯ ಹೇಳುತ್ತಿದ್ದ, "ಹಿಂಸೆ ಮಾಡದೆ ಇರುವುದು ಒಳ್ಳೆಯದು, ಏಕೆಂದರೆ ನನಗೆ ಶಿಕ್ಷೆಕೊಡಲಾಗುವುದು." ಆದರೆ ಈಗ ವ್ಯಂಗ್ಯ ಮಂದಹಾಸದೊಂದಿಗೆ ಹೇಳುತ್ತೀರಿ: "ಓಹ್! ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ನಾನು ಮಾರ್ಗವೊಂದನ್ನು ಕಂಡುಕೊಳ್ಳುತ್ತೇನೆ."

ಮಾನಸಿಕ ಕ್ಷಮತೆ ಬೆಳೆದಿರುವ ಹಾಗೆ, ಮಾನಸಿಕ ಸಾಮರ್ಥ್ಯ ಅಭಿವೃದ್ಧಿ ಹೊಂದಿರುವ ಹಾಗೆ, ಜನರು ವಿಚಾರಗಳೊಂದಿಗೆ ಆಟವಾಡುವುದರಲ್ಲಿ ಅತಿ ಹೆಚ್ಚಿನ ರೀತಿಯಲ್ಲಿ ಕ್ಷಮತೆಯುಳ್ಳವರಾದ ಹಾಗೆ ತತ್ವಗಳ ಮೇಲೆ ನಿಯಂತ್ರಣ ಹೊಂದಿರುವ ಹಾಗೆ ತೋರಿಬರುತ್ತಾರೆ, ಆದರೆ ಅದೇ ಸಮಯದಲ್ಲಿ ಪ್ರಕೃತಿಗೆ ಹೆಚ್ಚು ಹತ್ತಿರದಲ್ಲಿ ಜೀವಿಸುತ್ತಿದ್ದ, ವಿಚಾರಗಳೊಂದಿಗೆ ಆಟವಾಡುವುದನ್ನು ಕಡಿಮೆ ರೀತಿಯಲ್ಲಿ ತಿಳಿದುಕೊಂಡಿದ್ದ ಜನರ ಸರಳ ಮತ್ತು ಆರೋಗ್ಯಕರ ಸಾಚಾತನವನ್ನು ಕಳೆದುಕೊಂಡಿದ್ದಾರೆ. ಹಾಗಾಗಿ ಮನುಕುಲ ಇಡಿಯಾಗಿ ಬಹಳ ಅಪಾಯಕಾರಿ ನಿರ್ಣಾಯಕ ಘಟ್ಟವನ್ನು ತಲುಪಿದ ಹಾಗೆ ತೋರಿಬರುತ್ತದೆ. ಸರ್ವಸಾಧಾರಣ ಭ್ರಷ್ಟತೆಗೆ ಪರಿಹಾರ ಕಂಡುಕೊಳ್ಳುವುದನ್ನು ಬೋಧಿಸುವ ಜನರು ಪ್ರಾಚೀನಕಾಲದ ಸರಳತೆಯತ್ತ ಮರಳುವುದನ್ನು ಬೋಧಿಸುತ್ತಾರೆ, ಆದರೆ ಸಹಜವಾಗಿ ಅದು ಬಹಳ ಅಸಾಧ್ಯವಾಗಿರುತ್ತದೆ, ನೀವು ಮರಳಿ ಹೋಗಲಾರಿರಿ.

ನಾವು ದೂರ ಸಾಗಿ ಹೋಗಬೇಕು, ನಾವು ಮುಂದಕ್ಕೆ ಬರಬೇಕು, ಹೆಚ್ಚು ಉಚ್ಚವಾದ ಎತ್ತರಗಳ ಮೇಲೆ ಏರಿ ಹೋಗಬೇಕು, ಹರ್ಷಕ್ಕಾಗಿ, ವೈಯುಕ್ತಿಕ ಯೋಗಕ್ಷೇಮಕ್ಕಾಗಿ ಶುಷ್ಕ ಶೋಧದಾಚೆಗೆ ಸಾಗಿ ಹೋಗಬೇಕು, ಶಿಕ್ಷೆಗಾಗಿ, ಮರಣದ ನಂತರವೂ ಆಗಬಹುದಾದ ಶಿಕ್ಷೆಗಾಗಿ ಭಯಪಟ್ಟುಕೊಳ್ಳುವುದರ

ಮೂಲಕವಲ್ಲ, ಆದರೆ ಸೌಂದರ್ಯದ ಹೊಸ ಭಾವನೆ, ಸತ್ಯ ಹಾಗೂ ಪ್ರಕಾಶಗಳಿಗೆ ಇರುವ ದಾಹ ಇವುಗಳ ಮೂಲಕ, ನಿಮ್ಮನ್ನು ವಿಸ್ತರಿಸಿಕೊಳ್ಳುವುದನ್ನು, ನಿಮ್ಮಲ್ಲಿ ಜ್ಞಾನೋದಯ ತಂದುಕೊಳ್ಳುವುದನ್ನು, ಪ್ರಗತಿಗಾಗಿ ಇರುವ ಅತ್ಯುತ್ಸಾಹದೊಂದಿಗೆ ನಿಮ್ಮನ್ನು ಆವೇಶಕ್ಕೊಳಪಡಿಸುವುದನ್ನು ತಿಳಿದುಕೊಳ್ಳುವುದರ ಮೂಲಕ ನೀವು ಸಮಗ್ರ ಶಾಂತಿ ಹಾಗೂ ತಾಳಿಕೊಳ್ಳುವ ಸಂತೋಷ ಇವೆರಡನ್ನೂ ಕಂಡುಕೊಳ್ಳುತ್ತೀರಿ.

ಮನುಷ್ಯ ಮೇಲ್ಗಡೆಗೇರಿ ಹೋಗಬೇಕು– ಮೇಲಕ್ಕೇಳಬೇಕು... ವಿಸ್ತರಿಸಿ–ಕೊಳ್ಳಬೇಕು.

**CWM, 3/235-36** **- ಶ್ರೀಮಾತೆ**

*

ವಾಸ್ತವದಲ್ಲಿ, ಭೌತಿಕ ಸತ್ತೆ ಸರಳತೆಯನ್ನು ಮತ್ತು ಸದ್ಭಾವನೆಯನ್ನೂ ಕೂಡ (ಅದು ಯಾವಾಗಲೂ ಜ್ಞಾನೋದಯ ಪಡೆದುದಾಗಿರುವುದಿಲ್ಲ, ಅದರಿಂದ ಬಹಳ ದೂರ ಇರುತ್ತದೆ) ಹೊಂದಿರುತ್ತದೆ, ಆದಾಗ್ಯೂ ಸರಳತೆ ಹಾಗೂ ಸದ್ಭಾವನೆ ಇವು ಪ್ರಾಣಿಕ ಉದ್ರೇಕ ಹಾಗೂ ಮಾನಸಿಕ ಆಡಂಬರಗಳಿಗಿಂತ ಆ ಸತ್ತೆಯನ್ನು ಚೈತ್ಯಕ್ಕೆ ಅತಿ ಹತ್ತಿರವಾಗುವಂತೆ ಇರಿಸುತ್ತವೆ. ಬಹುಶಃ ಅ ಕಾರಣದಿಂದಾಗಿಯೇ ಮಕ್ಕಳಲ್ಲಿ ಚೈತ್ಯ ಸತ್ತೆ ಮಾನಸಿಕ ಹಾಗೂ ಪ್ರಾಣಿಕ ವೈರುಧ್ಯಗಳಿಂದ ಸತತ ಕಡಿಮೆ ದಬ್ಬುವಿಕೆಗೆ ಒಳಗಾಗಿ ಆರಾಮಾಗಿರುತ್ತದೆ.

**CWM, 6/6** **- ಶ್ರೀಮಾತೆ**

*

ಪ್ರಕಟಣೆಯಿಂದ ಪ್ರಯತ್ನ ಮಾಯವಾದ ಕೂಡಲೆ, ಅದು ಬಹಳ ಸರಳವಾಗುತ್ತದೆ, ಆ ಸರಳತೆ ಹೂವಿನ ಅರಳುವಿಕೆ, ಕೂಗಾಟ ಇಲ್ಲವೆ ಭಾವೋದ್ವೇಗವಿಲ್ಲದೆ ತನ್ನ ಪರಿಮಳವನ್ನು ಹರಡುವಿಕೆ ಇವುಗಳಲ್ಲಿರುವ ಸರಳತೆ–ಯಾಗಿರುತ್ತದೆ. ಮತ್ತು ಈ ಸರಳತೆಯಲ್ಲಿ ಅತ್ಯಂತ ಶ್ರೇಷ್ಠ ಸಾಮರ್ಥ್ಯವಿರುತ್ತದೆ, ಆ ಸಾಮರ್ಥ್ಯ ಕನಿಷ್ಠ ಮಟ್ಟದಲ್ಲಿ ಮಿಶ್ರಣಕ್ಕೊಳಗಾಗಿರುತ್ತದೆ, ಹಿಂಸಾತ್ಮಕ ಪ್ರತಿಕ್ರಿಯೆಗಳು ಕನಿಷ್ಠ ಮಟ್ಟದಲ್ಲಿ ಮೇಲಕ್ಕೆದ್ದು ಬರುವಂತೆ ಮಾಡುತ್ತದೆ...

ಸರಳತೆ, ಸರಳತೆ! ನಿನ್ನ ದೈವೀ ಸಾನ್ನಿಧ್ಯದ ಪರಿಶುದ್ಧತೆ ಎಷ್ಟೊಂದು ಮಧುರವಾಗಿದೆ!...

**CWM, 1/17** **- ಶ್ರೀಮಾತೆ**

*

ಉದಾರವಾದ ಹೃದಯ, ಯಾವಾಗಲೂ, ಗತಕಾಲದ ಅಪರಾಧಗಳನ್ನು ಮರೆತು ಬಿಡುತ್ತದೆ ಮತ್ತು ಸಾಮರಸ್ಯವನ್ನು ಮರುಸ್ಥಾಪಿಸಲು ತಯಾರಾಗಿರುತ್ತದೆ.

ಗತಕಾಲದಲ್ಲಿ ಅಂಧಕಾರದಲ್ಲಿದ್ದುದನ್ನು, ಕುರೂಪವಾದದ್ದನ್ನು ಮರೆತು ಬಿಡೋಣ, ಅದರಿಂದಾಗಿ ಪ್ರಕಾಶಮಯ ಭವಿಷ್ಯತ್ತನ್ನು ಸ್ವೀಕರಿಸಲು ತಯಾರು ಮಾಡಿಕೊಳ್ಳುವಂತಾಗುವುದು.

**CWM, 17/357** **- ಶ್ರೀಮಾತೆ**

*

"ದೊಡ್ಡ ಬದಲಾವಣೆಗಾಗಿ ಜಗತ್ತು ತಯಾರು ಮಾಡಿಕೊಳ್ಳುತ್ತಿದೆ. ನೀವು ಸಹಾಯ ಮಾಡುವಿರಾ?"

**ಪ್ರಶ್ನೆ:** *ಯಾವ ದೊಡ್ಡ ಬದಲಾವಣೆಗಾಗಿ ಜಗತ್ತು ತಯಾರಾಗುತ್ತಿದೆ.*

**ಶ್ರೀಮಾತೆ:** ಪ್ರಜ್ಞೆಯ ಬದಲಾವಣೆ. ನಮ್ಮ ಪ್ರಜ್ಞೆ ಬದಲಾದಾಗ ಬದಲಾವಣೆ ಏನಿದೆ ಎಂಬುದನ್ನು ನಾವು ತಿಳಿದುಕೊಳ್ಳುವೆವು.

**ಪ್ರಶ್ನೆ:** *ಈ ಬದಲಾವಣೆ ಬರುವುದಕ್ಕೆ ಮನುಷ್ಯ ಹೇಗೆ ಸಹಾಯ ಮಾಡಬಹುದು?*

**ಶ್ರೀಮಾತೆ:** ಆ ಬದಲಾವಣೆಗೆ ನಮ್ಮ ಸಹಾಯದ ಆವಶ್ಯಕತೆ ಇರುವುದಿಲ್ಲ, ಆದರೆ ನಮ್ಮನ್ನು ಅ ಪ್ರಜ್ಞೆಗೆ ತೆರೆದಿರಿಸಿಕೊಳ್ಳುವುದರ ಆವಶ್ಯಕತೆ ಇದೆ. ಅದರಿಂದಾಗಿ ಅದರ ಬರುವಿಕೆ ನಮಗೆ ವ್ಯರ್ಥವಾಗುವುದಿಲ್ಲ.

**CWM, 12/310** **- ಶ್ರೀಮಾತೆ**

*



## ಸಮಗ್ರ ಸರಳತೆ

### ಪರಿಪೂರ್ಣ ನಿಷ್ಕಾಪಟ್ಯದಿಂದ ಬರುವ ಸರಳತೆ

**(ಶ್ರೀಮಾತೆಯವರು ನೀಡಿದ ಆಧ್ಯಾತ್ಮಿಕ ಪ್ರಾಮುಖ್ಯತೆ ಹಾಗೂ ವಿವರಣೆ)**

**Botanical name: Vittadinia triloba, Creeping daisy**

*

ಪ್ರಗತಿಗಾಗಿ ದಾಹ, ಜ್ಞಾನಕ್ಕಾಗಿ ದಾಹ, ಪರಿವರ್ತನೆಗಾಗಿ ದಾಹ, ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ದೈವೀ ಪ್ರೇಮ ಹಾಗೂ ದೈವೀ ಸತ್ಯಗಳಿಗಾಗಿ ದಾಹ – ಮನುಷ್ಯ ಅವುಗಳನ್ನು ಕಾಪಾಡಿಕೊಂಡು ಬಂದರೆ, ಅವನು ಬಹಳ ತೀವ್ರಗತಿಯಿಂದ ಸಾಗಿ ಹೋಗುವನು. ನಿಜವಾಗಿ ಒಂದು ದಾಹ, ಒಂದು ಆವಶ್ಯಕತೆ ಇರಬೇಕು.

ಇನ್ನು ಮುಂದೆ ಬಂಧನಗಳು ಬೇಡ, ಮುಕ್ತ, ಮುಕ್ತ, ಪ್ರತಿಯೊಂದನ್ನು ಬದಲಿಸಲು ಯಾವಾಗಲೂ ತಯಾರಾಗಿರುವುದು, ಒಂದು ವಿಷಯವನ್ನು ಹೊರತುಪಡಿಸಿ: ಅಭೀಪ್ಸೆಪಡುವುದು, ಈ ದಾಹ.

... ಆ "ದೈವೀ ಏನೋ ಒಂದು" ಇದರ ಆವಶ್ಯಕತೆ ಮನುಷ್ಯನಿಗಿದೆ, ಮನುಷ್ಯನಿಗೆ ಅವಶ್ಯವಾಗಿರುವ ದೈವೀ ಪ್ರೇಮ, ದೈವೀ ಸತ್ಯ, ಪರಮೋಚ್ಚ ದೈವೀ ಪರಿಪೂರ್ಣತೆ ಇವು ಅವನಿಗೆ ಅವಶ್ಯವಾಗಿವೆ– ಮತ್ತು ಅದಷ್ಟೇ. ಸೂತ್ರಗಳು.. ಅಲ್ಲಿ ಅತಿ ಕಡಿಮೆ ಸೂತ್ರಗಳಿದ್ದಷ್ಟು ಹೆಚ್ಚು ಒಳ್ಳೆಯದಾಗುತ್ತದೆ. ಆದರೆ ಅದು: ಆವಶ್ಯಕತೆ, ಅದನ್ನು ದೈವೀ ತತ್ ಮಾತ್ರ ತೃಪ್ತಿಗೊಳಿಸಬಲ್ಲದು.– ಬೇರಾವುದೂ ಅಲ್ಲ, ಅರೆಮನಸ್ಸಿನ ಪ್ರಯತ್ನವಲ್ಲ, ಕೇವಲ ಅದು. ಮತ್ತು ನಂತರ ನೀವು ಸಾಗಿ ಹೋಗುತ್ತೀರಿ!... ನಿಮ್ಮ ಮಾರ್ಗ ನಿಮ್ಮ ಮಾರ್ಗವಾಗಿರುತ್ತದೆ... ಮಾರ್ಗ ಯಾವುದೇ ಆಗಿರಲಿ, ಅದು ಮಹತ್ವದ್ದಲ್ಲ;...

**CWM, 11/6** **- ಶ್ರೀಮಾತೆ**

*

## ಭಾಗ - III

## ಸುಂದರವಾದ ಜೀವನ: ಸಾಧನೋಪಕರಣಗಳು

### "ಮನುಷ್ಯ ತನಗೆ ತಾನೇ ಕತೆಗಳನ್ನು ಹೇಳಿಕೊಳ್ಳುವುದು"

ಕೆಲವು ಮಕ್ಕಳಿರುತ್ತಾರೆ, ಇದನ್ನು ಹೇಗೆ ಕೈಕೊಳ್ಳಬೇಕು ಎಂಬುದು ಅವರಿಗೆ ತಿಳಿದಿರುತ್ತದೆ. ಅವರು ತಮ್ಮ ಕನಸುಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಪ್ರತಿದಿನ ಸಾಯಂಕಾಲ ಅವರು ನಿದ್ರೆ ಮಾಡುವುದಕ್ಕೆ ತೆರಳಿದಾಗ ಕನಸಿನಲ್ಲಿ ಅದೇ ಜಾಗಕ್ಕೆ ಮರಳಿ ಹೋಗುತ್ತಾರೆ ಮತ್ತು ತಮ್ಮ ಕನಸನ್ನು ಮುಂದುವರಿಸುತ್ತಾರೆ.

ನಾನು ಮಗುವಾಗಿದ್ದಾಗ ಅದನ್ನು ಕೈಕೊಳ್ಳುತ್ತಿದ್ದೆ
ಈಗ ನೀವು ಮಗುವಾಗಿರುವುದಿಲ್ಲ, ಅದು ಮರುಕಪಡುವಂತಹದು.
ಆಗ ನನಗೆ ಬೇರೆ ಯಾವ ಪೂರ್ವಮಗ್ನತೆ ಇರುತ್ತಿರಲಿಲ್ಲ.
ಸರಿ, ಮತ್ತೊಮ್ಮೆ ಮಗುವಾಗಿರಿ, ಅದನ್ನು ಹೇಗೆ
ಕೈಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳುವಿರಿ.

ಅದಕ್ಕಿಂತ ಸ್ವಾರಸ್ಯಕರವಾಗಿರುವ ಬೇರಾವುದೂ ಇಲ್ಲ. ಅದು ರಾತ್ರಿಯನ್ನು ಅತ್ಯಂತ ಸಂತೋಷದಿಂದ ಕಳೆಯುವ ರೀತಿ. ನೀವು ಕತೆಯೊಂದನ್ನು ಪ್ರಾರಂಭಿಸುತ್ತೀರಿ, ನಂತರ, ಎಚ್ಚರಗೊಳ್ಳುವ ಸಮಯವಾದಾಗ ಅದರ ಕೊನೆಯ

ವಾಕ್ಯಕ್ಕೆ ಪೂರ್ಣ ವಿರಾಮ ಇರಿಸುತ್ತೀರಿ, ಮತ್ತು ದೇಹದಲ್ಲಿ ಪ್ರವೇಶಿಸುತ್ತೀರಿ. ಮತ್ತು ನಂತರ ಅನುಸರಿಸಿಬರುವ ರಾತ್ರಿ ಕಾಲದಲ್ಲಿ ಮತ್ತೆ ನೀವು ಚಲಿಸಲು ಪ್ರಾರಂಭಿಸುತ್ತೀರಿ, ಆ ಪುಟವನ್ನು ಮರಳಿ ತೆರೆದಿರಿಸುತ್ತೀರಿ, ನೀವು ದೇಹದಿಂದ ಹೊರಗಿರುವಷ್ಟು ಇದೇ ಕಾಲದಲ್ಲಿ ನಿಮ್ಮ ಕತೆಯನ್ನು ಪುನರಾರಂಭಿಸುತ್ತೀರಿ, ಮತ್ತು ಆಗ ವಿಷಯಗಳನ್ನು ಸರಿಯಾಗಿ ವ್ಯವಸ್ಥೆಗೊಳಪಡಿಸುತ್ತೀರಿ– ಅವುಗಳನ್ನು ಸರಿಯಾಗಿ ವ್ಯವಸ್ಥೆಗೊಳಪಡಿಸಬೇಕು ಅದು ಬಹಳ ಸುಂದರವಾಗಿರಬೇಕು. ದೇಹದಲ್ಲಿ ಮರಳಿ ಬರುವ ಸಮಯವಾದಾಗ ನೀವು ಪೂರ್ಣವಿರಾಮವನ್ನು ಮತ್ತೆ ಇರಿಸುತ್ತೀರಿ. ಮತ್ತು ಅ ವಿಷಯಗಳಿಗೆ ಹೇಳುತ್ತೀರಿ: "ನಾನು ಮರಳಿ ಬರುವವರೆಗೆ ಅಚಂಚಲವಾಗಿ ಉಳಿದುಕೊಳ್ಳಿರಿ." ನೀವು ಮತ್ತೆ ನಿಮ್ಮ ದೇಹದಲ್ಲಿ ಮರಳಿ ಬರುತ್ತೀರಿ. ಮತ್ತು ನೀವು ಇದನ್ನು ಪ್ರತಿದಿನ ಸಾಯಂಕಾಲ ಮುಂದುವರಿಸಿಕೊಂಡು ಹೋಗುತ್ತೀರಿ ಮತ್ತು ಅದ್ಭುತ ಯಕ್ಷಿಣಿ ಕತೆ (fairy tale)ಗಳಿರುವ ಪುಸ್ತಕವೊಂದನ್ನು ಬರೆಯುತ್ತೀರಿ, ಆದರೆ ಅದಕ್ಕಾಗಿ ನೀವು ಎಚ್ಚತ್ತುಕೊಂಡಾಗ ಅದನ್ನು ನೆನಪಿನಲ್ಲಿಟ್ಟುಕೊಂಡಿರಬೇಕು.

**ಪ್ರಶ್ನೆ:** *ಆದರೆ ಇದು ಹಗಲು ಹೊತ್ತಿನಲ್ಲಿ ಅಚಂಚಲ ಸ್ಥಿತಿಯಲ್ಲಿ ಇರುವುದರ ಮೇಲೆ ಅವಲಂಬಿಸಿರುತ್ತದೆಯಲ್ಲವೆ?*

**ಶ್ರೀಮಾತೆ:** ಇಲ್ಲ ಅದು ಮಗುವಿನ ಸಾಚಾತನ (candour)ದ ಮೇಲೆ ಅವಲಂಬಿಸಿರುತ್ತದೆ. ಮನುಷ್ಯ ತನಗೇನು ಸಂಭವಿಸುತ್ತಿದೆಯೋ ಅದರಲ್ಲಿ ಅವನಿರಿಸುವ ವಿಶ್ವಾಸದ ಮೇಲೆ, ಮನಸ್ಸಿನ ವಿಮರ್ಶಾತ್ಮಕ ಭಾವನೆಯ ಅನುಪಸ್ಥಿತಿಯ ಮೇಲೆ, ಹೃದಯದ ಸರಳತೆಯ ಮೇಲೆ, ಮತ್ತು ತಾರುಣ್ಯವಿರುವ ಮತ್ತು ಕ್ರಿಯಾಶೀಲವಾದ ಚೈತನ್ಯದ ಮೇಲೆ– ಅದೆಲ್ಲದರ ಮೇಲೆ ಅದು ಅವಲಂಬಿಸಿರುತ್ತದೆ ಒಂದು ಬಗೆಯ ಆಂತರಿಕ ಪ್ರಾಣಿಕ ಔದಾರ್ಯ: ಮನುಷ್ಯ ಏನಾಗಿರಬಾರದೆಂಬುದನ್ನು ಕುರಿತು, ನಿಜವಾಗಿ ಹಲವಾರು ವಿಷಯಗಳಿವೆ: ಮನುಷ್ಯ ಬಹಳ ಅಹಂಕಾರಿಯಾಗಿರಬಾರದು, ಬಹಳ ಜಿಪುಣನಾಗಿರಬಾರದು, ಇಲ್ಲವೆ ಅತಿ ವ್ಯಾವಹಾರಿಕನಾದವನು ಆಗಿರಬಾರದು, ಅತಿ ಪ್ರಯೋಜನವಾದಿ–ಯಾಗಿರಬಾರದು– ಅವನು ಮಕ್ಕಳ ಹಾಗಿರಬೇಕು. ಮತ್ತು ನಂತರ ಮನುಷ್ಯನಲ್ಲಿ ಉತ್ಸಾಹಭರಿತ ಕಲ್ಪನೆ ಮಾಡಿಕೊಳ್ಳುವ ಸಾಮರ್ಥ್ಯವಿರಬೇಕು, ಏಕೆಂದರೆ– ನಾನು

ನಿಮಗೆ ಹೆಡ್ಡತನದ ವಿಷಯಗಳನ್ನು ಹೇಳುತ್ತಿರುವಂತೆ ತೋರಿಬರುತ್ತದೆ, ಆದರೆ ಅದು ಬಹಳ ಸತ್ಯವಾದದ್ದು– ಅಲ್ಲಿ ಒಂದು ಜಗತ್ತಿದೆ, ಅದರಲ್ಲಿ ನೀವು ರೂಪಗಳನ್ನು ಮಾಡುವ ಪರಮೋಚ್ಚ ನಿರ್ಮಾಣಕಾರರಾಗಿರುತ್ತೀರಿ, ಅದು ನಿಮ್ಮದೇ ವಿಶಿಷ್ಟ ಪ್ರಾಣಿಕ ಜಗತ್ತು. ನೀವು ಪರಮೋಚ್ಚ ತಯಾರಕರಾಗಿರುತ್ತೀರಿ, ಅದನ್ನು ಹೇಗೆ ಉಪಯೋಗಿಸಬೇಕು ಎಂಬುದು ನಿಮಗೆ ತಿಳಿದಿದ್ದರೆ ನೀವು ನಿಮ್ಮ ಜಗತ್ತನ್ನು ಒಂದು ಅದ್ಭುತವಾದದ್ದನ್ನಾಗಿ ಮಾಡಬಲ್ಲಿರಿ. ನಿಮ್ಮಲ್ಲಿ ಕಲಾತ್ಮಕ ಇಲ್ಲವೆ ಕಾವ್ಯಾತ್ಮಕ ಪ್ರಜ್ಞೆ ಇದ್ದರೆ, ನೀವು ಸಾಮರಸ್ಯವನ್ನು, ಸೌಂದರ್ಯವನ್ನು ಪ್ರೀತಿಸುತ್ತಿದ್ದರೆ ಅಲ್ಲಿ ಅದ್ಭುತವಾದ ಏನೋ ಒಂದನ್ನು ನಿರ್ಮಾಣ ಮಾಡುತ್ತೀರಿ, ಅದು ಭೌತಿಕ ಪ್ರಕಟನೆಯಲ್ಲಿ ಜಿಗಿದು ಬರುವ ಪ್ರವೃತ್ತಿ ಹೊಂದಿರುತ್ತದೆ.

ನಾನು ಚಿಕ್ಕವಳಾಗಿದ್ದಾಗ ಇದನ್ನು “ಮನುಷ್ಯ ತನಗೆ ತಾನೇ ಕತೆಗಳನ್ನು ಹೇಳುವುದು” ಎಂದು ಕರೆಯುತ್ತಿದ್ದೆ.

ಅದನ್ನು ಶಬ್ದಗಳಿಂದ ಮನುಷ್ಯನ ತಲೆಯಲ್ಲಿ ಹೇಳುವುದು ಅಲ್ಲವೇ ಅಲ್ಲ, ಅದು ಹೊಸದಾದ ಹಾಗೂ ಪರಿಶುದ್ಧವಾದ ಈ ಸ್ಥಾನಕ್ಕೆ ಹೋಗುವುದಾಗಿದೆ, ಮತ್ತು ಅಲ್ಲಿ ಅದ್ಭುತ ಕತೆಯನ್ನು ನಿರ್ಮಾಣ ಮಾಡುವುದಾಗಿದೆ. ಮತ್ತು ನೀವು ನಿಮಗೇ ಈ ರೀತಿಯಲ್ಲಿ ಒಂದು ಕತೆಯನ್ನು ಹೇಗೆ ಹೇಳಬೇಕು ಎಂಬುದು ತಿಳಿದಿದ್ದರೆ ಮತ್ತು ಅದು ನಿಜವಾಗಿ ಸುಂದರವಾಗಿದ್ದರೆ, ನಿಜವಾಗಿ ಸಾಮರಸ್ಯ–ದ್ದಾಗಿದ್ದರೆ, ನಿಜವಾದ ಸಾಮರ್ಥ್ಯವುಳ್ಳದ್ದಾಗಿದ್ದರೆ, ಮತ್ತು ಸರಿಯಾಗಿ ಒಂದಕ್ಕೊಂದು ಹೊಂದಿಕೊಳ್ಳುವಂತೆ ಮಾಡಿದ್ದರೆ ಈ ಕತೆಯನ್ನು ನಿಮ್ಮ ಜೀವನದಲ್ಲಿ ಸಿದ್ಧಿಸಿಕೊಳ್ಳಬಹುದು,– ಬಹುಶಃ ನಿಖರವಾಗಿ, ನೀವು ಸೃಷ್ಟಿಸಿದ ರೂಪದಲ್ಲಿ ಅದಿರಲಿಕ್ಕಿಲ್ಲ, ಆದರೆ ಹೆಚ್ಚು ಕಡಿಮೆ ನೀವು ಕೈಕೊಂಡದ್ದರ ಬದಲಾದ ಭೌತಿಕ ರೂಪದಲ್ಲಿರಬಹುದು.

ಅದಕ್ಕೆ ಹಲವಾರು ವರ್ಷಗಳು ಬೇಕಾಗಬಹುದು, ಬಹುಶಃ ನಿಮ್ಮ ಕತೆ ನಿಮ್ಮ ಜೀವನವನ್ನು ಸಂಘಟಿಸುವ ಪ್ರವೃತ್ತಿ ಹೊಂದಬಹುದು.

ಸುಂದರವಾದ ಕತೆಯನ್ನು ಹೇಳಬಲ್ಲ ಜನರು ಅತಿ ಕಡಿಮೆ ಸಂಖ್ಯೆಯಲ್ಲಿರುತ್ತಾರೆ ಮತ್ತು ಅವರು ಯಾವಾಗಲೂ ಅದರಲ್ಲಿ ನಡುಕ ಹುಟ್ಟಿಸುವ ಭಯವನ್ನು ಮಿಶ್ರಣ ಮಾಡುತ್ತಾರೆ, ಅದನ್ನು ಕುರಿತು ನಂತರ ವಿಷಾದಪಡುತ್ತಾರೆ. ಮನುಷ್ಯ

ಭವ್ಯವಾದ, ನಡುಕ ಹುಟ್ಟಿಸುವ ಭಯವಿರದ ಕತೆಯೊಂದನ್ನು ಸೃಷ್ಟಿಸಬಲ್ಲನಾದರೆ, ಅದು ಪ್ರತಿಯೊಬ್ಬನ ಜೀವನದ ಮೇಲೆ ಅಸಾಧಾರಣ ಪ್ರಭಾವ ಬೀರುವುದು. ಇದನ್ನೇ ಜನರು ತಿಳಿದುಕೊಂಡಿರುವುದಿಲ್ಲ. ಮನುಷ್ಯ ಪ್ರಾಣಿಕ ರೂಪಗಳಿರುವ ಜಗತ್ತಿನಲ್ಲಿ ತನ್ನ ಈ ಸೃಷ್ಟ್ಯಾತ್ಮಕ ಸಾಮರ್ಥ್ಯವನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ಇನ್ನೂ ಚಿಕ್ಕ ಮಗುವಾಗಿದ್ದಾಗಲೇ ತಿಳಿದುಕೊಂಡಿದ್ದರೆ ಒಳ್ಳೆಯದು, ಏಕೆಂದರೆ ಆಗ ಅವನು ತನ್ನ ಪ್ರಾಪಂಚಿಕ ಅದೃಷ್ಟವನ್ನು ರೂಪಿಸಬಲ್ಲವ–ನಾಗಿರುತ್ತಾನೆ. ಆದರೆ, ಸಾಧಾರಣವಾಗಿ, ನಿಮ್ಮ ಸುತ್ತಲಿರುವ ಜನರು ಕೆಲವೊಮ್ಮೆ ನಿಮ್ಮ ಚಿಕ್ಕ ಗೆಳೆಯರು ಆದರೆ ಅದಕ್ಕೂ ಹೆಚ್ಚಾಗಿ ಪಾಲಕರು ಹಾಗೂ ಶಿಕ್ಷಕರು ಅದರಲ್ಲಿ ಕೈಯಾಡಿಸುತ್ತಾರೆ ಮತ್ತು ನಿಮಗಾಗಿ ಪ್ರತಿಯೊಂದನ್ನು ಕೆಡಿಸುತ್ತಾರೆ, ಅದೆಷ್ಟು ಚೆನ್ನಾಗಿ ಎಂದರೆ, ಅದು ಬಹಳ ಅಪರೂಪಕ್ಕೆ ಸಂಪೂರ್ಣವಾಗಿ ಯಶಸ್ಸನ್ನು ಕಂಡುಕೊಳ್ಳುತ್ತದೆ.

ಆದರೆ, ಅದು ಹಾಗಿರದಿದ್ದರೆ. ಮಗುವೊಬ್ಬನ ಸಾಚಾತನದಿಂದ ಅದನ್ನು ಆ ರೀತಿಯಲ್ಲಿ ಕೈಕೊಂಡರೆ, ನೀವು ನಿಮಗಾಗಿ ಅದ್ಭುತ ಜೀವನವನ್ನು ಸಂಘಟಿಸಬಲ್ಲಿರಿ–ನಾನು ಭೌತಿಕ ಜೀವನವನ್ನು ಕುರಿತು ಹೇಳುತ್ತಿದ್ದೇನೆ.

ಬಾಲ್ಯಕಾಲದ ಕನಸುಗಳು ಪ್ರಾಯಕ್ಕೆ ಬಂದ ವಯಸ್ಸಾದಾಗ ನೈಜತೆಗಳಾಗಿರುತ್ತವೆ.

**CWM, 8/116-18** **- ಶ್ರೀಮಾತೆ**

*

ಮಾನವ ವಿವೇಕ ಎಂದು ಹಾಗೆ ಕರೆಯಲಾದ ಎಲ್ಲ ತೊಡಕಿನ ಮೇಲೆ ದೈವೀಕೃಪೆಯ ಪ್ರಕಾಶಮಯ ಸರಳತೆ ಇದೆ. ನಾವು ಅದಕ್ಕೆ ಕಾರ್ಯಮಾಡಲು ಅನುವು ಮಾಡಿಕೊಟ್ಟರೆ ಅದು ಕಾರ್ಯಕೈಕೊಳ್ಳಲು ತಯಾರಾಗಿರುತ್ತದೆ.

ಮನುಷ್ಯನ ಮನಸ್ಸು ಜೀವನದಲ್ಲಿ ಅಷ್ಟೊಂದು ಅನೇಕ ನಿರರ್ಥಕ ತೊಡಕುಗಳನ್ನು ಒಳಗೆ ಕಳಿಸದಿದ್ದರೆ ಜೀವನ ಬಹಳ ಸರಳವಾಗುವುದು ಹಾಗೂ ಸುಲಭವಾಗುವುದು.

**CWM, 14/344** **- ಶ್ರೀಮಾತೆ**

*

ಕುರೂಪದವಾಗಿರುವ ವಸ್ತು–ವಿಷಯಗಳು, ಪುಸ್ತಕಗಳಲ್ಲಿ ಅವುಗಳ ಚಿತ್ರಗಳನ್ನು ಕೊಡದೆ ಇರುವಾಗಲೂ, ಸಾಕಷ್ಟಿವೆ ಎಂದು ನೀವು ಯೋಚಿಸು–ವುದಿಲ್ಲವೆ? ಮಗುವಾಗಿದ್ದಾಗಿನಿಂದಲೂ ಅದು ನನಗೆ, ಯಾವಾಗಲೂ, ಆಶ್ಚರ್ಯವನ್ನುಂಟು ಮಾಡುವ ಒಂದು ಸಂಗತಿಯಾಗಿತ್ತು– ಜೀವನ ಎಷ್ಟೊಂದು ಕುರೂಪದ್ದಾಗಿದೆ, ಎಷ್ಟೊಂದು ತುಚ್ಛ, ದುಃಖದಾಯಕವಾಗಿದೆ, ಕೆಲವೊಮ್ಮೆ ಜುಗುಪ್ಸೆ ತರಿಸುವ ವಿಷಯವಾಗಿರುತ್ತದೆ. ಈಗಾಗಲೆ ಅಲ್ಲಿ ಹೆಚ್ಚು ಕೆಟ್ಟವಾಗಿರುವ ವಿಷಯಗಳು ಇರುವಾಗ ಅವುಗಳಿಗಿಂತಲೂ ಹೆಚ್ಚು ಕೆಟ್ಟವಾದುವುಗಳ ಬಗ್ಗೆ ಕಲ್ಪನೆ ಮಾಡಿಕೊಳ್ಳುವುದರಿಂದ ಯಾವ ಉಪಯೋಗವಿದೆ? ನೀವು ಹೆಚ್ಚು ಸುಂದರವಾದ ಏನೋ ಒಂದನ್ನು, ಹೆಚ್ಚು ಸುಂದರವಾದ ಜೀವನವನ್ನು ಕಲ್ಪನೆ ಮಾಡಿಕೊಂಡರೆ, ಅದು ತೊಂದರೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿರುತ್ತದೆ.

**CWM, 4/155** **- ಶ್ರೀಮಾತೆ**

*

**ನಿಮ್ಮನ್ನು ನೀವೇ ಸಂಘಟಿಸಿಕೊಳ್ಳಿರಿ**

ಮನುಷ್ಯ ತನ್ನಲ್ಲಿಯೇ ವಿರೋಧೀ ಸಂಕಲ್ಪಗಳಿರುವುದನ್ನು ಕಂಡುಕೊಳ್ಳುತ್ತಾನೆ.

ಹೌದು ಅವು ಹಲವಾರಿರುತ್ತವೆ. ಕೈಕೊಳ್ಳಬೇಕಾದ ಶೋಧಗಳಲ್ಲಿ ಅದು ಮೊದಲನೆಯದು. ಮನುಷ್ಯನಲ್ಲಿ ಒಂದು ಭಾಗವಿರುತ್ತದೆ, ಅದು ವಿಷಯಗಳು ಈ ರೀತಿ ಇರಲೆಂದು ಬಯಸುತ್ತದೆ, ಮತ್ತು ನಂತರ ಇನ್ನೊಂದು ಕ್ಷಣದಲ್ಲಿ ಇನ್ನೊಂದು ರೀತಿ, ಮೂರನೆಯ ಸಲ ಇನ್ನೂ ಬೇರೆ ವಿಷಯ ಇರಲೆಂದು ಮನುಷ್ಯ ಬಯಸುತ್ತಾನೆ!

ಅಲ್ಲದೆ, ಅಲ್ಲಿ ಇದೂ ಕೂಡ ಇದೆ: ಬೇಕೆಂದು ಬಯಸಿದ್ದು ಒಂದು ವಿಷಯವಾಗುತ್ತದೆ, ಇನ್ನೊಂದು ಬೇಡ ಎಂದು ಹೇಳುತ್ತದೆ, ಹಾಗಾಗಿ? ಆದರೆ ನಿಖರವಾಗಿ ಯಾವುದನ್ನು ಕಂಡು ಹಿಡಿಯಬೇಕಾಗಿರುತ್ತದೆಯೋ ಎಂಬುದನ್ನು ನೀವು ಬಯಸಿದರೆ ಅದು ಕನಿಷ್ಠ ಮಟ್ಟದಲ್ಲಿ ನಿಮ್ಮನ್ನು ನೀವು ಸಂಘಟಿಸಿಕೊಳ್ಳುವು–ದಾಗಿರುತ್ತದೆ. ಚಲನ ಚಿತ್ರದಲ್ಲಿರುವ ಹಾಗೆ ನಿಮ್ಮನ್ನು ಪರದೆಯೊಂದರ ಮೇಲೆ ಏಕೆ ಪ್ರಕ್ಷೇಪಿಸಿಕೊಳ್ಳಬಾರದು, ಮತ್ತು ನಂತರ ಅದರ ಮೇಲೆ ನೀವು ಚಲಿಸುತ್ತಿರುವುದನ್ನು ನೋಡಬಾರದು? ಅದೆಷ್ಟು ಸ್ವಾರಸ್ಯಕರವಾಗಿರುತ್ತದೆ!

ಇದು ಮೊದಲ ಹೆಜ್ಜೆ.

ನಿಮ್ಮನ್ನು ನೀವು ಪರದೆಯ ಮೇಲೆ ಪ್ರಕ್ಷೇಪಿಸಿಕೊಳ್ಳುತ್ತೀರಿ ಮತ್ತು ನಂತರ ಅವಲೋಕಿಸುತ್ತೀರಿ, ಮತ್ತು ಅಲ್ಲಿ ಚಲಿಸುತ್ತಿರುವುದೆಲ್ಲವನ್ನೂ ನೋಡುತ್ತೀರಿ, ಅದು ಹೇಗೆ ಚಲಿಸುತ್ತದೆ ಮತ್ತು ಏನು ಸಂಭವಿಸುತ್ತದೆ ಎಂಬುದನ್ನು ನೋಡುತ್ತೀರಿ. ನೀವು ಚಿಕ್ಕ ರೇಖಾಕೃತಿಯೊಂದನ್ನು ಮಾಡುತ್ತೀರಿ, ಆಗ ಅದು ಬಹಳ ಸ್ವಾರಸ್ಯಕರವಾಗಿರುತ್ತದೆ. ಮತ್ತು ಸ್ವಲ್ಪ ಕಾಲದ ನಂತರ, ನೀವು ನೋಡುವುದನ್ನು ರೂಢಿಸಿಕೊಂಡ ನಂತರ, ಒಂದು ಹೆಜ್ಜೆ ಮುಂದೆ ಸಾಗಿ ಹೋಗಬಲ್ಲಿರಿ ಮತ್ತು ನಿರ್ಧಾರವೊಂದನ್ನು ಮಾಡಬಲ್ಲಿರಿ. ಇಲ್ಲವೆ ಇನ್ನೂ ಶ್ರೇಷ್ಠತರ ಹೆಜ್ಜೆ ಎಂದರೆ: ನೀವು ಸಂಘಟಿಸುತ್ತೀರಿ– ವ್ಯವಸ್ಥೆಗೊಳಿಸುತ್ತೀರಿ, ಅದೆಲ್ಲವನ್ನೂ ಕೈಗೆತ್ತಿಕೊಳ್ಳುತ್ತೀರಿ, ಪ್ರತಿಯೊಂದನ್ನು ಅದರದರ ಸ್ಥಾನದಲ್ಲಿ–ರಿಸುತ್ತೀರಿ, ನಿಮ್ಮ ಸಂಘಟನೆ ಹೇಗಿರುತ್ತದೆಂದರೆ, ನೀವು ಆಂತರಿಕ ಅರ್ಥದೊಂದಿಗೆ ಸರಳ ಚಲನೆ ಹೊಂದುವುದನ್ನು ಪ್ರಾರಂಭಿಸುತ್ತೀರಿ.

ಮತ್ತು ನಂತರ ನೀವು ನಿಮ್ಮ ನಿರ್ದೇಶನದ ಬಗ್ಗೆ ಅರಿವುಳ್ಳವರಾಗುತ್ತೀರಿ, ಮತ್ತು ಹೀಗೆ ಹೇಳಲು ಶಕ್ತರಾಗುತ್ತೀರಿ: ಸರಿ. ಅದು ಹೀಗಿರುವುದು, ನನ್ನ ಜೀವನ ಆ ರೀತಿಯಲ್ಲಿ ಅಭಿವೃದ್ಧಿ ಹೊಂದುವುದು, ಏಕೆಂದರೆ, ಅದು ನನ್ನ ಜೀವನದ ತರ್ಕವಾಗಿದೆ, ಈಗ ನಾನದೆಲ್ಲವನ್ನು ನನ್ನೊಳಗೆ ವ್ಯವಸ್ಥಿತಗೊಳಿಸಿದ್ದೇನೆ, ಪ್ರತಿಯೊಂದನ್ನು ಅದರ ಸ್ಥಾನದಲ್ಲಿ ಇರಿಸಲಾಗಿದೆ, ಮತ್ತು ಹಾಗಾಗಿ ಸ್ವಾಭಾವಿಕವಾಗಿ ಒಂದು ಕೇಂದ್ರ ನೆಲೆ ನಿರ್ದೇಶನ ರೂಪುಗೊಳ್ಳುತ್ತಿದೆ, ನಾನು ಈ ನಿರ್ದೇಶನವನ್ನು ಅನುಸರಿಸುತ್ತಿದ್ದೇನೆ. ಒಂದು ಹೆಜ್ಜೆ ಹೆಚ್ಚು ಮುಂದಿರಿಸಿದಾಗ ನನಗೆ ಏನು ಸಂಭವಿಸಲಿದೆ ಎಂಬುದನ್ನು ನಾನು ತಿಳಿದುಕೊಳ್ಳುತ್ತೇನೆ, ಏಕೆಂದರೆ ನಿರ್ಧಾರ ಕೈಕೊಳ್ಳುವವನು ಸ್ವತಃ ನಾನೇ ಆಗಿರುತ್ತೇನೆ.... "ನನಗೆ ತಿಳಿಯದು, ನಿಮಗೆ ನಾನಿದನ್ನು ನಿಮಗೆ ಹೇಳುತ್ತಿದ್ದೇನೆ, ನನಗೆ ಅದು ಭವ್ಯ ರೀತಿಯಲ್ಲಿ ಸ್ವಾರಸ್ಯಕರವಾಗಿರುತ್ತಿತ್ತು ಎಂದು ತೋರಿಬಂದಿತು. ಅದು ಜಗತ್ತಿನಲ್ಲಿ ಅತ್ಯಂತ ಸ್ವಾರಸ್ಯಕರ ವಿಷಯವಾಗಿತ್ತು. ಅಲ್ಲಿ ಬೇರೇನೂ ಇರಲಿಲ್ಲ, ಬೇರೆ ಯಾವ ವಿಷಯವೂ ಅದಕ್ಕಿಂತ ಹೆಚ್ಚು ಸ್ವಾರಸ್ಯಕರವೆಂದೆನಿಸಲಿಲ್ಲ. ಇದು ನನಗೆ ಸಂಭವಿಸಿತು. ಆಗ ನಾನು ಐದು ಇಲ್ಲವೆ ಆರು ಇಲ್ಲವೆ ಏಳು ವರ್ಷದವಳಾಗಿದ್ದೆ (ಏಳನೆಯ ವರ್ಷದಲ್ಲಿ ಅದು ಬಹಳ ಗಂಭೀರವಾಯಿತು),

ನನ್ನ ತಂದೆಗೆ ಸರ್ಕಸ್ ಬಹಳ ಪ್ರೀತಿಯ ವಿಷಯವಾಗಿತ್ತು. ಅವನು ಬಂದು ನನಗೆ ಹೇಳಿದ: “ನನ್ನ ಜೊತೆಗೆ ಬಾ, ನಾನು ರವಿವಾರ ಸರ್ಕಸ್ ನೋಡಲು ಹೋಗುವವನಿದ್ದೇನೆ” ನಾನು ಹೇಳಿದೆ: “ಇಲ್ಲ ನಾನು ಸರ್ಕಸ್ ನೋಡಲು ಹೋಗುವುದಕ್ಕಿಂತ ಹೆಚ್ಚು ಸ್ವಾರಸ್ಯಕರವಾದದ್ದನ್ನು ಕೈಕೊಳ್ಳುತ್ತಿದ್ದೇನೆ!” ಇಲ್ಲವೆ ಮತ್ತೆ ತರುಣ ಸ್ನೇಹಿತರು ನಾವು ಆಟ ಆಡಬೇಕಾದ ಸ್ಥಳದಲ್ಲಿ ಒಟ್ಟಿಗೆ ಭೇಟಿ ಮಾಡೋಣ ಬಾ ಎಂದು ನನ್ನನ್ನು ಕರೆದಾಗ: “ಇಲ್ಲ, ನಾನು ಇಲ್ಲಿಯೇ ಹೆಚ್ಚು ಸಂತೋಷ ಕಂಡುಕೊಳ್ಳುತ್ತಿದ್ದೇನೆ” ಎಂದು ಹೇಳುತ್ತಿದ್ದೆ. ಮತ್ತು ಹಾಗೆ ಹೇಳುತ್ತಿದ್ದುದು ಪೂರ್ತಿ ನಿಷ್ಕಾಪಟ್ಯದ್ದಾಗಿರುತ್ತಿತ್ತು. ಅದೊಂದು ಸೋಗಾಗಿರುತ್ತಿರಲಿಲ್ಲ: ನನಗೆ ಅದು ಹಾಗಿತ್ತು, ಅದು ನಿಜವಾದದ್ದಾಗಿತ್ತು. ಅದಕ್ಕಿಂತಲೂ ಹೆಚ್ಚಿನ ಸಂತೋಷ ತಂದುಕೊಳ್ಳುವ ವಿಷಯ ಜಗತ್ತಿನಲ್ಲಿ ಬೇರಾವುದೂ ಇರಲಿಲ್ಲ.

ಯಾರಾದರೂ ಅದನ್ನು ಅದೇ ತಾಜಾತನದಿಂದ, ನಿಷ್ಕಾಪಟ್ಯದಿಂದ ಆ ರೀತಿಯಲ್ಲಿ ಕೈಕೊಂಡರೆ ಅತ್ಯಂತ ಸ್ವಾರಸ್ಯಕರವಾದ ಪರಿಣಾಮಗಳನ್ನು ದೊರಕಿಸುವರು ಎಂಬುದರ ಬಗ್ಗೆ ನನಗೆ ಮನವರಿಕೆಯಾಗಿದೆ... ಅದೆಲ್ಲವನ್ನೂ ನಿಮ್ಮೆದುರಿಗೆ ಪರದೆಯ ಮೇಲಿರಿಸಿ ಏನು ಸಂಭವಿಸುತ್ತಿದೆ ಎಂಬುದನ್ನು ನೋಡಬೇಕು. ಮೊದಲ ಹೆಜ್ಜೆ ಏನು ಸಂಭವಿಸುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಾಗಿದೆ, ಮತ್ತು ಆಗ ಏನೋ ಒಂದು ಸಂತೋಷಕರವಲ್ಲದ್ದು ಎಂದು ತೋರಿಬಂದಾಗ ನೀವು ಕಣ್ಣುಗಳನ್ನು ಮುಚ್ಚಿಕೊಳ್ಳಲು ಪ್ರಯತ್ನ ಮಾಡಬಾರದು! ಅವುಗಳನ್ನು ವಿಸ್ತಾರವಾಗಿ ತೆರೆದಿರಿಸಬೇಕು ಮತ್ತು ಪ್ರತಿಯೊಂದು ವಿಷಯವನ್ನು ಆ ರೀತಿಯಲ್ಲಿ ಪರದೆಯ ಮೇಲೆ ಇರಿಸಬೇಕು. ಆಗ ನೀವು ಬಹಳ ಸ್ವಾರಸ್ಯಕರವಾದ ಶೋಧವನ್ನು ಮಾಡುತ್ತೀರಿ. ಆಗ ಮುಂದಿನ ಹೆಜ್ಜೆ ನಿಮಗೇ ನೀವು ಹೇಳಿಕೊಳ್ಳುವುದನ್ನು ಪ್ರಾರಂಭಿಸುವುದಾಗಿದೆ: “ನನ್ನಂತರಂಗದಲ್ಲಿ ಇದೆಲ್ಲವೂ ಸಂಭವಿಸುತ್ತಿರುವುದರಿಂದ ಈ ಒಂದು ವಿಷಯವನ್ನು ಈ ರೀತಿಯಲ್ಲಿ, ನಂತರ ಆ ವಿಷಯವನ್ನು ಆ ರೀತಿಯಲ್ಲಿ, ನಂತರ ಈ ಇನ್ನೊಂದನ್ನು ಈ ರೀತಿಯಲ್ಲಿ ನಾನು ಏಕಿರಿಸಬಾರದು ಮತ್ತು ಹೀಗೆ ನಾನು ತರ್ಕಬದ್ಧವಾದ ಹಾಗೂ ಅರ್ಥಪೂರ್ಣವಾದ ಏನೋ ಒಂದನ್ನು ಮಾಡಿದ ಹಾಗಾಗುವುದಿಲ್ಲವೆ? ಮಾರ್ಗದಲ್ಲಿ ಅಡೆತಡೆ ಉಂಟುಮಾಡುವ ಆ ವಿಷಯವನ್ನು ಏಕೆ ತೆಗೆದು ಹಾಕಬಾರದು? ಈ ಸಂಕಲ್ಪಗಳು ಸಂಘರ್ಷಗಳನ್ನುಂಟು ಮಾಡುತ್ತವೆ, ಏಕೆ? ಅದು ಸತ್ತೆಯಲ್ಲಿ ಏನನ್ನು ಪ್ರತಿನಿಧಿಸುತ್ತದೆ?

ಅದು ಅಲ್ಲಿ ಏಕಿದೆ? ಅದನ್ನು ಅಲ್ಲಿರಿಸಿದರೆ ನನಗೆ ಹಾನಿಯನ್ನುಂಟು ಮಾಡುವುದರ ಬದಲಾಗಿ ಸಹಾಯ ಮಾಡುವಂತಾಗುತ್ತದೆ." ಇತ್ಯಾದಿ.

ಸ್ವಲ್ಪ ಸ್ವಲ್ಪವಾಗಿ ನೀವು ಹೆಚ್ಚು ಸ್ಪಷ್ಟ ರೀತಿಯಲ್ಲಿ ನೋಡುತ್ತೀರಿ, ಮತ್ತು ಆಗ ನಿಮ್ಮನ್ನು ಆ ರೀತಿಯಲ್ಲಿ ಏಕೆ ತಯಾರು ಮಾಡಲಾಗಿದೆ, ನೀವು ಕೈಕೊಳ್ಳಬೇಕಾದ ಕಾರ್ಯವೇನು–ಎಂಬುದನ್ನು ನೋಡುತ್ತೀರಿ. ನೀವು ಜನ್ಮ ತಾಳಿದ್ದು ಏತಕ್ಕಾಗಿ ಮತ್ತು ಆಗ ಬಹಳ ಸ್ವಾಭಾವಿಕವಾಗಿ ಇದು ಸಂಭವಿಸುವುದಕ್ಕಾಗಿ ಎಲ್ಲವನ್ನೂ ಸಂಘಟಿಸಿರುವುದರಿಂದ, ಮಾರ್ಗ ಸರಳವಾಗುತ್ತದೆ ಹಾಗೂ ನೀವು ಮುಂಚಿತ–ವಾಗಿಯೇ ಹೇಳಬಹುದು: "ಈ ರೀತಿಯಲ್ಲಿ ಅದು ಸಂಭವಿಸುವುದು." ಅದೆಲ್ಲವನ್ನು ತಲೆಬುಡ ಮಾಡಲು ಪ್ರಯತ್ನಿಸುತ್ತ ವಿಷಯಗಳು ಹೊರಗಿನಿಂದ ಬಂದಾಗ, ನೀವು ಹೀಗೆ ಹೇಳಲು ಶಕ್ತರಾಗುತ್ತೀರಿ: "ಇಲ್ಲ, ನಾನಿದನ್ನು ಒಪ್ಪಿಕೊಳ್ಳುತ್ತೇನೆ, ಅದನ್ನು ತಿರಸ್ಕರಿಸುತ್ತೇನೆ, ಏಕೆಂದರೆ ಅದು ಹಾನಿಯನ್ನುಂಟು ಮಾಡುತ್ತದೆ" ಮತ್ತು ನಂತರ ಕೆಲವು ವರ್ಷಗಳಾದ ನಂತರ, ಕುದುರೆಯೊಂದನ್ನು ಹತೋಟಿಯಲ್ಲಿಟ್ಟುಕೊಳ್ಳುವ ಹಾಗೆ, ನೀವು ನಿಮ್ಮನ್ನು ನಿಗ್ರಹಿಸುತ್ತೀರಿ: ನಿಮಗೆ ಇಷ್ಟವಾದ ಏನನ್ನಾದರೂ ನಿಮಗಿಷ್ಟವಾದ ರೀತಿಯಲ್ಲಿ ಕೈಕೊಳ್ಳುತ್ತೀರಿ, ಮತ್ತು ನಿಮಗಿಷ್ಟವಾದಲ್ಲಿಗೆ ಹೋಗುತ್ತೀರಿ.

ಇದು ತೊಂದರೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದೆ ಎಂದು ನನಗೆ ತೋರಿಬರುತ್ತದೆ. ಅದು ಅತ್ಯಂತ ಸ್ವಾರಸ್ಯಕರವಾದದ್ದು ಎಂದು ನಾನು ನಂಬಿದ್ದೇನೆ.

**CWM, 5/197-98** **- ಶ್ರೀಮಾತೆ**

*

ನಮ್ಮ ಜಗತ್ತಿನ ಹತ್ತಿರ ಹೆಚ್ಚು ಮನೋಹರ ರೂಪಗಳಿರುವ
ಜಗತ್ತು ಮರೆಯಲ್ಲಿಹುದು,
ಅಲ್ಲಿ ಪೃಥ್ವಿಯ ವಿರೂಪಗೊಳಿಸುವ ದೃಷ್ಟಿಯಿಂದ ಮುಸುಕಿನಲ್ಲಿರದೆ,
ಎಲ್ಲ ಆಕಾರಗಳು ಸುಂದರವಾಗಿಹವು ಮತ್ತು ಎಲ್ಲ ವಿಷಯಗಳು
ಸತ್ಯವಾಗಿಹವು.

**CWSA, 33/103** **- ಶ್ರೀ ಅರವಿಂದರು**

*

## ಏಕೈಕ ಉಪಾಯ

ನೀವು ತಿಳಿದುಕೊಳ್ಳಬಹುದಾದ ಹಾಗೆ, ಜಗತ್ತಿನ ಪ್ರಸ್ತುತ ಪರಿಸ್ಥಿತಿಗಳು ಯಾವಾಗಲೂ ಕಠಿಣವಾಗಿವೆ. ಪ್ರಕಟವಾಗಲು ಬಯಸುವ ಸತ್ಯದ ಹಾಗೂ ಪ್ರಕಾಶದ ಶಕ್ತಿಗಳು ಮತ್ತು ಬದಲಾಗಲು ಬಯಸದ ಎಲ್ಲವೂ ಇವುಗಳ ಸ್ಥಿತಿಗತಿಗಳ ನಡುವೆ ಇಡೀ ಜಗತ್ತಿನ ಹೋರಾಟವಿದೆ, ಸಂಘರ್ಷವಿದೆ; ಬದಲಾಗಲು ಬಯಸದೆ ಇದ್ದುದೆಂದರೆ ಗತಕಾಲದಲ್ಲಿ ಸ್ಥಿರಗೊಂಡದ್ದು, ಬಿರುಸಾದದ್ದು ಮತ್ತು ಹೋಗುವುದನ್ನು ತಿರಸ್ಕರಿಸುವಂತಹದು. ಸ್ವಾಭಾವಿಕವಾಗಿ ಪ್ರತಿಯೊಬ್ಬ ವ್ಯಕ್ತಿ ತನ್ನದೇ ತೊಂದರೆಗಳ ಬಗ್ಗೆ ಭಾವನೆ ತಂದುಕೊಳ್ಳುತ್ತಾನೆ, ಆ ಅಡೆತಡೆಗಳೇ ಅವನಿಗೆ ಎದುರಾಗಿವೆ.

ನಿಮಗೆ ಕೇವಲ ಒಂದು ಮಾರ್ಗವಿದೆ. ಅದು ಇಡಿಯಾದ, ಸಂಪೂರ್ಣವಾದ ಮತ್ತು ಕರಾರುರಹಿತವಾದ ಶರಣಾಗತಿ. ನಾನು ಅದಕ್ಕೆ ಕೊಡುವ ಅರ್ಥವೆಂದರೆ, ಕೇವಲ ನಿಮ್ಮ ಕ್ರಿಯೆಗಳನ್ನು, ಮಹತ್ವಾಕಾಂಕ್ಷೆಗಳನ್ನು ಬಿಟ್ಟುಕೊಡುವುದಷ್ಟೇ ಅಲ್ಲ. ಆದರೆ ನಿಮ್ಮ ಎಲ್ಲ ಭಾವನೆಗಳನ್ನು, ನೀವು ಕೈಕೊಳ್ಳುವುದೆಲ್ಲದರ ಅರ್ಥವನ್ನು, ನೀವಾಗಿರುವುದನ್ನು ಭಗವಂತನಿಗೆ ಕೊಟ್ಟುಬಿಡುವುದಾಗಿದೆ. ಹಾಗಾಗಿ ಸುತ್ತುವರಿದಿರುವ ಮಾನವ ಪ್ರತಿಕ್ರಿಯೆಗಳ ಮೇಲಿರುವ ಭಾವನೆ ತಂದುಕೊಳ್ಳುತ್ತೀರಿ ಅಷ್ಟೇ ಅಲ್ಲ ಆದರೆ ದೈವೀ ಕೃಪೆಯ ಗೋಡೆಯಿಂದ ರಕ್ಷಣೆ ಪಡೆದ ಭಾವನೆ ನಿಮಗೆ ಬರುತ್ತದೆ. ಒಮ್ಮೆ ನಿಮ್ಮಲ್ಲಿ ಆಸೆಗಳಿಲ್ಲದಿದ್ದಾಗ, ಆಸಕ್ತಿಗಳಿಲ್ಲದೆ ಇದ್ದಾಗ ಮಾನವ ಸತ್ತೆಗಳು, ಅವರು ಯಾರೇ ಆಗಿರಲಿ, ಅವರಿಂದ ಬಹುಮಾನ ಪಡೆಯುವುದಕ್ಕಾಗಿರುವ ಎಲ್ಲ ಆವಶ್ಯಕತೆಯನ್ನು ಬಿಟ್ಟುಕೊಟ್ಟಾಗ– ಪಡೆಯಲು ಯೋಗ್ಯವಾದ ಏಕೈಕ ಬಹುಮಾನ ಪರಮೋಚ್ಚನಿಂದ ಬರುವಂತಹದು ಮತ್ತು ಎಂದಿಗೂ ವಿಫಲವಾಗದಂತಹದು ಎಂಬುದನ್ನು ತಿಳಿದುಕೊಂಡು– ಒಮ್ಮೆ ನೀವು ಎಲ್ಲ ಬಾಹ್ಯ ಸತ್ತೆಗಳಿಗೆ ಹಾಗೂ ವಿಷಯಗಳಿಗೆ ಆಸಕ್ತಿಯನ್ನು ಬಿಟ್ಟುಕೊಟ್ಟಾಗ, ನೀವು ಒಮ್ಮೆಗೆ ನಿಮ್ಮ ಹೃದಯದಲ್ಲಿ ಯಾವಾಗಲೂ ನಿಮ್ಮೊಡನಿರುವ, ಈ ದೈವೀ ಸಾನ್ನಿಧ್ಯದ, ಈ ದೈವೀ ಶಕ್ತಿಯ ಹಾಗೂ ಈ ದೈವೀ ಕೃಪೆಯ ಭಾವನೆ ತಂದುಕೊಳ್ಳುತ್ತೀರಿ.

ಮತ್ತು ಅಲ್ಲಿ ಬೇರೆ ಯಾವ ಉಪಾಯವೂ ಇಲ್ಲ. ಎಲ್ಲರಿಗೂ, ಯಾವ ಅಪವಾದವಿಲ್ಲದೆ ಅದೊಂದೇ ಉಪಾಯ, ವೇದನೆಗೊಳಗಾಗುವ ಎಲ್ಲರಿಗೂ

ಹೇಳಬಹುದಾದ ವಿಷಯ ಅದೇ ಆಗಿದೆ: ಎಲ್ಲ ವೇದನೆ ಶರಣಾಗತಿ ಇಡಿಯಾಗಿಲ್ಲ ಎಂಬುದರ ಕುರುಹು. ಮತ್ತು ನಂತರ ನಿಮ್ಮಲ್ಲಿ ಏಟಿನ ಸದ್ದಾದ ಭಾವನೆ ತಂದುಕೊಂಡಾಗ, ಆ ರೀತಿಯದಾದಾಗ "ಓ, ಇದು ಕೆಟ್ಟದ್ದು" ಎಂದು ಹೇಳುವುದರ ಬದಲಾಗಿ "ನನ್ನ ಶರಣಾಗತಿ ಪರಿಪೂರ್ಣವಾಗಿಲ್ಲ" ಎಂದು ಹೇಳುತ್ತೀರಿ. ಆಗ ಅದು ಸರಿಯಾಗಿರುತ್ತದೆ. ಮತ್ತು ಆಗ ದೈವೀ ಕೃಪೆ ನಿಮಗೆ ಸಹಾಯ ಮಾಡುತ್ತಿರುವುದರ, ಮುಂದೆ ಕರೆದೊಯ್ಯುತ್ತಿರುವ ಭಾವನೆ ತಂದುಕೊಳ್ಳುತ್ತೀರಿ, ಮತ್ತು ಮುಂದೆ ಸಾಗಿ ಹೋಗುತ್ತೀರಿ. ಮತ್ತು ಒಂದು ದಿನ ನೀವು ಆ ಶಾಂತಿಯಲ್ಲಿ ಹೊರಹೊಮ್ಮುತ್ತೀರಿ. ದೈವೀ ಕೃಪೆಯಲ್ಲಿರಿಸಿದ ಗಾಢ ನಂಬಿಕೆಯಿಂದ ಬರುವ, ಅದೇ ಬಗೆಯ ಮುಗುಳ್ನಗೆಯಿಂದ ನೀವು ಎಲ್ಲ ವಿರೋಧಿ ಶಕ್ತಿಗಳಿಗೆ, ವಿರೋಧಿ ಚಲನೆಗಳಿಗೆ ಮತ್ತು ಆಕ್ರಮಣಗಳಿಗೆ, ತಪ್ಪು ತಿಳಿವಳಿಕೆಗಳಿಗೆ ಉತ್ತರ ನೀಡುತ್ತೀರಿ. ಹೊರಗೆ ಬರಲು ಮಾರ್ಗ ಅದೊಂದೇ, ಬೇರಾವುದೂ ಇಲ್ಲ.

ಈ ಜಗತ್ತು ಸಂಘರ್ಷ, ವೇದನೆ, ತೊಂದರೆ ಹಾಗೂ ಭಾರ ಇವುಗಳಿರುವ ಜಗತ್ತಾಗಿದೆ. ಇವುಗಳಿಂದ ತಯಾರಾಗಿದೆ. ಅದಿನ್ನೂ ಬದಲಾಗಿಲ್ಲ. ಬದಲಾಗುವು–ದಕ್ಕಿಂತ ಮೊದಲು ಸ್ವಲ್ಪ ಕಾಲ ತೆಗೆದುಕೊಳ್ಳುತ್ತದೆ. ಪ್ರತಿಯೊಬ್ಬನಿಗೂ ಹೊರಗೆ ಹೊರಟು ಬರುವ ಸಾಧ್ಯತೆಯಿದೆ. ಪರಮೋಚ್ಚ ದೈವೀಕೃಪೆಯ ಸಾನ್ನಿಧ್ಯದ ಮೇಲೆ ನೀವು ಒರಗಿಕೊಂಡರೆ, ಅದು ಮಾತ್ರ ಹೊರಗೆ ಬರುವುದಕ್ಕೆ ಮಾರ್ಗ: ಕಳೆದ ಎರಡು ಮೂರು ದಿನಗಳಿಂದ, ಆ ರೀತಿಯಲ್ಲಿ ಸತತ, ಅದನ್ನು ನಾನು ಹೇಳುತ್ತ ಬಂದಿದ್ದೇನೆ.

**ಪ್ರಶ್ನೆ:** *ಅಂತಹ ಒಂದು ಶಕ್ತಿಯನ್ನು ಎಲ್ಲಿಂದ ದೊರಕಿಸಬೇಕು?*

**ಶ್ರೀಮಾತೆ:** ನಿಮ್ಮಂತರಂಗದಲ್ಲಿ ದೈವೀ ಸಾನ್ನಿಧ್ಯ ನಿಮ್ಮಲ್ಲಿದೆ. ಅದು ನಿಮ್ಮೊಳಗಿದೆ. ನೀವು ಅದಕ್ಕಾಗಿ ಹೊರಗೆ ನೋಡುತ್ತೀರಿ, ಅಂತರಂಗದಲ್ಲಿ ನೋಡಿರಿ. ಅಲ್ಲಿ ದೈವೀ ಸಾನ್ನಿಧ್ಯವಿದೆ. ಬಲವನ್ನು ದೊರಕಿಸಲು ನೀವು ಇತರರ ಮೆಚ್ಚುಗೆಯನ್ನು ಬಯಸುತ್ತೀರಿ. ಅದನ್ನು ನೀವೆಂದಿಗೂ ದೊರಕಿಸುವುದಿಲ್ಲ. ಆ ಬಲ ನಿಮ್ಮೊಳಗಿದೆ. ನೀವು ಬಯಸಿದರೆ, ನಿಮಗೆ ಪರಮೋಚ್ಚ ಗುರಿ, ಪರಮೋಚ್ಚ ಪ್ರಕಾಶ, ಪರಮೋಚ್ಚ ಜ್ಞಾನ, ಪರಮೋಚ್ಚ ಪ್ರೇಮ ಎಂದು ತೋರಿಬರುವುದನ್ನು ಕುರಿತು

ಅಭೀಪ್ಸೆಪಡಬಲ್ಲಿರಿ. ಅದರೆ ಅದು ನಿಮ್ಮೊಳಗಿದೆ– ಹಾಗಿರದಿದ್ದರೆ ಅದನ್ನು ನೀವೆಂದಿಗೂ ಸಂಪರ್ಕಿಸಲಾರಿರಿ. ನೀವು ನಿಮ್ಮೊಳಗೆ ಆಳದಲ್ಲಿಳಿದು ಹೋದರೆ ಅದು ಅಲ್ಲಿರುವುದನ್ನು ಕಂಡುಕೊಳ್ಳುತ್ತೀರಿ. ಅದು, ಯಾವಾಗಲೂ, ನೇರವಾಗಿ ಮೇಲ್ಗಡೆ ಮುಖಮಾಡಿ ಪ್ರಜ್ವಲಿಸುತ್ತಿರುವ ಜ್ವಾಲೆಯಂತಿರುತ್ತದೆ.

ಆದು ಕೈಕೊಳ್ಳಲು ಅಷ್ಟೊಂದು ಕಠಿಣವಾದದ್ದೆಂದು ನಂಬುವುದು ಬೇಡ. ದೃಷ್ಟಿ ಯಾವಾಗಲೂ ಹೊರಗೆ ಹೊರಳಿಕೊಂಡಿರುವುದರಿಂದ, ನೀವು ಆ ದೈವೀ ಸಾನ್ನಿಧ್ಯದ ಬಗ್ಗೆ ಭಾವನೆ ತಂದುಕೊಳ್ಳಲಾಗುವುದಿಲ್ಲ.

ಆದರೆ ಆಧಾರಕ್ಕಾಗಿ ಹೊರಗೆ ನೋಡುವುದರ ಬದಲಾಗಿ, ನೀವು ಏಕಾಗ್ರತೆ ಕೈಕೊಂಡರೆ, ಪ್ರಾರ್ಥನೆ ಮಾಡಿದರೆ– ಆಂತರಿಕವಾಗಿ, ಪರಮೋಚ್ಚ ಜ್ಞಾನಕ್ಕೆ ಪ್ರತಿಕ್ಷಣ ಕೈಕೊಳ್ಳಬೇಕಾದುದು ಏನು, ಅದನ್ನು ಕೈಕೊಳ್ಳುವ ರೀತಿ ಎಂಬುದನ್ನು ತಿಳಿದುಕೊಳ್ಳುವುದಕ್ಕೆ, ಮತ್ತು ಪರಿಪೂರ್ಣತೆಯನ್ನು ದೊರಕಿಸುವುದಕ್ಕೆ ನೀವಿರು–ವುದೆಲ್ಲವನ್ನೂ, ಕೈಕೊಳ್ಳುವುದೆಲ್ಲವನ್ನೂ ಕೊಟ್ಟುಬಿಟ್ಟರೆ, ಅಲ್ಲಿ ಆಧಾರವಿರುವ ಭಾವನೆ ತಂದುಕೊಳ್ಳುತ್ತೀರಿ, ಅದು, ಯಾವಾಗಲೂ, ಮಾರ್ಗದರ್ಶನ ಮಾಡುತ್ತದೆ, ಮಾರ್ಗವನ್ನು ತೋರಿಸುತ್ತದೆ. ತೊಂದರೆಯೊಂದಿದ್ದರೆ, ಆಗ ಹೋರಾಡುವುದನ್ನು ಬಯಸುವುದರ ಬದಲಾಗಿ, ಅದರೊಡನೆ ವ್ಯವಹರಿಸುವುದನ್ನು ಪರಮೋಚ್ಚ ವಿವೇಕಕ್ಕೆ ಹಸ್ತಾಂತರಿಸಿರಿ– ಆ ವಿವೇಕ ಎಲ್ಲ ದುಷ್ಟಸಂಕಲ್ಪಗಳೊಂದಿಗೆ, ಎಲ್ಲ ತಪ್ಪು ತಿಳಿವಳಿಕೆಗಳೊಂದಿಗೆ, ಎಲ್ಲ ಕೆಟ್ಟ ಪ್ರತಿಕ್ರಿಯೆಗಳೊಂದಿಗೆ ವ್ಯವಹರಿಸುವುದು. ನೀವು ಸಂಪೂರ್ಣವಾಗಿ ಶರಣಾಗಿದ್ದರೆ ಅದು ಇನ್ನು ಮುಂದೆ ನಿಮಗೆ ಸಂಬಂಧಿಸಿದ್ದಾಗಿರುವುದಿಲ್ಲ, ಅದನ್ನು ಕೈಗೆತ್ತಿಕೊಂಡ ಪರಮೋಚ್ಚ ಅದರ ಬಗ್ಗೆ ಏನನ್ನು ಕೈಕೊಳ್ಳಬೇಕೆಂಬುದನ್ನು ಬೇರೆ ಯಾರಿಗಿಂತಲೂ ಹೆಚ್ಚು ಚೆನ್ನಾಗಿ ತಿಳಿದುಕೊಂಡಿರುತ್ತಾನೆ. ಹೊರಗೆ ಬರಲು ಅದೊಂದೇ ಮಾರ್ಗ. ತಿಳಿಯಿತೆ ಮಗು!

**CWM, 15/398-400** **- ಶ್ರೀಮಾತೆ**

*

ಮಾನವ ಸ್ವಭಾವದಲ್ಲಿ ಒಂದು ಬದಲಾವಣೆ ಇಲ್ಲದೆ, ಮಾನವ ಜೀವನ ನಿಜವಾಗಿ ಬದಲಾಗಲೆಂದು ಹಾರೈಸುವುದು ತರ್ಕಬಾಹಿರವಾದ, ಆಧ್ಯಾತ್ಮಿಕವಲ್ಲದ

ಪ್ರಸ್ತಾಪ; ಅದು ಸ್ವಾಭಾವಿಕವಲ್ಲದ, ನೈಜವಲ್ಲದ, ಅಸಾಧ್ಯವಾದ ಪವಾಡವಾಗಲಿ ಎಂದು ಕೇಳುವುದಾಗಿದೆ.

ಶಿಕ್ಷಣ ಮತ್ತು ಬೌದ್ಧಿಕ ತರಬೇತು ಇವುಗಳೇ ಸ್ವತಃ ಮನುಷ್ಯನನ್ನು ಬದಲು ಮಾಡಬಹುದು ಎಂದು ಯಾವುದೇ ರೀತಿಯಲ್ಲಿ ಒಮ್ಮೆ ಭರವಸೆ ತಾಳಿರಬಹುದು; ಅದು ಕೇವಲ ಮಾನವ ವ್ಯಕ್ತಿಗೆ, ಸಾಮೂಹಿಕ ಅಹಂಕಾರಕ್ಕೆ ಅದರ ಸ್ವ–ದೃಢೀಕರಣಕ್ಕಾಗಿ ಹೆಚ್ಚು ದಕ್ಷ ಯಾಂತ್ರಿಕತೆಯನ್ನು, ಹೆಚ್ಚು ಒಳ್ಳೆಯ ಮಾಹಿತಿಯನ್ನು ಒದಗಿಸಬಹುದು. ಆದರೆ ಬದಲಾಗದ ಅದೇ ಅಹಂಕಾರವನ್ನು ಹಾಗೇ ಉಳಿಸುತ್ತದೆ.

**SABCL, 22/1096, 1094** **- ಶ್ರೀ ಅರವಿಂದರು**

*

ಪ್ರಜ್ಞೆಯ ಮೂಲಭೂತ ಬದಲಾವಣೆ ಮನುಕುಲವನ್ನು, ಅದು ಮುಳುಗಿ ಹೋಗಿರುವ ಭಯಾನಕ ಅವಸ್ಥೆಯಿಂದ ರಕ್ಷಿಸಬಲ್ಲದು.

"ವ್ಯಾವಹಾರಿಕ" ಸಾಧನಗಳು ಎಂದು ಕರೆಯಲಾದ ಎಲ್ಲವೂ ಒಂದು ಬಾಲಿಶತನ, ಅದರ ಮೂಲಕ ಜನರು ತಮ್ಮನ್ನು ಕುರುಡಾಗಿಸುತ್ತಾರೆ, ಅದರಿಂದಾಗಿ ಅವರು ನಿಜವಾದ ಆವಶ್ಯಕತೆಯನ್ನು ಮತ್ತು ಏಕೈಕ ಉಪಾಯವನ್ನು ನೋಡಲಾಗದ ಹಾಗಾಗುತ್ತದೆ.

**CWM, 15/61** **- ಶ್ರೀಮಾತೆ**

*

ಶಾಂತಿ, ನಿಶ್ಚಲ ನೀರವತೆ ಹಾಗೂ ಆಸೆಗಳ ಅನುಪಸ್ಥಿತಿ ಇವುಗಳಿಂದ ಆಂತರಿಕ ಜೀವನದಲ್ಲಿರುವ ವಿಶ್ರಾಂತಿ ಸ್ಥಾಪಿತವಾಗಿರುತ್ತದೆ. ಬೇರೆ ಯಾವ ವಿಶ್ರಾಂತಿ ಇಲ್ಲ– ಏಕೆಂದರೆ ಅದಿಲ್ಲದೆ ಮನುಷ್ಯ ಅಭಿರುಚಿ ಹೊಂದಿರಲಿ ಇಲ್ಲವೆ ಹೊಂದಿರದಿರಲಿ ಯಂತ್ರ ಮುನ್ನಡೆದುಕೊಂಡು ಹೋಗುತ್ತದೆ. ಆಂತರಿಕ ಮುಕ್ತಿ ಏಕೈಕ ಉಪಾಯವಾಗಿದೆ.

**CWSA, 31/753** **- ಶ್ರೀ ಅರವಿಂದರು**

*

**ಜೀವನದ ಉದ್ದೇಶ**

ಹೌದು, ಪೃಥ್ವಿಯ ಮೇಲಿನ ಅಸ್ತಿತ್ವಕ್ಕೆ ಸಮರ್ಥನೆ ಎಂದರೆ ಮನುಷ್ಯ ಭಗವಂತನನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಪೃಥ್ವಿಯ ಮೇಲಿರುತ್ತಾನೆ.

ಈ ಕಾರಣವಿಲ್ಲದೆ ಪೃಥ್ವಿಯ ಮೇಲಿನ ಜೀವನ ದೈತ್ಯಸ್ವರೂಪದ್ದಾಗುತ್ತದೆ.

(ಮೌನ)

ಅಲ್ಲಿ ಭಗವಂತನನ್ನು ಮರಳಿ ಶೋಧಿಸುವ, ಅವನಾಗಿಬಿಡುವ, ಅವನನ್ನು ಪ್ರಕಟಿಸುವ, ಬಾಹ್ಯದಲ್ಲಿ ಅವನನ್ನು ಸಿದ್ಧಿಸಿಕೊಳ್ಳುವ ಈ ಪರಮೋಚ್ಚ ಕಾರಣವಿರದೆ ಇದ್ದರೆ, ಪೃಥ್ವಿಯ ಮೇಲಿನ ಜೀವನ ದೈತ್ಯಸ್ವರೂಪದ ಏನೋ ಒಂದಾಗುತ್ತಿತ್ತು.

ಸ್ವಾಭಾವಿಕವಾಗಿ ಜನರು ಹೆಚ್ಚು ಅಪ್ರಜ್ಞೆಯವರಾದ ಹಾಗೆ, ಇದನ್ನು ಅತಿ ಕಡಿಮೆ ರೀತಿಯಲ್ಲಿ ಅರಿತುಕೊಳ್ಳುತ್ತಾರೆ, ಏಕೆಂದರೆ ಅವರು ವಸ್ತುನಿಷ್ಠವಾಗಿ–ರಿಸುವುದಿಲ್ಲ, ಯಾಂತ್ರಿಕವಾಗಿ ರೂಢಿಯ ಪ್ರಕಾರ ಜೀವಿಸುತ್ತಾರೆ. ಈ ರೀತಿಯ ಜೀವನವನ್ನು ವಸ್ತುನಿಷ್ಠವಾಗಿರಿಸುವುದಿಲ್ಲ ಇಲ್ಲವೆ ತಮ್ಮ ಜೀವನದ ರೀತಿಯ ಬಗ್ಗೆ ಅರಿವು ತಂದುಕೊಳ್ಳುವುದಿಲ್ಲ. ಮತ್ತು ಪ್ರಜ್ಞೆ ಅಭಿವೃದ್ಧಿ ಹೊಂದಿದ ಹಾಗೆ, ಜೀವನ ಅದಿರುವಂತೆ ದೈತ್ಯ ನರಕದ ಹಾಗಿದೆ ಎಂಬುದನ್ನು ಅರಿವಿಗೆ ತಂದುಕೊಳ್ಳುತ್ತಾರೆ.

ಅದಿರುವ ಹಾಗೆ ಯಾವುದರತ್ತ ಜೀವನ ಕರೆದೊಯ್ಯುತ್ತಿದೆ ಎಂಬುದರ ಬಗ್ಗೆ ಮನುಷ್ಯ ಪ್ರಜ್ಞೆಯುಳ್ಳವನಾದಾಗ ಅವನು ಅದನ್ನು ಒಪ್ಪಿಕೊಳ್ಳಬಲ್ಲನು ಹಾಗೂ ಅರ್ಥ ಮಾಡಿಕೊಳ್ಳಬಲ್ಲನು. ಜೀವನದ ಈ ಉದ್ದೇಶ ಮಾತ್ರ ಅದನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ.

**CWM, 8/119** **- ಶ್ರೀಮಾತೆ**

*

ಮನುಷ್ಯ ತನ್ನಲ್ಲಿಯೇ ಸಂತೋಷ ಕಂಡುಕೊಳ್ಳುತ್ತಿರುವಾಗ, ಮತ್ತು ಮರೆತು ಬಿಡುತ್ತಿದ್ದಾಗ, ವಿಷಯಗಳು ಬಂದ ಹಾಗೆ ಅವುಗಳನ್ನು ತೆಗೆದುಕೊಳ್ಳುತ್ತಿದ್ದಾಗ, ಗಂಭೀರವಾಗುವುದನ್ನು ಹಾಗೂ ಜೀವನವನ್ನು ಮುಖತಃ ನೋಡುವುದನ್ನು ತಪ್ಪಿಸಿಕೊಂಡಾಗ, ಒಂದೇ ಶಬ್ದದಲ್ಲಿ ಹೇಳುವುದಾದರೆ ಮನುಷ್ಯ ಮರೆಯುವುದನ್ನು

ಅರಸುತ್ತಾನೆ, ಪರಿಹರಿಸಬೇಕಾದ ಸಮಸ್ಯೆಯಿದೆ, ಕಂಡುಹಿಡಿಯಬೇಕಾದ ಏನೋ ಒಂದಿದೆ, ನಮ್ಮ ಅಸ್ತಿತ್ವಕ್ಕೆ ಮತ್ತು ಜೀವನಕ್ಕೆ ಒಂದು ಕಾರಣವಿದೆ, ನಾವಿಲ್ಲಿ ಕಾಲಹರಣ ಮಾಡಿ ಏನನ್ನೂ ಕಲಿತುಕೊಳ್ಳದೆ, ಏನನ್ನೂ ಕೈಕೊಳ್ಳದೆ ಸಾಗಿ ಹೋಗಿ ಬಿಡುವುದಕ್ಕಾಗಿಲ್ಲ ಎಂಬುದನ್ನು ತಿಳಿದುಕೊಳ್ಳದಿದ್ದರೆ ಆಗ ಮನುಷ್ಯ ತನ್ನ ಸಮಯವನ್ನು ಹಾಳುಮಾಡುತ್ತಾನೆ, ನಮಗೆ ಕೊಡಲಾದ ಅವಕಾಶವನ್ನು ತಪ್ಪಿಸಿಕೊಳ್ಳುತ್ತಾನೆ, ಇದು–ಅನನ್ಯವಾದದ್ದು ಎಂದು ಹೇಳಲಾರೆ, ಆದರೆ ಅಸ್ತಿತ್ವವೊಂದಕ್ಕೆ ಅದ್ಭುತ ಅವಕಾಶ, ಅದು ಪ್ರಗತಿಯ ಕ್ಷೇತ್ರ, ಅದು ಶಾಶ್ವತತೆಯಲ್ಲಿ ಜೀವನದ ರಹಸ್ಯವನ್ನು ಶೋಧಿಸಲು ಒಂದು ಕ್ಷಣ; ಏಕೆಂದರೆ ಈ ಭೌತಿಕ, ಪ್ರಾಪಂಚಿಕ ಅಸ್ತಿತ್ವ ಒಂದು ಅದ್ಭುತ ಅವಕಾಶ, ಜೀವನದ ಉದ್ದೇಶವನ್ನು ಕಂಡುಕೊಳ್ಳುವುದಕ್ಕೆ ನಿಮಗೆ ಕೊಡಲಾದ ಒಂದು ಸಾಧ್ಯತೆ, ಆಳವಾದ ಸತ್ಯದತ್ತ ಮುನ್ನಡೆ ಸಾಧಿಸಲು ಒಂದು ಹೆಜ್ಜೆ, ದೈವೀ ಜೀವನದ ಸನಾತನ ಅತ್ಯಾನಂದದೊಡನೆ ಸಂಪರ್ಕ ಸಾಧಿಸಲು ಇರುವ ಈ ರಹಸ್ಯವನ್ನು ಅದು ಶೋಧಿಸುವಂತೆ ಮಾಡುವುದು.

(ಮೌನ)

ನಾನು ಈಗಾಗಲೆ ನಿಮಗೆ ಹಲವಾರು ಸಲ ಹೇಳಿದ್ದೇನೆ: ವೇದನೆ ಹಾಗೂ ನೋವನ್ನು ಅರಸುವುದು ಅಸ್ವಸ್ಥ ಮನೋಭಾವ, ಅದರಿಂದ ತಪ್ಪಿಸಿಕೊಳ್ಳಬೇಕು, ಆದರೆ ಮೇಲ್ಮೈಯ ತುಚ್ಛ ಚಲನೆಯ ಮೂಲಕ, ದಿಕ್ಚ್ಯುತಿಯ ಮೂಲಕ, ಮರೆಗುಳಿತನದ ಮೂಲಕ ಅವುಗಳಿಂದ ದೂರ ಓಡಿ ಹೋಗುವುದು ಹೇಡಿತನವಾಗಿರುತ್ತದೆ. ವೇದನೆ ಬಂದಾಗ ಅದು ನಮಗೆ ಏನೋ ಒಂದನ್ನು ಕಲಿಸಿಕೊಡಲು ಬರುತ್ತದೆ. ನಾವು ಅದನ್ನು ಎಷ್ಟು ತೀವ್ರಗತಿಯಿಂದ ಕಲಿತುಕೊಳ್ಳುತ್ತೇವೆಯೋ ಅಷ್ಟರ ಮಟ್ಟಿಗೆ ವೇದನೆಯ ಆವಶ್ಯಕತೆ ಕುಗ್ಗುತ್ತದೆ, ನಾವು ರಹಸ್ಯವನ್ನು ತಿಳಿದುಕೊಂಡಾಗ ಇನ್ನು ಮುಂದೆ ವೇದನೆ ಪಡುವುದು ಸಾಧ್ಯವಾಗುವುದಿಲ್ಲ, ಏಕೆಂದರೆ ರಹಸ್ಯ ಅದರ ತರ್ಕವನ್ನು, ಕಾರಣವನ್ನು ಮೂಲವನ್ನು, ಅದನ್ನು ದಾಟಿಕೊಂಡು ಹೋಗುವ ರೀತಿಯನ್ನು ತೆರೆದು ತೋರಿಸುತ್ತದೆ. ಆ ರಹಸ್ಯ ಅಹಂಕಾರದಿಂದ ಹೊರಹೊಮ್ಮುವುದಾಗಿರುತ್ತದೆ, ಅದರ ಸೆರೆಮನೆಯಿಂದ ಹೊರಬರುವುದಾಗಿರುತ್ತದೆ, ಭಗವಂತನೊಡನೆ ನಮ್ಮನ್ನು ಏಕವಾಗಿಸುವುದಾಗಿರುತ್ತದೆ, ಅವನಲ್ಲಿ ಮುಳುಗಿ ಹೋಗುವುದಾಗಿರುತ್ತದೆ,

ನಮ್ಮನ್ನು ಅವನಿಂದ ಪ್ರತ್ಯೇಕಗೊಳಿಸಲು ಯಾವುದಕ್ಕೂ ಅನುವು ಮಾಡಿಕೊಡದೆ ಇರುವುದಾಗಿದೆ. ಆಗ ಮನುಷ್ಯ ಒಮ್ಮೆ ಈ ರಹಸ್ಯವನ್ನು ಶೋಧಿಸಿದಾಗ ಮತ್ತು ಅದನ್ನು ತನ್ನ ಸತ್ತೆಯಲ್ಲಿ ಸಿದ್ಧಿಸಿಕೊಂಡಾಗ, ನೋವು ಅದರ ಸಮರ್ಥನೆ ಕಳೆದುಕೊಳ್ಳುತ್ತದೆ, ಮತ್ತು ವೇದನೆ ಮಾಯವಾಗುತ್ತದೆ. ಅದು ಸರ್ವ ಸಮರ್ಥ ಉಪಾಯ, ಹಾಗಿರುವುದು ಸತ್ತೆಯಲ್ಲಿ, ಆತ್ಮದಲ್ಲಿ, ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಆಳವಾದ ಭಾಗಗಳಲ್ಲಿ ಅಷ್ಟೇ ಅಲ್ಲ, ಆದರೆ ಜೀವನದಲ್ಲಿ ಮತ್ತು ದೇಹದಲ್ಲಿ ಕೂಡ ಹಾಗಿರುತ್ತದೆ.

**CWM, 9/42-43** **- ಶ್ರೀಮಾತೆ**

*

ಶ್ರೀ ಅರವಿಂದರು ಹೇಳುವುದೆಲ್ಲ ಮಾನವ ಸ್ವಭಾವದ ವಿರುದ್ಧ ಹೋರಾಡುವುದನ್ನು ಗುರಿಯಾಗಿರಿಸಿಕೊಂಡಿದೆ. ಆ ಸ್ವಭಾವದಲ್ಲಿ ಜಡತ್ವ, ಭಾರ, ಆಲಸ್ಯತನ, ಸುಲಭ ತೃಪ್ತಿಗಳು, ಎಲ್ಲ ಪ್ರಯತ್ನದ ವಿರುದ್ಧ ಹಗೆತನ, ಇವೆಲ್ಲ ಇರುತ್ತವೆ. ಜೀವನದಲ್ಲಿ ಅದೆಷ್ಟು ಸಲ ಮನುಷ್ಯ ಶಾಂತಿವಾದಿ ಜನರನ್ನು ಭೇಟಿ ಮಾಡುತ್ತಾನೆ, ಅವರು ಹೋರಾಡಲು ಹೆದರುತ್ತಾರೆ, ವಿಶ್ರಾಂತಿಯನ್ನು ಗಳಿಸುವುದಕ್ಕಿಂತ ಮೊದಲು ವಿಶ್ರಾಂತಿಯಲ್ಲಿರಲು ಆಸೆ ಪಡುತ್ತಾರೆ, ಅಲ್ಪ ಪ್ರಗತಿಯಿಂದ ತೃಪ್ತಿಪಡೆದಿರುತ್ತಾರೆ ಮತ್ತು ಅವರ ಕಲ್ಪನೆಯಲ್ಲಿ ಹಾಗೂ ಆಸೆಗಳಲ್ಲಿ ಅದನ್ನು ಸಿದ್ಧಿ ಎಂಬಂತೆ ಮಾಡುತ್ತಾರೆ, ಅದರಿಂದಾಗಿ ಅವರು ಅರ್ಧ ದಾರಿಯಲ್ಲಿ ನಿಂತುಬಿಡುವುದಕ್ಕೆ ಸಮರ್ಥನೆ ನೀಡುತ್ತಾರೆ.

ಸಾಧಾರಣ ಜೀವನದಲ್ಲಿ, ಈಗಾಗಲೆ, ಇದು ಬಹುಮಟ್ಟಿಗೆ ಸಂಭವಿಸುತ್ತದೆ. ನಿಜವಾಗಿ ಇದು ಮಧ್ಯಮ ವರ್ಗದ ಸಾಂಪ್ರದಾಯಿಕ ಜನರ (bourgeois) ಆದರ್ಶ, ಅದು ಮನುಕುಲವನ್ನು ನಿಶ್ಚೇತನಗೊಳಿಸಿದೆ ಮತ್ತು ಮನುಷ್ಯ ಈಗಿರುವ ಹಾಗೆ ಮಾಡಿದೆ. "ತರುಣನಾಗಿದ್ದಾಗ ಕಾರ್ಯಮಾಡು, ಸಂಪತ್ತನ್ನು, ಗೌರವವನ್ನು, ಸ್ಥಾನವನ್ನು ಸಂಗ್ರಹಿಸು, ದೂರದರ್ಶಿಯಾಗಿರು ಮುನ್ನರಿವುಳ್ಳವನಾಗಿರು, ಒಂದಿಷ್ಟನ್ನು ಎತ್ತಿಡು, ಮೂಲಧನವನ್ನು ಮಡಗು, ಅಧಿಕಾರಿಯಾಗು,– ಅದರಿಂದಾಗಿ ನೀನು ನಲವತ್ತು ವರ್ಷದವನಾದಾಗ "ಕುಳಿತುಕೊಳ್ಳಬಲ್ಲೆ", ನಿನ್ನ ಆದಾಯದ ಸಂತೋಷ ಪಡೆಯಬಲ್ಲೆ, ನಂತರ ಪಿಂಚಣಿ ಹಣವನ್ನು ಪಡೆಯುವೆ, ಅವರು ಹೇಳುವ ಹಾಗೆ

ಒಳ್ಳೆಯ ರೀತಿಯಲ್ಲಿ ಗಳಿಸಿದ ವಿಶ್ರಾಂತಿಯ ಸಂತೋಷ ಪಡೆ."– ಕೆಳಗೆ ಕುಳಿತುಕೊಳ್ಳುವುದು, ಮಾರ್ಗದ ಮೇಲೆ ನಿಂತುಕೊಳ್ಳುವುದು, ನಿದ್ರೆ ಮಾಡುವುದು, ಕಾಲ ಬರುವುದಕ್ಕಿಂತ ಮೊದಲು ಕೆಳಮುಖಮಾಡಿ ಗೋರಿಯತ್ತ ಸಾಗುವುದು, ಜೀವನದ ಉದ್ದೇಶವನ್ನು ಜೀವಿಸುವುದನ್ನು ನಿಲ್ಲಿಸುವುದು– ಕುಳಿತುಕೊಳ್ಳುವುದು.

ಮುಂದೆ ಸಾಗುವುದನ್ನು ಮನುಷ್ಯ ನಿಲ್ಲಿಸಿದ ತಕ್ಷಣ ಅವನು ಹಿಂದೆ ಬಿದ್ದು ಬಿಡುತ್ತಾನೆ, ಮನುಷ್ಯ ತೃಪ್ತಿಯಿಂದಿದ್ದು ಮತ್ತು ಇನ್ನು ಮುಂದೆ ಅಭೀಪ್ಸೆ ಪಡದಿದ್ದ ತತ್ಕ್ಷಣ ಅವನು ಮರಣ ಹೊಂದಲು ಪ್ರಾರಂಭಿಸುತ್ತಾನೆ. ಜೀವನ ಒಂದು ಚಲನೆ, ಅದು ಪ್ರಯತ್ನ, ಹೆಜ್ಜೆ ಇರಿಸುತ್ತ ಮುಂದೆ ಸಾಗುವುದಾಗಿದೆ, ಪರ್ವತವನ್ನು ಏರಿ ಹೋಗುವುದಾಗಿದೆ, ಹೊಸ ದಿವ್ಯಜ್ಞಾನದತ್ತ ಭವಿಷ್ಯತ್ತಿನ ಸಿದ್ಧಿಗಳತ್ತ ಏರಿ ಹೋಗುವುದಾಗಿದೆ. ವಿಶ್ರಾಂತಿಯನ್ನು ಬಯಸುವುದಕ್ಕಿಂತ ಬೇರೆ ಯಾವುದೂ ಹೆಚ್ಚು ಅಪಾಯಕಾರಿಯಾಗಿರುವುದಿಲ್ಲ. ಕ್ರಿಯೆಯಲ್ಲಿ ಪ್ರಯತ್ನದಲ್ಲಿ, ಮುನ್ನಡೆ ಇರಿಸುವುದರಲ್ಲಿ ವಿಶ್ರಾಂತಿಯನ್ನು ಕಂಡುಕೊಳ್ಳಬೇಕು, ಸಂಪೂರ್ಣ ವಿಶ್ರಾಂತಿಗಾಗಿ ಆಸೆಗಳ ಅನುಪಸ್ಥಿತಿ ಇರಬೇಕು, ಅಹಂಕಾರದ ಮೇಲೆ ಜಯ ಸಾಧಿಸಬೇಕು, ದೈವೀಕೃಪೆಯಲ್ಲಿ ಸಂಪೂರ್ಣ ವಿಶ್ವಾಸವಿರಿಸಬೇಕು.

ಪ್ರಜ್ಞೆಯನ್ನು ವಿಸ್ತಾರಗೊಳಿಸುವುದರಿಂದ, ವಿಶ್ವಂಭರಗೊಳಿಸುವುದರಿಂದ ನಿಜವಾದ ವಿಶ್ರಾಂತಿ ಬರುತ್ತದೆ. ಜಗತ್ತಿನಷ್ಟು ವಿಶಾಲವಾಗಿರಿ ಮತ್ತು ನೀವು ಯಾವಾಗಲೂ ವಿಶ್ರಾಂತಿಯಲ್ಲಿರುತ್ತೀರಿ. ಕ್ರಿಯೆಯ ನಡುಮಧ್ಯೆ, ಕದನದ, ಪ್ರಯತ್ನದ ಮಧ್ಯದಲ್ಲಿಯೇ ನೀವು ಅನಂತದ ಹಾಗೂ ಶಾಶ್ವತತೆಯ ವಿಶ್ರಾಂತಿಯನ್ನು ಅರಿವಿಗೆ ತಂದುಕೊಳ್ಳಬಹುದು.

**CWM, 9/65-66** **- ಶ್ರೀಮಾತೆ**

*

**ಪ್ರಶ್ನೆ:** *ಶ್ರೀಮಾತೆಯವರೆ, ವಾಸ್ತವದಲ್ಲಿ ಬಾಹ್ಯತೋರಿಕೆಯತ್ತ ಯೋಗಿಯ ಮನೋಭಾವ ಏನಾಗಿರುತ್ತದೆ?*

**ಶ್ರೀಮಾತೆ:** ಕುರುಡಾಗಿರುವುದರ ಬದಲಾಗಿ ಸ್ಪಷ್ಟವಾಗಿ ನೋಡಲಾಗುವುದರ ಉಪಯುಕ್ತತೆ.

ಬಾಹ್ಯ ತೋರಿಕೆಗಳಿಂದ ಇನ್ನು ಮುಂದೆ ಮೋಸ ಹೋಗದೆ ಇರುವುದರ ಉಪಯುಕ್ತತೆ.

ಅಜ್ಞಾನ ಹಾಗೂ ಮಿಥ್ಯೆ ಇವುಗಳ ಬದಲಾಗಿ ಜೀವನದ ನಿಜವಾದ ಉದ್ದೇಶವನ್ನು ತಿಳಿದುಕೊಳ್ಳಲಾಗುವುದರ ಉಪಯುಕ್ತತೆ.

**CWM, 16/392** **- ಶ್ರೀಮಾತೆ**

*

ಪ್ರಗತಿಗಾಗಿ ಜ್ಞಾನಕ್ಕಾಗಿ, ಪರಿವರ್ತನೆಗಾಗಿ, ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ದೈವೀ ಪ್ರೇಮಕ್ಕಾಗಿ, ದೈವೀ ಸತ್ಯಕ್ಕಾಗಿ ದಾಹ– ಮನುಷ್ಯ ಅದನ್ನು ಕಾಪಾಡಿಕೊಂಡು ಬಂದರೆ ಅವನು ತೀವ್ರಗತಿಯಿಂದ ಸಾಗಿ ಹೋಗುತ್ತಾನೆ, ನಿಜವಾಗಿ ದಾಹವಿರಬೇಕು, ಆವಶ್ಯಕತೆ ಇರಬೇಕು.

ಬೇರೆ ಯಾವ ಬಂಧನಗಳು ಬೇಡ– ಮುಕ್ತವಾಗಿರುವುದು.

ಒಂದು ವಿಷಯವನ್ನು ಹೊರತುಪಡಿಸಿ, ಎಂದರೆ ಅಭೀಪ್ಸೆ ಹಾಗೂ ದಾಹ ಇವುಗಳ ಹೊರತಾಗಿ ಪ್ರತಿಯೊಂದನ್ನೂ ಬದಲಿಸಲು ಯಾವಾಗಲೂ ತಯಾರಾಗಿರಬೇಕು.

ಮನುಷ್ಯನಿಗೆ ಅವಶ್ಯವಾಗಿರುವ "ದೈವೀ ಏನೋ ಒಂದು": ದೈವೀ ಪ್ರೇಮ, ದೈವೀ ಸತ್ಯ, ಪರಮೋಚ್ಚ ದೈವೀ ಪರಿಪೂರ್ಣತೆ ಇವು ಅವಶ್ಯವಾಗಿವೆ– ಮತ್ತು ಅಷ್ಟು ಸಾಕು. ಸೂತ್ರಗಳು, ಅವು ಕಡಿಮೆ ಇದ್ದಷ್ಟು ಹೆಚ್ಚು ಒಳ್ಳೆಯದಾಗುತ್ತದೆ. ಆದರೆ ಅದು: ಒಂದು ಆವಶ್ಯಕತೆ, ಅದನ್ನು ಆ ದೈವೀ ವಿಷಯ ಮಾತ್ರ ತೃಪ್ತಿಗೊಳಿಸಬಲ್ಲದು– ಬೇರೆ ಯಾವುದೂ ಅಲ್ಲ, ಅರೆಮನಸ್ಸಿನ ಕಾರ್ಯ ವಿಧಾನವಲ್ಲ, ಕೇವಲ ಅದು. ಮತ್ತು ಆಗ ನೀವು ಸಾಗಿ ಹೋಗುತ್ತೀರಿ!... ನಿಮ್ಮ ಮಾರ್ಗ ನಿಮ್ಮದಾಗಿರುತ್ತದೆ ... ಅದು ಯಾವುದೇ ಮಾರ್ಗವಾಗಿರಲಿ, ಅದು ಮಹತ್ವದ್ದಲ್ಲ.

**CWM, 11/6** **- ಶ್ರೀಮಾತೆ**

*

**ಸಾಮರಸ್ಯವಿರುವ ಸಾಮುದಾಯಿಕ ಗುಣದತ್ತ**

ಒಂದು ಕಾಲವಿತ್ತು, ಬಹಳ ದಿನಗಳ ಹಿಂದಲ್ಲ, ಆಗ ಆಧ್ಯಾತ್ಮಿಕ ಅಭೀಪ್ಸೆಯನ್ನು ನಿಶ್ಚಲ ನೀರವತೆಯತ್ತ, ನಿಷ್ಕ್ರಿಯೆಯಿಂದ ಕೂಡಿದ ಶಾಂತಿಯತ್ತ, ಎಲ್ಲ ಪ್ರಾಪಂಚಿಕ ವಿಷಯಗಳಿಂದ ಪ್ರತ್ಯೇಕವಾಗುವತ್ತ, ಸಮರದಿಂದ ತಪ್ಪಿಸಿಕೊಳ್ಳಲು, ಹೋರಾಟದಿಂದ ಮೇಲಿರಲು, ಎಲ್ಲ ಪ್ರಯತ್ನದಿಂದ ಪಾರಾಗಲು ಪಲಾಯನ ಮಾಡುವತ್ತ ಹೊರಳಿಸಲಾಗಿತ್ತು; ಅದು ಆಧ್ಯಾತ್ಮಿಕ ಶಾಂತಿಯಾಗಿತ್ತು, ಅದರಲ್ಲಿ ಎಲ್ಲ ಉದ್ವಿಗ್ನತೆ ಹೋರಾಟ ಹಾಗೂ ಪ್ರಯತ್ನ ನಿಂತು ಹೋಗುವುದರೊಂದಿಗೆ ಎಲ್ಲ ವೇದನೆ ಅದರ ಎಲ್ಲ ರೂಪಗಳಲ್ಲಿ ನಿಂತು ಹೋಗಿತ್ತು, ಮತ್ತು ಇದನ್ನು ನಿಜವಾದ ಹಾಗೂ ಏಕೈಕ ಆಧ್ಯಾತ್ಮಿಕ ಹಾಗೂ ದೈವಿಕ ಜೀವನದ ಅಭಿವ್ಯಕ್ತಿ ಎಂದು ಪರಿಗಣಿಸಲಾಗಿತ್ತು. ಅದನ್ನು ದೈವೀ ಕೃಪೆಯೆಂದು, ದೈವೀ ಸಹಾಯವೆಂದು ಹಾಗೂ ದೈವೀ ಮಧ್ಯಸ್ಥಿಕೆಯೆಂದು ಪರಿಗಣಿಸಲಾಗಿತ್ತು. ಈಗಲೂ ಕೂಡ, ತಳಮಳ, ಉದ್ವಿಗ್ನತೆ, ಅತ್ಯುದ್ವಿಗ್ನತೆ (hyper tension) ಇರುವ ಈ ಯುಗದಲ್ಲಿಯೂ ಕೂಡ ಈ ಸಾರ್ವಭೌಮ ಶಾಂತಿ ದೊರಕಿಸಬಹುದಾದ ಸಹಾಯಗಳಲ್ಲಿ ಅತ್ಯಂತ ಒಳ್ಳೆಯದು, ಅತ್ಯಂತ ಸ್ವಾಗತಾರ್ಹವಾದದ್ದು, ಜನರು ಬೇಡುವ ಹಾಗೂ ಭರವಸೆ ಇರಿಸಬಹುದಾದ ಸಾಂತ್ವನವಾಗಿದೆ. ಬಹಳಷ್ಟು ಜನರಿಗೆ ಅದಿನ್ನೂ ದೈವೀ ಮಧ್ಯಸ್ಥಿಕೆಯ ಹಾಗೂ ದೈವೀಕೃಪೆಯ ಕುರುಹು.

ವಾಸ್ತವದಲ್ಲಿ ಮನುಷ್ಯ ಏನನ್ನೇ ಸಿದ್ಧಿಸಿಕೊಳ್ಳಲು ಬಯಸಲಿ, ಅವನು ಈ ಪರಿಪೂರ್ಣ ಮತ್ತು ಬದಲಾಗದ ಶಾಂತಿಯನ್ನು ಸ್ಥಾಪಿಸುವುದರೊಂದಿಗೆ ಪ್ರಾರಂಭಿಸಬೇಕು; ಮನುಷ್ಯ ಕಾರ್ಯ ಕೈಕೊಳ್ಳುವುದಕ್ಕೆ ಆ ಆಧಾರವನ್ನು ಉಪಯೋಗಿಸಬೇಕು, ಆದರೆ ಅವನು ಪ್ರತ್ಯೇಕ, ವೈಯುಕ್ತಿಕ ಅಹಂಕಾರಯುಕ್ತ ಮುಕ್ತಿಯನ್ನು ಕುರಿತು ಕನಸು ಕಾಣದೆ ಇದ್ದರೆ, ಆ ಹಂತದಲ್ಲಿ ತಡೆದು ನಿಂತು ಬಿಡಲಾರನು. ದೈವೀ ಕೃಪೆಯ ಇನ್ನೊಂದು ಮುಖವಿದೆ, ಅದು ಪ್ರಗತಿಯ ಮುಖ, ಅದು ಎಲ್ಲ ಅಡೆತಡೆಗಳ ಮೇಲೆ ಜಯ ಸಾಧಿಸುವುದು, ಆ ಮುಖ ಮನುಕುಲವನ್ನು ಹೊಸ ಸಿದ್ಧಿಯತ್ತ ಮುನ್ನೂಕುವುದು, ಆ ಸಿದ್ಧಿ ಒಂದು ಹೊಸ ಜಗತ್ತಿನ ಬಾಗಿಲುಗಳನ್ನು ತೆರೆದಿರಿಸುವುದು ಮತ್ತು ಆಯ್ದ ಕೆಲವರು ಆ ದೈವೀ ಸಿದ್ಧಿಯ ಲಾಭ ಪಡೆಯುತ್ತಾರಷ್ಟೇ ಅಲ್ಲ, ಆದರೆ ಅವರ ಪ್ರಭಾವ, ಉದಾಹರಣೆಗಳು,

ಅವರ ಸಾಮರ್ಥ್ಯ ಮನುಕುಲಕ್ಕೆ ಹೊಸ ಹಾಗೂ ಹೆಚ್ಚು ಒಳ್ಳೆಯ ಸ್ಥಿತಿಗಳನ್ನು ತಂದುಕೊಡುವಂತಾಗುವುದು.

ಇದು ಭವಿಷ್ಯತ್ತಿನಲ್ಲಿ ಸಿದ್ಧಿಯ ಮಾರ್ಗಗಳನ್ನು ತೆರೆದಿರಿಸುವುದು, ಈಗಾಗಲೆ ಪೂರ್ವಭಾವಿಯಾಗಿ ನೋಡಲಾದ ಸಾಧ್ಯತೆಗಳು ಪ್ರಜ್ಞಾಪೂರ್ವಕವಾಗಿ ಇಲ್ಲವೆ ಅಪ್ರಜ್ಞೆಯಿಂದ ಹೊಸ ಶಕ್ತಿಗಳಿಗೆ ತೆರೆದುಕೊಂಡ ಮನುಕುಲದ ಇಡೀ ಭಾಗವನ್ನು ಉಚ್ಚತರ, ಹೆಚ್ಚು ಸಾಮರಸ್ಯವಿರುವ, ಹೆಚ್ಚು ಪರಿಪೂರ್ಣವಾದ ಜೀವನದಲ್ಲಿ ಎತ್ತಿ ಹಿಡಿಯುವವು. ವೈಯುಕ್ತಿಕ ಪರಿವರ್ತನೆ, ಯಾವಾಗಲೂ, ಸಾಧ್ಯವಾಗದೇ ಇದ್ದರೂ, ಅದಕ್ಕೆ ಅನುಮತಿ ಸಿಗದೆ ಇದ್ದರೂ ಅಲ್ಲಿ ಒಂದು ಬಗೆಯ ಸರ್ವ ಸಾಧಾರಣ ಮೇಲಕ್ಕೆತ್ತಿ ಹಿಡಿಯುವಿಕೆ ಇರುತ್ತದೆ, ಇಡಿಯಾದುದನ್ನು ಸಾಮರಸ್ಯ–ಗೊಳಿಸುವುದಿರುತ್ತದೆ, ಅದು ಹೊಸ ಕ್ರಮಬದ್ಧತೆ, ಹೊಸ ಸಾಮರಸ್ಯ ಸ್ಥಾಪಿತಗೊಳ್ಳುವಂತೆ ಮಾಡುತ್ತದೆ ಮತ್ತು ಸದ್ಯ ಇರುವ ಅವ್ಯವಸ್ಥೆ ಹಾಗೂ ಹೋರಾಟಗಳ ತಳಮಳ ಮಾಯವಾಗುವಂತೆ ಮಾಡುತ್ತದೆ, ಅದರ ಸ್ಥಾನದಲ್ಲಿ ಇಡಿಯಾದುದರ ಸಾಮರಸ್ಯವಿರುವ ಕಾರ್ಯವಿಧಾನಕ್ಕೆ ಅನುವು ಮಾಡಿಕೊಡುತ್ತದೆ.

ಅಲ್ಲಿ ಇತರ ಪರಿಣಾಮಗಳಿವೆ, ಜೀವನದಲ್ಲಿ ಮನಸ್ಸು ಸೃಷ್ಟಿಸಿದವೆಲ್ಲ–ವುಗಳನ್ನು ವಿರುದ್ಧ ರೀತಿಯಲ್ಲಿ ತೆಗೆದು ಹಾಕುವ ಪ್ರವೃತ್ತಿ ಹೊಂದಿವೆ, ಮನಸ್ಸಿನ ವಿರೂಪಗೊಳಿಸುವ ಆ ಸೃಷ್ಟಿಗಳು ಹೀಗಿವೆ: ವಿಕೃತಿಗಳು, ಕುರೂಪತನ ಮತ್ತು ವೇದನೆಯನ್ನು, ದುಃಖವನ್ನು, ನೈತಿಕ ಬಡತನವನ್ನು, ಕೊಳಕಾದ, ಜುಗುಪ್ಸೆ ತರಿಸುವ ದುಃಖವಿರುವ ಇಡೀ ಹರಹ (area)ನ್ನು ಹೊಂದಿರುವ ಇಡೀ ಮೊತ್ತ. ಇವು ಮನುಕುಲದ ಇಡೀ ಭಾಗವನ್ನು ಭಯಾನಕವಾದ ಏನೋ ಒಂದಾಗಿರುವಂತೆ ಮಾಡುತ್ತವೆ.

ಅದು ಮಾಯವಾಗಬೇಕು.

ಇದು ಮನುಕುಲವನ್ನು ಹಲವಾರು ರೀತಿಗಳಲ್ಲಿ ಪಶು ಜೀವನಕ್ಕಿಂತ ಹೆಚ್ಚು ಕೆಟ್ಟದ್ದನ್ನಾಗಿ ಮಾಡುತ್ತದೆ. ಪಶುಜೀವನದಲ್ಲಿ ಬೇರೆ ಏನೇ ಇದ್ದರೂ ಸರಳತೆ, ಸ್ವಾಭಾವಿಕ ಸ್ವಯಂಪ್ರೇರಣೆ ಮತ್ತು ಸಾಮರಸ್ಯ ಇವೆಲ್ಲ ಇರುತ್ತವೆ.

ಮನುಕುಲದ ಇಡೀ ಭಾಗದಲ್ಲಿರುವ ಇಷ್ಟೊಂದು ಕೊಳಕು ಹಾಗೂ ದುಃಖಗಳಿರುವ ವೇದನೆ ಪಶುಗಳಲ್ಲಿ ಎಂದಿಗೂ ಇರುವುದಿಲ್ಲ. ಅಹಂಕಾರದ

ಆವಶ್ಯಕತೆಗಳಿಗೆ ಪ್ರತ್ಯೇಕವಾಗಿ ಸೇವೆಸಲ್ಲಿಸುವ ಮಾನಸಿಕತೆಯ ಉಪಯೋಗವನ್ನು ವಿರೂಪಗೊಳಿಸಲಾಗಿದೆ.

ನಾವು ಇದೆಲ್ಲದರ ಮೇಲಕ್ಕೇರಿ ಹೋಗಬೇಕು, ದೈವೀ ಪ್ರಕಾಶದಲ್ಲಿ ದೈವೀ ಸಾಮರಸ್ಯದಲ್ಲಿ ಜಿಗಿದು ಹೋಗಬೇಕು ಇಲ್ಲವೆ ವಿರೂಪಗೊಂಡಿರದ, ಆರೋಗ್ಯಕರವಾದ ಪಶು ಜೀವದಲ್ಲಿ ಹಿಂದೆ ಬಿದ್ದುಬಿಡಬೇಕು.

ಆದರೆ ಯಾರನ್ನು ಮೇಲಕ್ಕೆತ್ತಿ ಹಿಡಿಯಲಾಗದೆ ಹೋಗುವುದೋ, ಯಾರು ಪ್ರಗತಿಯನ್ನು ತಿರಸ್ಕರಿಸುವರೋ ಅಂತಹರ ಮಾನಸಿಕ ಪ್ರಜ್ಞೆ ಸ್ವಯಂಚಾಲಿತವಾಗಿ, ಕೆಳ ಅಂತಸ್ತಿನಲ್ಲಿ ಹಿಂದೆ ಬಿದ್ದು ಬಿಡುವುದು.

**CWM, 9/298-99** **- ಶ್ರೀಮಾತೆ**

*

**ಸಂಬಂಧಪಟ್ಟಿರುವಿಕೆಗಳ ಆಳಾತಿ ಆಳದ ಅರ್ಥ**

ನಾಲ್ಕು ಪ್ರಧಾನ ವಿಧಾನಗಳ ಚಟುವಟಿಕೆಗಳಾದ ಭೌತಿಕ, ಪ್ರಾಣಿಕ, ಚೈತ್ಯಾತ್ಮಿಕ ಮತ್ತು ಮಾನಸಿಕ ಇವುಗಳಿಗೆ ಅನುಗುಣವಾಗಿ ಈ ಸಂಬಂಧಪಟ್ಟಿರುವಿಕೆಗಳನ್ನು ನಾಲ್ಕು ಮುಖ್ಯ ವರ್ಗಗಳನ್ನಾಗಿ ವಿಂಗಡಿಸಬಹುದು. ಅವುಗಳ ಲೀಲೆ ನಮ್ಮ ಚಟುವಟಿಕೆಯ ಪ್ರಕಟಣೆಯ ಗುಣಲಕ್ಷಣ ಹಾಗೂ ಮಾದರಿ ಇವುಗಳಿಗೆ ಅನುಗುಣವಾಗಿ ಒಂದು ಇಲ್ಲವೆ ಅನೇಕ ವರ್ಗಗಳಲ್ಲಿ ಏಕಕಾಲಕ್ಕೆ ಇಲ್ಲವೆ ಆನೇಕ ವರ್ಗಗಳಲ್ಲಿ ಇರಬಹುದು.

ನಾವು ಭೌತಿಕ ದೇಹ ಹೊಂದಿರುತ್ತೇವೆಂಬ ವಾಸ್ತವತೆಯಿಂದಾಗಿ ಭೌತಿಕ ಸ್ಪರ್ಶದ ಸಂಪರ್ಕ ನಮಗೆ ನಿರ್ಬಂಧಕವಾಗಿರುತ್ತದೆ. ನಮಗೆ ಈ ದೇಹವನ್ನು ಒದಗಿಸಿದವರೊಂದಿಗೆ ಮತ್ತು ಪ್ರಾಪಂಚಿಕವಾಗಿ ಅವರ ಮೇಲೆ ಅವಲಂಬಿಸಿ–ದವರೊಂದಿಗೆ ಅದು ಅನಿವಾರ್ಯವಾಗಿ ಆಗುತ್ತದೆ. ಇವು ರಕ್ತ ಸಂಬಂಧಿ–ಗಳೊಡನಿರುವ ಸಂಬಂಧಗಳು. ಇನ್ನು ಹತ್ತಿರದಲ್ಲಿದ್ದವರ ಜೊತೆಗೆ ಸಂಬಂಧವಿರುತ್ತದೆ; ನೆರೆಹೊರೆಯವರು, ವಾಹನಗಳಲ್ಲಿ ಪ್ರವಾಸ ಮಾಡುವಾಗ ಸಹ ಪ್ರಯಾಣಿಕರು, ರಸ್ತೆಯಲ್ಲಿ ಇರುವವರು.– (ನಾನಿಲ್ಲಿ ಹೇಳಬಹುದು– ಈ ಹೇಳಿಕೆ ಆ ಮೂರೂ ವರ್ಗಗಳಿಗೆ ಅನ್ವಯಿಸುತ್ತದೆ– ಈ ಸಂಬಂಧಪಟ್ಟಿರುವಿಕೆ ಅವಶ್ಯವಾಗಿ ಪ್ರತ್ಯೇಕ–

ವಾಗಿರುವುದಿಲ್ಲ, ಇದು ವಾಸ್ತವದಲ್ಲಿ ಅಪರೂಪಕ್ಕೆ ಕಂಡು ಬರುವಂತಹದು, ಏಕೆಂದರೆ, ನಾವು ಕ್ವಚಿತ್ತಾಗಿ ಒಂದೇ ಸ್ತರದಲ್ಲಿ ಕ್ರಿಯಾಶೀಲರಾಗಿರುತ್ತೇವೆ. ನಾನು ಹೇಳುವುದರ ಅರ್ಥವೆಂದರೆ ಭೌತಿಕ ಸ್ಪರ್ಶ ಉಳಿದ ಮೂರು ವರ್ಗದವರದು ಇರುವುದರ ಮೇಲೆ ಹೆಚ್ಚು ಪ್ರಬಲವಾಗಿರುತ್ತದೆ.)

ಪ್ರಾಣಿಕ ಸಂಪರ್ಕ ಪ್ರಚೋದನೆ ಮತ್ತು ಆಸೆಗಳ ನಡುವೆ ಆಗುತ್ತದೆ, ಅವು ಸಮಾನವಾಗಿರುತ್ತವೆ ಇಲ್ಲವೆ ಪೂರಕವಾಗಲು ಮತ್ತು ಒಂದು ಇನ್ನೊಂದನ್ನು ಉನ್ನತಗೊಳಿಸಲು ಜವಾಬ್ದಾರಿ ಹೊಂದಿರುತ್ತವೆ.

ಒಂದೆಡೆಗೆ ಸೇರಿಕೊಳ್ಳುವ ಆಧ್ಯಾತ್ಮಿಕ ಅಭೀಪ್ಸೆಗಳ ನಡುವೆ ಚೈತ್ಯಾತ್ಮಿಕ ಸಂಪರ್ಕವುಂಟಾಗುತ್ತದೆ.

ಮಾನಸಿಕ ಸಾಮರ್ಥ್ಯ ಏಕಪ್ರಕಾರದ ಇಲ್ಲವೆ ಪೂರಕ ಮಾನಸಿಕ ಸಾಮರ್ಥ್ಯಗಳಿಂದ ಹಾಗೂ ನೆಂಟಸ್ತಿಕೆಗಳಿಂದ ಬರುತ್ತದೆ.

ಸಾಮಾನ್ಯವಾಗಿ, ಒಂದು ವರ್ಗದ ಪ್ರಾಬಲ್ಯವನ್ನು ಸ್ಪಷ್ಟವಾಗಿ ಸ್ಥಾಪಿಸದೆ ಇದ್ದರೆ– ಮತ್ತು ಇದು ಸಂಭವಿಸುವುದಕ್ಕೆ ನಮ್ಮ ಸತ್ತೆಯಲ್ಲಿ ಅದನ್ನು ಸಂಘಟಿಸಲು ಅದರ ಎಲ್ಲ ಆಳದಲ್ಲಿ ಹಾಗೂ ಸಂಕೀರ್ಣತೆಯಲ್ಲಿ ಸಾಕಷ್ಟು ಕ್ರಮಬದ್ಧತೆ ಇರಬೇಕಾಗುತ್ತದೆ– ಭೌತಿಕ ಕಾರಣಕ್ಕಾಗಿ ನಮ್ಮ ಹತ್ತಿರ ಇರುವವರಿಗೆ ನಾವು ಭೌತಿಕ ಸಹಾಯವನ್ನು ಕೊಡಬೇಕು, ಅದನ್ನು ನಾವು ಕೊಡಬಲ್ಲೆವು.

ಕೆಲವೊಂದು ಅಪವಾದಗಳನ್ನು ಹೊರತುಪಡಿಸಿ, ಪ್ರಾಪಂಚಿಕ ಸಹಾಯ ನಮ್ಮ ಕುಟುಂಬದ ಸದಸ್ಯರಿಗೆ, ಇಲ್ಲವೆ ಅಕಸ್ಮಾತ್ತಾಗಿ ದಾರಿಯಲ್ಲಿ, ರೈಲ್ವೆಗಳಲ್ಲಿ, ಹಡಗುಗಳಲ್ಲಿ, ಬಸ್ಸುಗಳಲ್ಲಿ ಭೇಟಿಯಾದವರಿಗೆ ನಾವು ಕೊಡಬಹುದಾದ ಸಹಾಯಗಳಲ್ಲಿ ಅತ್ಯಂತ ಒಳ್ಳೆಯದಾಗಿರುತ್ತದೆ: ಅನಾರೋಗ್ಯಕ್ಕೆ ಇಲ್ಲವೆ ಅಪಾಯಕ್ಕೆ ಈಡಾದವರಿಗೆ ಹಣಕಾಸಿನ ನೆರವು ನೀಡಬೇಕು.

ನಮ್ಮಲ್ಲಿರುವ ಸಮಾನ ಕಲಾತ್ಮಕ ಇಲ್ಲವೆ ಇತರ ವಿಷಯಗಳಿಂದಾಗಿ ನಮ್ಮತ್ತ ಆಕರ್ಷಿತರಾದವರ ಸೂಕ್ಷ್ಮ ಪರಿಜ್ಞಾನವನ್ನು ತಿದ್ದುವುದರ ಮೂಲಕ, ಸಮತೋಲನಗೊಳಿಸುವುದರ ಮೂಲಕ, ಅವರ ಇಂದ್ರಿಯ ಚೈತನ್ಯಗಳಿಗೆ ಸರಿಯಾದ ಹರಿವು ಕೊಡುವುದರ ಮೂಲಕ ಅದಕ್ಕೆ ಸಹಾಯ ನೀಡಬೇಕು.

ಪ್ರಗತಿಗಾಗಿ ಏಕರೂಪದ ಅಭೀಪ್ಸೆಯಿಂದ ನಮ್ಮ ಸಂಪರ್ಕದಲ್ಲಿ ಬರುವಂತೆ ತರಲಾದವರಿಗೆ ನಮ್ಮ ಉದಾಹರಣೆಯ ಮೂಲಕ, ಮಾರ್ಗವನ್ನು ತೋರಿಸಿ ಕೊಡುವುದರ ಮೂಲಕ, ನಮ್ಮ ಪ್ರೇಮದ ಮೂಲಕ, ಅವರ ಮಾರ್ಗವನ್ನು ಸುಗಮಗೊಳಿಸುವುದರ ಮೂಲಕ ನಾವು ಅವರಿಗೆ ಸಹಾಯ ಮಾಡಬಲ್ಲೆವು.

ಕೊನೆಯದಾಗಿ, ನಮ್ಮ ಬುದ್ಧಿಮತ್ತೆಯ ಪ್ರಕಾಶ, ಮಾನಸಿಕ ನೆಂಟಸ್ತಿಕೆಯ ಪರಿಣಾಮವಾಗಿ ನಮ್ಮ ಹತ್ತಿರ ಬರುವವರಿಗಾಗಿ ಪ್ರಕಾಶಿಸಲು ಅನುವು ಮಾಡಿಕೊಡಬೇಕು, ಅದರಿಂದಾಗಿ, ಸಾಧ್ಯವಾದರೆ, ನಾವು ಅವರ ಯೋಚನೆಯ ಕ್ಷೇತ್ರವನ್ನು ವಿಸ್ತರಿಸಬಹುದು ಮತ್ತು ಅವರ ಆದರ್ಶವನ್ನು ಪ್ರಭುದ್ಧಗೊಳಿಸಬಹುದು.

ಈ ಬೇರೆ, ಬೇರೆ ನೆಂಟಸ್ತಿಕೆಗಳು ತಮ್ಮನ್ನು ಬಾಹ್ಯದಲ್ಲಿ, ಸ್ವಲ್ಪ ಕಡಿಮೆ ಮತ್ತು ಕೆಲವೊಮ್ಮೆ ಸೂಕ್ಷ್ಮ ವ್ಯತ್ಯಾಸಗಳೊಂದಿಗೆ ನಮಗೆ ಎದುರಾಗುವ ಸಮಾಗಮಗಳಲ್ಲಿ ತಮ್ಮನ್ನು ಅಭಿವ್ಯಕ್ತಗೊಳಿಸುತ್ತವೆ, ಮತ್ತು ಏಕೆಂದರೆ ನಮ್ಮ ಅಂತರ್ದೃಷ್ಟಿ ಅಪರೂಪಕ್ಕೆ ಸಾಕಷ್ಟು ಜಾಗ್ರತಗೊಂಡಿರುವುದರಿಂದ ಈ ಅಲ್ಪ ವ್ಯತ್ಯಾಸಗಳು ಬಹಳಷ್ಟು ಸಲ ನಮ್ಮಿಂದ ನುಣುಚಿಕೊಳ್ಳುತ್ತವೆ.

ಆದರೆ ನಮ್ಮ ಕ್ರಿಯೆಯನ್ನು ಸರಿಯಾದ ಮಾರ್ಗದಲ್ಲಿ ನಿರ್ದೇಶಿಸಲು ಮತ್ತು ನಮ್ಮ ಸಹಚರರತ್ತ ತಪ್ಪಾದ ಮನೋಭಾವಗಳ ಕಾರಣಗಳನ್ನು ಸಾಧ್ಯವಿದ್ದಷ್ಟು ಕುಗ್ಗಿಸಲು ನಾವು ಅತ್ಯಂತ ಹೆಚ್ಚಿನ ಕಾಳಜಿಯಿಂದ ನಮ್ಮ ಸಂಪರ್ಕಕ್ಕಾಗಿರುವ ಅನೇಕ ಕಾರಣಗಳನ್ನು ಪರಿಶೋಧಿಸಬೇಕು, ಮತ್ತು ಅವರಿಗೆ ನಮ್ಮನ್ನು ಕಟ್ಟಿಹಾಕುವ ನೆಂಟಸ್ತಿಕೆಗಳ ವರ್ಗವನ್ನು ಕಂಡುಹಿಡಿಯಬೇಕು.

ಅಸ್ತಿತ್ವದ ನಾಲ್ಕು ಬಗೆಯಲ್ಲಿ ಅತಿಕಡಿಮೆ ಅಪರೂಪದ ಜನರು ಒಂದೇ ವೇಳೆಗೆ ನಮಗೆ ಹತ್ತಿರವಾಗಿರುತ್ತಾರೆ. ಶಬ್ದದ ಆಳಾತಿ ಆಳದ ಅರ್ಥದಲ್ಲಿ ಇವರು ಮಿತ್ರರಾಗಿರುತ್ತಾರೆ. ಅವರ ಮೇಲೆ ನಮ್ಮ ಕ್ರಿಯೆಗಳು ಅವುಗಳ ಅತ್ಯಂತ ಸಮಗ್ರ, ಅತ್ಯಂತ ಪರಿಪೂರ್ಣವಾಗಿ ಸಹಾಯಕ, ಮತ್ತು ಪರೋಪಕಾರದ ಪರಿಣಾಮ ಬೀರಬಲ್ಲವು. ನಾವೆಂದಿಗೂ ಮರೆಯಬಾರದ ವಿಷಯವೆಂದರೆ ಇಬ್ಬರು ಮಾನವ ಜೀವಿಗಳ ಮಧ್ಯೆ, ಅವರನ್ನು ಕಟ್ಟಿಹಾಕುವ ನೆಂಟಸ್ತಿಕೆಗಳ ಸಂಖ್ಯೆಗಳು ಹಾಗೂ ಆಳಾತಿ ಆಳದ ಸತ್ತೆಯ ಸ್ಥಿತಿಗಳು ಇವುಗಳ ಲೀಲೆಯ ಮೇಲೆ ಸಂಪರ್ಕದ ಅವಧಿ ಅವಲಂಬಿಸಿರುತ್ತದೆ. ತಮ್ಮಲ್ಲಿಯೇ ಇರುವ ಸನಾತನ ಸಾರದೊಂದಿಗೆ

ಹಾಗೂ ವಸ್ತು–ವಿಷಯಗಳೊಂದಿಗೆ ಆಪ್ತ ಸಂಭಾಷಣೆ ಮಾಡುವವರು ಶಾಶ್ವತವಾಗಿ ಏಕತ್ರಗೊಳ್ಳಬಲ್ಲರು. ಈ ಜಗತ್ತಿನಲ್ಲಿ ಇಲ್ಲವೆ ಬೇರೆ ಲೋಕಗಳಲ್ಲಿ ಎಲ್ಲ ಕಾಲದಲ್ಲಿ ಹತ್ತಿರದ ಇಲ್ಲವೆ ದೂರದ ಮಿತ್ರರಾಗಿರುವವರೋ ಅವರು ಮಾತ್ರ ಎಂದೆಂದಿಗೂ ಮಿತ್ರರಾಗಿರುತ್ತಾರೆ. ಮತ್ತು ನಾವು ಈ ಮಿತ್ರರನ್ನು ಭೇಟಿ ಮಾಡುತ್ತೇವೋ ಇಲ್ಲವೋ ಎಂಬುದು ಮೊದಲು ನಮ್ಮಂತರಂಗದಲ್ಲಿ ನಾವು ಮೊದಲು ನಮ್ಮ ಸತ್ತೆಯ ಅಜ್ಞಾತ ಆಳಗಳಲ್ಲಿ ಅನುಭವಕ್ಕೆ ತಂದುಕೊಳ್ಳುವ ಸಮಾಗಮದ ಮೇಲೆ ಅವಲಂಬಿಸಿರುತ್ತದೆ. ಅಲ್ಲದೆ ಈ ಭೇಟಿ ಸಂಭವಿಸಿದಾಗ ನಮ್ಮ ಇಡೀ ಮನೋಭಾವ ಪರಿವರ್ತನೆಗೊಳಗಾಗುತ್ತದೆ.

ಆಂತರಿಕ ದೇವ ಪ್ರಮುಖಳೊಂದಿಗೆ ಏಕಗೊಂಡಾಗ ನಾವು ಆಳದಲ್ಲಿ ಎಲ್ಲರೊಡನೆ ಏಕಗೊಳ್ಳುತ್ತೇವೆ ಮತ್ತು ಅವಳ ಮೂಲಕ ಹಾಗೂ ಅವಳಿಂದಲೇ ನಾವು ಎಲ್ಲ ಸತ್ತೆಗಳ ಸಂಪರ್ಕದಲ್ಲಿ ಬರಬೇಕು, ನಂತರ ಎಲ್ಲ ಆಕರ್ಷಣೆ ಹಾಗೂ ವಿಕರ್ಷಣೆ–ಗಳಿಂದ, ಇಚ್ಛೆ ಹಾಗೂ ಅನಿಚ್ಛೆಗಳಿಂದ ಮುಕ್ತರಾಗಿ ಅವಳಿಗೆ ಹತ್ತಿರವಾದದ್ದಕ್ಕೆ ಹತ್ತಿರವಾಗಿರುತ್ತೇವೆ ಮತ್ತು ದೂರವಿರುವುದಕ್ಕೆ ನಾವು ದೂರವಾಗಿರುತ್ತೇವೆ.

ಹೀಗೆ ನಾವು ಇತರರ ಮಧ್ಯೆ ಯಾವಾಗಲೂ ಹೆಚ್ಚು ಹೆಚ್ಚಾಗಿ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸಮಗ್ರ ಕ್ರಿಯೆಯ ದೈವೀ ಉದಾಹರಣೆಯಾಗಬೇಕು, ದೈವೀ ಜೀವನದ ಮಾರ್ಗದ ಮೇಲೆ ಪ್ರವೇಶಿಸಲು ಅವರಿಗೆ ಒಂದು ಅವಕಾಶ ಒದಗಿಸಬೇಕು ಎಂಬುದನ್ನು ಕಲಿತುಕೊಳ್ಳುತ್ತೇವೆ.

**CWM, 2/71-73** **- ಶ್ರೀಮಾತೆ**

*

ಮನುಷ್ಯ ತನ್ನ ಸ್ವಭಾವದ ಎಲ್ಲ ಅವಸ್ಥೆಗಳಲ್ಲಿ ಸರ್ವಸಮರ್ಥ ಯಜಮಾನ–ನಾಗಿದ್ದಾನೆ ಎಂದು ಹೇಳಬಹುದು. ಆದರೆ ಅದಾಗಲು ಅವನು ಮರೆತುಬಿಟ್ಟಿದ್ದಾನೆ.

ಅವನ ಸಹಜ ಸ್ಥಿತಿ ಸರ್ವ ಸಮರ್ಥನಾಗಿರುವುದಾಗಿದೆ– ಅವನು ಇದಾಗಿರಲು ಮರೆತುಬಿಟ್ಟ.

ಸಹಜವಾಗಿ ಉತ್ಕ್ರಾಂತಿ ವಕ್ರದಲ್ಲಿ ಮನುಷ್ಯ ತನ್ನ ಸರ್ವ ಸಾಮರ್ಥ್ಯವನ್ನು ಮರೆಯುವುದು ಅವಶ್ಯವಾಗಿತ್ತು, ಏಕೆಂದರೆ ಅದು ಅವನಲ್ಲಿ ಗರ್ವವನ್ನು,

ಜಂಬವನ್ನು ಉಬ್ಬಿಸಿತ್ತು, ಹಾಗಾಗಿ ಅವನು ಸಂಪೂರ್ಣವಾಗಿ ವಿಕೃತನಾಗಿದ್ದ; ಬಹಳಷ್ಟು ವಿಷಯಗಳು ಅವನಿಗಿಂತ ಹೆಚ್ಚು ಬಲಿಷ್ಠವಾಗಿದ್ದವು ಮತ್ತು ಸರ್ವಸಮರ್ಥವಾಗಿದ್ದವು ಎಂಬುದರ ಭಾವನೆಯನ್ನು ಅವನು ತಂದುಕೊಳ್ಳುವಂತೆ ಮಾಡಬೇಕಾಗಿತ್ತು, ಆದರೆ ಸಾರದಲ್ಲಿ ಇದು ಸತ್ಯವಲ್ಲ. ಅದು ಆ ವಕ್ರದ ಪ್ರಗತಿಗಾಗಿ ಒಂದು ಆವಶ್ಯಕತೆ ಅಷ್ಟೇ.

ಮನುಷ್ಯ ಸಂಭಾವ್ಯತಃ ಒಬ್ಬ ದೇವನಾಗಿದ್ದಾನೆ, ಅವನು ತಾನೇ, ನಿಜವಾಗಿ, ಒಬ್ಬ ದೇವನಾಗಿದ್ದೇನೆಂದು ನಂಬಿದ್ದ. ಪೃಥ್ವಿಯ ಮೇಲೆ ತೆವಳುತ್ತಿರುವ ಬಡ ಕ್ರಿಮಿಯೊಂದಕ್ಕಿಂತ ಹೆಚ್ಚಿನವನೇನೂ ಅಲ್ಲ ಎಂಬುದನ್ನು ಕಲಿತುಕೊಳ್ಳುವುದು ಅವನಿಗೆ ಅವಶ್ಯವಾಗಿದೆ; ಹೀಗೆ ಅರ್ಥ ಮಾಡಿಕೊಳ್ಳದೆ ಇರುವವರೆಗೆ, ಕನಿಷ್ಠ ಪಕ್ಷ ಭಾವನೆಗೆ ತಂದುಕೊಳ್ಳುವವರೆಗೆ ಜೀವನ ಎಲ್ಲ ರೀತಿಯಿಂದ ಕೆರೆದು ತೆಗೆದು ಹಾಕಿತು. ಆದರೆ ಅವನು ಸರಿಯಾದ ಮನಸ್ಥಿತಿಯನ್ನು ಹೊಂದಿದ ಕೂಡಲೆ, ಅವನು ಸಂಭಾವ್ಯತಃ ದೇವನಾಗಿರುವೆನೆಂಬುದನ್ನು ತಿಳಿದುಕೊಳ್ಳುತ್ತಾನೆ. ಕೇವಲ ಅವನು ಇದಾಗಬೇಕು, ಎಂದರೆ ಇದಲ್ಲದರ ಮೇಲೆ ಜಯ ಸಾಧಿಸಬೇಕು.

ದೇವರುಗಳ ಜೊತೆಗಿರುವ ಈ ಸಂಬಂಧ ಅತ್ಯಂತ ಸ್ವಾರಸ್ಯಕರವಾಗಿದೆ,... ಈ ದೈವೀ ಸತ್ತೆಗಳ ಸಾಮರ್ಥ್ಯ, ಸೌಂದರ್ಯ ಹಾಗೂ ಸಿದ್ಧಿಗಳು ಇವುಗಳಿಂದ ದಿಗ್ಭ್ರಮೆಗೊಳಗಾಗಿ ನಿಂತುಕೊಂಡು ಇವುಗಳ ಪ್ರಶಂಸೆ ಮಾಡುತ್ತ ತನ್ನನ್ನು ಕಳೆದುಕೊಳ್ಳುವ ಮನುಷ್ಯ ಅವರ ಗುಲಾಮನಾಗಿರುತ್ತಾನೆ. ಆದರೆ ಇವು ಅವನಿಗೆ ಪರಮೋಚ್ಚನ ಸತ್ತೆ ಇರುವುದರ ಭಿನ್ನ ರೀತಿಗಳು ಮತ್ತು ಅದಕ್ಕಿಂತ ಹೆಚ್ಚಿನವೇನಲ್ಲ ಮತ್ತು ತಾನೇ ಸ್ವತಃ ಇನ್ನೂ ಬೇರೆ ರೀತಿಯಲ್ಲಿರುವ ತಾನಾಗಬೇಕಾದ ಪರಮೋಚ್ಚನ ಸತ್ತೆ ಎಂದಾದಾಗ ಅವನು ಇನ್ನು ಮುಂದೆ ಅವರ ಗುಲಾಮನಾಗಿರುವುದಿಲ್ಲ.

**CWM, 11/38-39** **- ಶ್ರೀಮಾತೆ**

*

**ನಿಜವಾದ ಆವಶ್ಯಕತೆ**

ನೀವು ಭಗವಂತನೆಡೆಗೆ ಹೊರಳಿ, ಅವನಲ್ಲಿ ಪೂರ್ತಿ ವಿಶ್ವಾಸವನ್ನಿರಿಸಿ ಅವನ ಬಳಿ ಬೇಡಿದಾಗ ನಿಮಗೆ ಅವಶ್ಯವಾದದ್ದು ದೊರಕುತ್ತದೆ – ಅವಶ್ಯವಾಗಿ

ನಿಮಗೆ ಏನು ಬೇಕು ಎಂದು ನೀವು ಕಲ್ಪನೆ ಮಾಡಿಕೊಂಡ ರೀತಿಯಲ್ಲಿ ಅಲ್ಲ, ಆದರೆ ನಿಜವಾಗಿ ನಿಮಗೆ ಅವಶ್ಯವಾಗಿರುವುದನ್ನು ದೊರಕಿಸುತ್ತೀರಿ. ಆದರೆ, ಅದಕ್ಕಾಗಿ ನೀವು ಅವನ ಬಳಿ ಬೇಡಬೇಕು.

ನೀವು, ಆ ಪ್ರಯೋಗವನ್ನು ನಿಷ್ಕಪಟತನದಿಂದ ಕೈಕೊಳ್ಳಬೇಕು, ನೀವು ಅದನ್ನು ಎಲ್ಲ ಬಗೆಯ ಬಾಹ್ಯ ಸಾಧನಗಳ ಮೂಲಕ ಪಡೆಯುವ ಸಾಹಸ ಮಾಡಬಾರದು ಮತ್ತು ನಂತರ ಅದನ್ನು ಬೇಡದೆಯೆ ಭಗವಂತ ಕೊಡುತ್ತಾನೆ ಎಂದು ನಿರೀಕ್ಷಿಸಬಾರದು, ನಿಜವಾಗಿ ನಿಮಗೆ ಯಾರಾದರೂ ಏನೋ ಒಂದನ್ನು ಕೊಡಲಿ ಎಂದು ಬಯಸಿದಾಗ ಅದನ್ನು ಅವರ ಬಳಿ ಬೇಡುತ್ತೀರಿ, ಅಲ್ಲವೆ? ಭಗವಂತನನ್ನು ಅದಕ್ಕಾಗಿ ನೀವು ಕೇಳದೆ ಅದನ್ನು ನಿಮಗೆ ಕೊಡಲಿ ಎಂದು ನಿರೀಕ್ಷಿಸುವುದೇಕೆ? ಸಾಮಾನ್ಯ ಪ್ರಜ್ಞೆಯಲ್ಲಿ ಅ ಚಲನೆ ಖಂಡಿತವಾಗಿ ವಿರುದ್ಧವಾದದ್ದು.

ನೀವು ಏನೋ ಒಂದನ್ನು ಭಾವಿಸಿಕೊಳ್ಳುತ್ತೀರಿ ಮತ್ತು ಹೇಳುತ್ತೀರಿ: "ನನಗೆ ಇದು ಅವಶ್ಯವಿದೆ, ನನಗೆ ಈ ಸಂಬಂಧಪಟ್ಟಿರುವಿಕೆ ಅವಶ್ಯವಿದೆ. ನನಗೆ ಈ ಮಮತೆ ಅವಶ್ಯವಿದೆ, ನನಗೆ ಈ ಜ್ಞಾನದ ಆವಶ್ಯಕತೆ ಇದೆ, ಇತ್ಯಾದಿ. ಸರಿ ಭಗವಂತ ಅದನ್ನು ನನಗೆ ಕೊಡಬೇಕು, ಹಾಗಿರದಿದ್ದರೆ ಅವನು ಭಗವಂತನೇ ಅಲ್ಲ." ಎಂದರೆ ನೀವು ಸಮಸ್ಯೆಯನ್ನು ಸಂಪೂರ್ಣವಾಗಿ ತಿರುಗು ಮುರುಗಾಗಿರಿಸುತ್ತೀರಿ.

ಮೊಟ್ಟ ಮೊದಲು ನೀವು ಹೇಳುತ್ತೀರಿ: "ನನಗೆ ಅವಶ್ಯವಿದೆ". ನಿಮಗೆ ಅದು ನಿಜವಾಗಿ ಅವಶ್ಯವಾಗಿದೆಯೆ, ಇಲ್ಲವೆ ಅದು ನಿಮ್ಮಲ್ಲಿರುವ ಕೇವಲ ಒಂದು ಭಾವನೆಯೆ ಇಲ್ಲವೆ ಆಸೆಯ ಇಲ್ಲವೆ ಅತ್ಯಂತ ಅಜ್ಞಾನದ ಚಲನೆಯೆ ಎಂಬುದನ್ನು ನೀವು ತಿಳಿದುಕೊಂಡಿರುತ್ತೀರಾ?

ಮೊದಲನೆಯ ಸಂಗತಿ: ನಿಮಗೆ ಅದರ ಬಗ್ಗೆ ಏನೂ ತಿಳಿದಿಲ್ಲ.

ಎರಡನೆಯ ಸಂಗತಿ: ಅದು ನಿಖರವಾಗಿ, ಭಗವಂತನಿಗೆ "ನನಗೆ ಇದರ ಆವಶ್ಯಕತೆ ಇದೆ" ಎಂದು ಹೇಳುತ್ತ ನಿಮ್ಮ ಸಂಕಲ್ಪವನ್ನು ಅವನ ಮೇಲೆ ಹೇರಲು ಬಯಸುತ್ತೀರಿ ಮತ್ತು ನಂತರ "ಅದನ್ನು ನನಗೆ ಕೊಡು" ಎಂದು ಅವನಲ್ಲಿ ಬೇಡುವುದಿಲ್ಲ. ನೀವು ಹೇಳುತ್ತೀರಿ: "ನನಗೆ ಇದು ಅವಶ್ಯವಿದೆ. ಹಾಗಾಗಿ ಅದು ನನಗೆ ಅವಶ್ಯವಾಗಿರುವುದರಿಂದ ಅದು ನನ್ನ ಬಳಿ ಬರಲೇಬೇಕು. ಅದು

ಸಹಜವಾಗಿ, ಸ್ವಯಂ ಪ್ರೇರಣೆಯಿಂದ ಬರಬೇಕು; ನನಗೆ ಅವಶ್ಯವಿದ್ದ ಎಲ್ಲವನ್ನೂ ಕೊಡಬೇಕಾದುದು ಭಗವಂತನ ಕಾರ್ಯ."

ಆದರೆ ಅದು ಹೀಗೂ ಆಗುವ ಸಂಭವವಿದೆ: ನಿಜವಾಗಿ ಯಾವುದು ಅವಶ್ಯವಿದೆ ಎಂಬುದು ನಿಮಗೆ ತಿಳಿದಿರುವುದಿಲ್ಲ, ಮತ್ತು ಅದು ಕೇವಲ ಒಂದು ಭ್ರಮೆಯಾಗಿರಬಹುದು ಮತ್ತು ಸತ್ಯವಾದ ಸಂಗತಿ ಆಗಿರಲಿಕ್ಕಿಲ್ಲ, ಅದೂ ಅಲ್ಲದೆ ನೀವು ಅದನ್ನು ನಿಮ್ಮ ಸುತ್ತಲಿರುವ ಜೀವನದಿಂದ ಬೇಡುತ್ತೀರಿ, ಭಗವಂತನತ್ತ ಹೊರಳುವುದಿಲ್ಲ, ನಿಮ್ಮ ಹಾಗೂ ಅವನ ನಡುವೆ ಸಂಬಂಧಪಟ್ಟಿರುವಿಕೆಯನ್ನು ಸೃಷ್ಟಿಸುವುದಿಲ್ಲ, ಅವನನ್ನು ಕುರಿತು ಯೋಚಿಸುವುದಿಲ್ಲ ಇಲ್ಲವೆ ಅವನತ್ತ ಕನಿಷ್ಠ ಪಕ್ಷ ನಿಮ್ಮ ಮನೋಭಾವದಲ್ಲಿ ಒಂದಿಷ್ಟು ನಿಷ್ಕಾಪಟ್ಯವನ್ನಿರಿಸಿಕೊಂಡು ಹೊರಳುವುದಿಲ್ಲ, ಆಗ ಅವನಿಂದ ನೀವು ಏನನ್ನೂ ಕೇಳುವುದಿಲ್ಲವಾದ್ದರಿಂದ ನಿಮಗೆ ಏನನ್ನಾದರೂ ಕೊಡಲು ಅವನಿಗೆ ಯಾವ ಕಾರಣವೂ ಇರುವುದಿಲ್ಲ.

ಆದರೆ, ಅವನಲ್ಲಿ ನೀವು ಬೇಡಿಕೊಂಡರೆ, ಅವನು ಭಗವಂತನಾಗಿ–ರುವುದರಿಂದ ನಿಮಗೇನು ಅವಶ್ಯವಿದೆ ಎಂಬುದನ್ನು ನಿಮಗಿಂತ ಸ್ವಲ್ಪ ಹೆಚ್ಚು ಒಳ್ಳೆಯ ರೀತಿಯಲ್ಲಿ ತಿಳಿದುಕೊಂಡಿರುತ್ತಾನೆ, ನಿಮಗೆ ಅವಶ್ಯವಾಗಿರುವುದನ್ನು ಅವನು ಕೊಡುತ್ತಾನೆ. ಇಲ್ಲವಾದರೆ ನೀವು ಒತ್ತಾಯ ಪಡಿಸಿದರೆ ಮತ್ತು ನಿಮ್ಮ ಸಂಕಲ್ಪವನ್ನು ಹೇರ ಬಯಸಿದರೆ ನೀವು ಬಯಸಿದ್ದನ್ನು ನಿಮಗೆ ಕೊಡಬಹುದು, ಅದು ನಿಮ್ಮಲ್ಲಿ ಜ್ಞಾನೋದಯವನ್ನುಂಟು ಮಾಡುವುದಕ್ಕಿರುತ್ತದೆ ಮತ್ತು ನೀವು ನಿಮ್ಮ ತಪ್ಪಿನ ಬಗ್ಗೆ ಅರಿವುಳ್ಳವರಾಗುವಂತೆ ಮಾಡುವುದಕ್ಕಿರುತ್ತದೆ, ಮತ್ತು ಅದು ನಿಮಗೆ ಅವಶ್ಯವಾದ ವಿಷಯವಾಗಿರುವುದಿಲ್ಲ. ಮತ್ತು ನಂತರ ನೀವು ಪ್ರತಿಭಟಿಸಲು ಪ್ರಾರಂಭಿಸುತ್ತೀರಿ– ನೀವು ವೈಯುಕ್ತಿಕವಾಗಿ ಹಾಗೆ ಮಾಡುತ್ತೀರಿ ಎಂಬ ಅರ್ಥದಲ್ಲಿ ಹೇಳುತ್ತಿಲ್ಲ, ಎಲ್ಲ ಮಾನವ ಸತ್ತೆಗಳನ್ನು ಕುರಿತು ಹೇಳುತ್ತಿದ್ದೇನೆ– ಮತ್ತು ನೀವು ಹೇಳುತ್ತೀರಿ, "ಭಗವಂತ ನನಗೆ ಹಾನಿಯಾಗುವಂತಹದನ್ನು ಏಕೆ ಕೊಟ್ಟ?" ನೀವೇ ಅದನ್ನು ಬೇಡಿರುತ್ತೀರಿ ಎಂಬುದನ್ನು ಸಂಪೂರ್ಣವಾಗಿ ಮರೆತಿರುತ್ತೀರಿ!

ಎರಡೂ ಸಂದರ್ಭಗಳಲ್ಲಿ ನೀವು ಒಂದೇ ರೀತಿಯಲ್ಲಿ ಪ್ರಕಟಿಸುತ್ತೀರಿ. ನೀವು ಬೇಡಿದ್ದನ್ನು ಅವನು ಕೊಟ್ಟರೆ ಮತ್ತು ನಂತರ ಅದು ನಿಮಗೆ ಒಳ್ಳೆಯದನ್ನು

ಉಂಟು ಮಾಡುವುದಕ್ಕಿಂತ ಹೆಚ್ಚಾಗಿ ಹಾನಿಯನ್ನುಂಟು ಮಾಡುತ್ತದೆ, ನೀವು ಪ್ರತಿಭಟಿಸುತ್ತೀರಿ. ಮತ್ತು ಪುನಃ, ಅವನು ಅದನ್ನು ಕೊಡದಿದ್ದರೆ, ಆಗ ಕೂಡ ಪ್ರತಿಭಟಿಸುತ್ತೀರಿ: "ಏನು! ಭಗವಂತನಿಗೆ ಅದು ನನಗೆ ಅವಶ್ಯವಾಗಿದೆ ಎಂದು ಹೇಳಿದ್ದೆ ಮತ್ತು ಅವನು ಅದನ್ನು ನನಗೆ ಕೊಡುತ್ತಿಲ್ಲ."

ಎರಡೂ ಸಂದರ್ಭಗಳಲ್ಲಿ ನೀವು ಪ್ರತಿಭಟಿಸುತ್ತೀರಿ, ಮತ್ತು ಬಡ ಭಗವಂತ ದೂಷಣೆಗೆ ಒಳಗಾಗಿರುತ್ತಾನೆ. ಕೇವಲ ಅದೆಲ್ಲದರ ಬದಲಾಗಿ ನೀವು ನಿಮ್ಮಂತರಂಗದಲ್ಲಿ ಸರಳವಾಗಿ ಒಂದು ಅಭೀಪ್ಸೆಯನ್ನು, ತತ್ ಕಂಡುಕೊಳ್ಳಲು ಒಂದು ಗಾಢ ಅತ್ಯುತ್ಸಾಹದ ಆವಶ್ಯಕತೆಯನ್ನು ಹೊಂದಿರಬೇಕು, ಅ ತತ್ ನಿಮ್ಮ ಸತ್ತೆಯ ದೈವೀ ಸತ್ಯವೆಂದು, ಎಲ್ಲ ವಸ್ತು–ವಿಷಯಗಳ ದೈವೀ ಮೂಲವೆಂದು, ಪರಮೋಚ್ಚ ದೈವೀ ಒಳ್ಳೆಯದೆಂದು, ನಾವು ಬಯಸುವ ಎಲ್ಲದಕ್ಕೂ ಹಾಗೂ ಎಲ್ಲ ಸಮಸ್ಯೆಗಳಿಗೂ ದೈವೀ ಉತ್ತರವೆಂದು ಹೆಚ್ಚು ಕಡಿಮೆ ಸ್ಪಷ್ಟವಾಗಿ ಕಲ್ಪಿಸಿಕೊಳ್ಳುತ್ತೀರಿ; ನಿಮ್ಮಲ್ಲಿ ಈ ಗಾಢ ಆವಶ್ಯಕತೆ ಇದ್ದರೆ, ಅದನ್ನು ಸಿದ್ಧಿಸಿಕೊಳ್ಳಲು ನೀವು ಅಭೀಪ್ಸೆಪಟ್ಟರೆ, ಇನ್ನು ಮುಂದೆ ನೀವು ಭಗವಂತನಿಗೆ "ಇದನ್ನು ನನಗೆ ಕೊಡು, ಅದನ್ನು ನನಗೆ ಕೊಡು" ಇಲ್ಲವೆ "ನನಗೆ ಇದು ಅವಶ್ಯವಿದೆ ನಾನು ಅದನ್ನು ಹೊಂದಲೇಬೇಕು" ಎಂದು ಹೇಳುವುದಿಲ್ಲ. ನೀವು ಭಗವಂತನಿಗೆ ಹೇಳುತ್ತೀರಿ: "ನನಗೆ ಅವಶ್ಯವಾಗಿರುವುದನ್ನು ಮಾಡು, ನನ್ನನ್ನು ನನ್ನ ಸತ್ತೆಯತ್ತ ಕರೆದುಕೊಂಡು ಹೋಗು. ನಿನ್ನ ಪರಮೋಚ್ಚ ವಿವೇಕ ನನಗೆ ಅವಶ್ಯವಾದದ್ದು ಯಾವುದು ಎಂದು ನೋಡುತ್ತದೆಯೋ ಅದನ್ನು ನನಗೆ ನೀಡು."

ಮತ್ತು ನಂತರ ತಪ್ಪು ತಿಳಿವಳಿಕೆಗೆ ನೀವು ಒಳಗಾಗುವುದಿಲ್ಲ ಎಂಬುದರ ಬಗ್ಗೆ ಹಾಗೂ ಭಗವಂತ ನಿಮಗೆ ಹಾನಿಯನ್ನುಂಟು ಮಾಡುವಂತಹದನ್ನು ಕೊಡುವುದಿಲ್ಲ ಎಂಬುದರ ಬಗ್ಗೆ ನಿಶ್ಚಿತತೆಯಿಂದಿರುವಿರಿ. ಅಲ್ಲಿ ಇನ್ನೂ ಹೆಚ್ಚು ಉಚ್ಚತರವಾದ ಹೆಜ್ಜೆ ಇದೆ, ಆದರೆ ಅದರೊಂದಿಗೆ ಪ್ರಾರಂಭಿಸುವುದು ಸ್ವಲ್ಪ ಕಠಿಣವಾದದ್ದು.

"ನನಗೆ ಇದು ಅವಶ್ಯವಿದೆ, ಅದನ್ನು ನನಗೆ ನೀಡು" ಎಂದು ಭಗವಂತನಿಗೆ ಹೇಳುವುದಕ್ಕಿಂತ ಮೊದಲನೆಯದು ಈಗಾಗಲೆ ಹೆಚ್ಚು ಸತ್ಯವಾದ ಸಮೀಪಿಸುವಿಕೆ–ಯಾಗಿರುತ್ತದೆ. ಏಕೆಂದರೆ ಅತಿ ಕಡಿಮೆ ಜನರು, ನಿಜವಾಗಿ, ತಮಗೆ ಯಾವುದರ

ಆವಶ್ಯಕತೆ ಇದೆ ಎಂಬುದನ್ನು ತಿಳಿದುಕೊಂಡಿರುತ್ತಾರೆ. ತಿಳಿದುಕೊಂಡವರ ಸಂಖ್ಯೆ ಅತಿ ಕಡಿಮೆ. ಅದಕ್ಕೆ ಪ್ರಮಾಣವೆಂದರೆ ಅವರು ಯಾವಾಗಲೂ ತಮ್ಮ ಆಸೆಗಳ ನೆರವೇರಿಕೆಯ ಬೆನ್ನು ಹತ್ತಿರುತ್ತಾರೆ, ಅವರ ಎಲ್ಲ ಪ್ರಯತ್ನ ಅದರ ಮೇಲೆ ಬಾಗಿಕೊಂಡಿರುತ್ತದೆ, ಮತ್ತು ಅವರ ಆಸೆಗಳಲ್ಲಿ ಒಂದು ನೆರವೇರಿಕೆ ಕಂಡುಕೊಂಡ ಪ್ರತಿಯೊಂದು ಸಲ, ಅವರು ನಿರಾಶರಾಗುತ್ತಾರೆ. ಮತ್ತು ಇನ್ನೊಂದು ಆಸೆಯತ್ತ ಸಾಗಿ ಹೋಗುತ್ತಾರೆ.

**CWM, 8/122-23** **- ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 5ನೇ ಸೆಪ್ಟೆಂಬರ್ 2017ರ ಮಂಗಳವಾರದಂದು ಮಿರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ತತ್ಸಂಬಂಧ ಮಧ್ಯಾಹ್ನ 3.30 ರಿಂದ 3.45ರ ವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ನಂತರ ಶಾಲಾ ಆಡಳಿತ ಮಂಡಳಿಯವರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಿಕ್ಷಕ ವೃಂದದವರು ಮತ್ತು ಶ್ರೀ ಅರವಿಂದೋ ಸಂಕೀರ್ಣದ ಸಿಬ್ಬಂದಿ ವರ್ಗದವರು ಭಾಗವಹಿಸಿದರು. ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ವಂದನಾರ್ಪಣೆ–ಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಒಪ್ಪೋಲೆ :**
**ಅಖಿಲ ಭಾರತ ಪತ್ರಿಕೆ, ಸೆಪ್ಟಂಬರ 2017**

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| 2 | 11 | ಸಾರಮಸ್ಯದ | ಸಾಮರಸ್ಯದ |
| 7 | 13 | ಅಚಂಲನಾಗಿ | ಅಚಂಚಲನಾಗಿ |



*There is a meaning in each curve and line.*

- Sri Aurobindo

**RNI No. 22511/1971**
No. of Pages **68 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.